ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 11 ಭಾನುವಾರ 2022

ಸಂಪುಟ: 43 | ಸಂಚಿಕೆ: 234 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕಾರಿಗೆ ಲಾರಿ ಡಿಕ್ಕಿ
ನವವಿವಾಹಿತ ಅರಣ್ಯಾಧಿಕಾರಿ ದುರಂತ ಸಾವು

ಕೊಳ್ಳೇಗಾಲ, ಡಿ.10-ಕೊಳ್ಳೇಗಾಲ ಬಫರ್‌ಜೋನ್ ಎಆರ್‌ಎಫ್‌ಓ ಮಹಾನಂದ(30) ಅವರು ಶನಿವಾರ ಮಧ್ಯಾಹ್ನ ಊಟಿ-ನೀಲಗಿರಿ ರಸ್ತೆಯಲ್ಲಿ ನಡೆದ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಇವರು ಪ್ರಯಾಣಿಸುತ್ತಿದ್ದ ಕಾರಿಗೆ ಎದುರಿಂದ ಬಂದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಮಹಾನಂದ ಸ್ಥಳದಲ್ಲೇ ಸಾವನ್ನಪ್ಪಿದ್ದು, ಅವರ ಪತ್ನಿ ಲಾವಣ್ಯ, ಅಕ್ಕ ರಾಜೇಶ್ವರಿ ಮತ್ತು ಮಾವ ವಸಂತಕುಮಾರ್ ತೀವ್ರ ಗಾಯಗಳಾಗಿ ಕೊಯಮತ್ತೂರಿನ ಆಸ್ಪತ್ರೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೊಳ್ಳೇಗಾಲದ ಮುತ್ತಾಪುರ ಹುಂಡಿಯವರಾದ ಮಹಾನಂದ ನ.10ರಂದು ಟಗರಪುರದ ಲಾವಣ್ಯ ಅವರನ್ನು ವಿವಾಹವಾಗಿದ್ದರು. ಇವರ ಅಂತ್ಯಕ್ರಿಯೆ ನಾಳೆ (ಡಿ.11) ಸಂಜೆ 4 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ.



ಬಸವ ಬಳಗಗಳ ಒಕ್ಕೂಟದ ರಜತ ಮಹೋತ್ಸವ 'ಬೆಳ್ಳಿ ಬೆಳಗು' ಕಾರ್ಯಕ್ರಮಕ್ಕೆ ಸಿಎಂ ಚಾಲನೆ

ಬಸವಣ್ಣ ಬಯಸಿದ ಸಮಾನತೆ ಸಮಾಜ ಇನ್ನೂ ನಿರ್ಮಾಣವಾಗಲಿಲ್ಲ...

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಷಾದ
- ಅವರು ಕಂಡ ಆ ಕನಸು ನನಸು ಮಾಡಲು ಪಣ ತೊಡೋಣ
- ಆರ್ಥಿಕ ಸಮಾನತೆ ಸಾಧಿಸದೆ ಸಮಸಮಾಜ ಸಾಧ್ಯವಿಲ್ಲ

ಮೈಸೂರು,ಡಿ.10(ಎಂಟಿವೈ)- ಕ್ರಾಂತಿಕಾರಿ ಬಸವಣ್ಣನವರು ಪ್ರತಿಪಾದಿಸಿದ್ದ ಸಮಾನತೆಯ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರು ಸಂಕಲ್ಪ ಮಾಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದ ಆವರಣದಲ್ಲಿ ಶನಿವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ, ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ 'ಬಸವ ಬಳಗಗಳ ಒಕ್ಕೂಟ'ದ ರಜತ ಮಹೋತ್ಸವದ 'ಬೆಳ್ಳಿ ಬೆಳಗು' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣ ಯಾವುದೇ ಸಮುದಾಯಕ್ಕೆ ಸೀಮಿತವಾದವರಲ್ಲ. ಅವರು ಆದರ್ಶ ಪುರುಷ. ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಅವರು, ಜಗತ್ತಿಗೆ ಜ್ಯೋತಿಯಾಗಿ ಬೆಳಗಿದ ಮಹಾನ್ ಪುರುಷರು. ತಮ್ಮ ಬದುಕು, ಉಸಿರು ತ್ಯಾಗ ಮಾಡಿ, ನಮಗೆಲ್ಲರಿಗೂ ಅಣ್ಣನಾದರು. ಕಾಯಕ ತತ್ವವನ್ನು ಪ್ರತಿಪಾದಿಸಿ, ಅದರ ಮಹತ್ವವನ್ನು ತಿಳಿಸಿಕೊಟ್ಟವರು. ಅವರ ವಿಚಾರಧಾರೆಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ ಎಂದು ಹೇಳುತ್ತೇವೆ. ಆದರೆ ಬಸವಾದಿ ಶರಣರು, ಬಸವಣ್ಣನವರ ಭಕ್ತರು, ಬಸವಣ್ಣನವರ ಆಶಯಗಳು ಈಡೇರಿದೆಯಾ ಎಂದು ಅವಲೋಕನ ಮಾಡಿಕೊಳ್ಳಬೇಕಿದೆ ಎಂದು ಅಭಿಪ್ರಾಯಪಟ್ಟರು.

ಅಸಮಾನತೆ ತಾಂಡವವಾಡುತ್ತಿದೆ: 12ನೇ ಶತಮಾನದಲ್ಲಿಯೇ ಬಸವಣ್ಣನವರು ಅಸಮಾನತೆ, ಲಿಂಗ ತಾರತಮ್ಯ, ಮೂಢನಂಬಿಕೆ ತೊಡೆದು ಹಾಕಲು ಹೋರಾಟ ನಡೆಸಿದ್ದರು. ಆದರೆ ಅವರ ಕಾಲಘಟ್ಟದಲ್ಲಿ ಅದು ಸಾಧ್ಯವಾಗಿಲ್ಲ. ಅವರು ಯಾವುದರ ವಿರುದ್ಧ ಹೋರಾಟ ಮಾಡಿದ್ದರೋ, ಆ ಪದ್ಧತಿಗಳೆಲ್ಲಾ ಇನ್ನೂ ಜೀವಂತವಾಗಿ ಉಳಿದುಕೊಂಡು ಬಂದಿವೆ. ಸಮಾಜದಲ್ಲಿ ಇನ್ನೂ ಅಸಮಾನತೆ, ಲಿಂಗ ತಾರತಮ್ಯ ತಾಂಡವವಾಡುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳು ನಡೆಯುತ್ತಲೇ ಇವೆ. ಹೀಗಾಗಿ ಬಸವಣ್ಣನವರ ವಿಚಾರಗಳ ಬಗ್ಗೆ ಮಾತನಾಡುವ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಸವಣ್ಣನವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಾವೆಷ್ಟು ನಡೆದಿದ್ದೇವೆ. ಬಸವಣ್ಣನವರ ವಚನಗಳಲ್ಲಿರುವ ವಿಚಾರಗಳನ್ನು ಬದುಕಿನಲ್ಲಿ ನಾವೆಷ್ಟು ಅಳವಡಿಸಿಕೊಂಡು, ಅದನ್ನು ಕಟ್ಟುನಿಟ್ಟಾಗಿ ಆಚರಿಸಿಕೊಂಡು ಬಂದಿದ್ದೇವೆ. ಬಸವಣ್ಣನವರ ಹೆಜ್ಜೆಗಳಲ್ಲಿ ನಾವೆಷ್ಟು ಹೆಜ್ಜೆಗಳನ್ನು ಹಾಕಿದ್ದೇವೆ. ಅವರು ಹಾಕಿಕೊಟ್ಟಿರುವ ▶ 8ನೇ ಪುಟಕ್ಕೆ



ಕಾಂಗ್ರೆಸ್ ಸೋಲುವುದು ಖಚಿತ: ಸಿದ್ದರಾಮಯ್ಯ ಸೋತು ಮನೆಗೆ ಹೋಗುವುದು ನಿಶ್ಚಿತ

ಮೈಸೂರು, ಡಿ.10(ಎಂಟಿವೈ)- ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲುವುದು ಖಚಿತ. ಹಾಗೆಯೇ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಹ ಸೋತು ಮನೆಗೆ ಹೋಗುವುದು ನಿಶ್ಚಿತ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜಕೀಯ ಭವಿಷ್ಯ ನುಡಿದಿದ್ದಾರೆ. ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಯಲ್ಲಿ ನಾವು ಸುಮ್ಮನೇ ಕುಳಿತರೂ ಗೆಲ್ಲುತ್ತೇವೆ ಎಂಬ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈ ಸಲ ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡರು ಮನೆಗೆ ಹೋಗುವ ಕಾರ್ಯಕ್ರಮ ಇದೆ. ಅದಕ್ಕಾಗಿ ಅವರು ಆ ರೀತಿ ಹೇಳುತ್ತಿದ್ದಾರೆ ಎಂದು ಕಿಡಿಕಾರಿದರು. ಗುಜರಾತ್ ಚುನಾವಣೆ ನಂತರ ಸಹಜವಾಗಿಯೇ ಕರ್ನಾಟಕದ ಚುನಾವಣೆ ಬಗ್ಗೆ ಚರ್ಚೆಯಾಗುತ್ತಿದೆ. ಪಕ್ಷದಿಂದ ಈಗಾಗಲೇ ಜನಸಂಪರ್ಕ ಮತ್ತು ಸಂಘಟನೆಯನ್ನು ಮಾಡಿಕೊಂಡು ಬರಲಾಗುತ್ತಿದೆ. ಚುನಾವಣೆ ಸಮೀಪವಾಗುತ್ತಿರುವುದರಿಂದ ಈ ಚಟುವಟಿಕೆಯನ್ನು ಇನ್ನಷ್ಟು ಹೆಚ್ಚು ಮಾಡಬೇಕು. ಅಲ್ಲದೆ, ▶ 8ನೇ ಪುಟಕ್ಕೆ

ಬಹುರೂಪಿ ರಾಷ್ಟ್ರೀಯ ರಂಗೋತ್ಸವಕ್ಕೆ ಸಿಎಂ ವಿಧ್ಯುಕ್ತ ಚಾಲನೆ



ಮೈಸೂರು, ಡಿ.10(ಎಸ್‌ಬಿಡಿ)- ಭಾರತೀಯತೆಯ ಆತ್ಮವನ್ನು ಪ್ರತಿಬಿಂಬಿಸುವ ಪ್ರಯೋಗಗಳ ಮೂಲಕ ರಂಗಾಯಣ ಹೊಸ ಆಯಾಮದೊಂದಿಗೆ ಸಮಾಜ ಸುಧಾರಣೆಯಲ್ಲಿ ಯಶಸ್ವಿಯಾಗಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶಿಸಿದರು.

ಮೈಸೂರು ರಂಗಾಯಣದಲ್ಲಿ 'ಭಾರತೀಯತೆ' ಶೀರ್ಷಿಕೆಯಡಿ ಆಯೋಜಿಸಿರುವ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ವನ್ನು ಕಲಾಮಂದಿರದಲ್ಲಿ ಶನಿವಾರ ವಿಧ್ಯುಕ್ತವಾಗಿ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನಲ್ಲಿ ಸಂಸ್ಕೃತಿ, ಸಂಸ್ಕಾರ, ಪರಂಪರೆ, ಇತಿಹಾಸ, ಸಾಹಿತ್ಯ ಹೀಗೆ ಎಲ್ಲದರಲ್ಲೂ ಭಾರತ ವಿಭಿನ್ನವಾಗಿದೆ. ಈ ಶ್ರೇಷ್ಠತೆಯನ್ನು ಪ್ರತಿಬಿಂಬಿಸುವ ಭಾರತೀಯತೆ ಶೀರ್ಷಿಕೆಯಡಿ ಈ ಬಾರಿ ಬಹುರೂಪಿ ಉತ್ಸವ ನಡೆಯುತ್ತಿದೆ. ಇಲ್ಲಿ ಭಾರತೀಯತೆಯ ಆತ್ಮದ ದರ್ಶನವಾಗಬೇಕು. ಪರಿಣಾಮ ಹೆಚ್ಚು ಜನ ಭಾಗಿಯಾಗುವುದರೊಂದಿಗೆ ರಂಗಾಯಣಕ್ಕೂ ಹೊಸತನ, ಹೊಸ ಆಯಾಮ ದೊರಕುತ್ತದೆ. ಇಲ್ಲಿಗೆ ಬರುವ ಜನ ಹೊಸ ವಿಚಾರಗಳನ್ನು ಅನುಭವಿಸುತ್ತಾರೆ. ಈ ಮೂಲಕ ಸಮಾಜದಲ್ಲಿ ಬದಲಾವಣೆ ತರುವಲ್ಲಿ ಯಶಸ್ವಿಯಾಗಬಹುದು ಎಂದು ಸಲಹೆ ನೀಡಿದರು.

ಮೈಸೂರಿಗೆ ಸಾಂಸ್ಕೃತಿಕ ರಾಜಧಾನಿ ಎಂಬ ಹೆಗ್ಗಳಿಕೆ ಇರುವಂತೆ ಇಲ್ಲಿನ ರಂಗಾಯಣಕ್ಕೂ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಕಲೆಯ ▶ 8ನೇ ಪುಟಕ್ಕೆ

ಏನೇ ಸಮಸ್ಯೆ, ತೊಡಕುಗಳಿದ್ದರೂ ಹಿಮ್ಮೆಟ್ಟಿಸಿ ಹೊಸ ಆಯಾಮದೊಂದಿಗೆ ಮುನ್ನಡೆಯಿರಿ...

ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪರಿಗೆ ಮುಖ್ಯಮಂತ್ರಿ ಅಭಯ

ವಿಭಿನ್ನ ರೀತಿಯಲ್ಲಿ ಉದ್ಘಾಟನೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವೇದಿಕೆ ಮೂಲೆಯಲ್ಲಿದ್ದ ಪರದೆಯೊಂದನ್ನು ಸರಿಸುತ್ತಿದ್ದಂತೆ ಭಾರತ ಭೂಪಟ ಅನಾವರಣವಾಯಿತು. ಅದರೊಳಗಿಂದ ವಿವಿಧ ರಾಜ್ಯಗಳ ಸಂಸ್ಕೃತಿ, ಪರಂಪರೆ ಬಿಂಬಿಸುವ ಪೋಷಾಕು ಧರಿಸಿದ್ದ ಪುಟ್ಟ ಮಕ್ಕಳು ಗುಲಾಬಿ ಹಿಡಿದು ಒಬ್ಬೊಬ್ಬರಾಗಿ ಹೊರಬಂದು ಮುಖ್ಯಮಂತ್ರಿಗಳಿಗೆ ನೀಡಿದರು. ಇದರಿಂದ ಭಾವುಕರಾದ ಸಿಎಂ ನಗುಮೊಗದಿಂದ ಮಕ್ಕಳಿಂದ ಹೂವು ಸ್ವೀಕರಿಸಿ ಖುಷಿಪಟ್ಟರು. ಸಿಎಂ ತೆರಳಿದ ನಂತರ ಆ ಮಕ್ಕಳೊಂದಿಗೆ ನಟ ರಮೇಶ್ ಅರವಿಂದ್ ಫೋಟೋ ತೆಗೆಸಿಕೊಂಡು ವಿಶಿಷ್ಟ ಪರಿಕಲ್ಪನೆಯೊಂದಿಗೆ ಬಹುರೂಪಿ ಉದ್ಘಾಟಿಸಿದ್ದನ್ನು ಬಣ್ಣಿಸಿದರು.

ವೈಚಾರಿಕ ಸಂಘರ್ಷ ಇರಬೇಕು...

"ಈ ರೀತಿಯ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳ ಹಲವು ಸಂಸ್ಥೆಗಳು ಸೇರಿದಂತೆ ಎಲ್ಲಾ ಕಡೆ ವೈಚಾರಿಕ ಸಂಘರ್ಷಗಳು ನಡೆಯುತ್ತವೆ. ನನ್ನ ಪ್ರಕಾರ ಇಂತಹ ಸಂಘರ್ಷಗಳು ನಡೆಯಬೇಕು. ಇಲ್ಲವಾದರೆ ಅಲ್ಲಿ ಹೊಸ ವಿಚಾರಗಳಿಗೆ ಜಾಗವಿರುವುದಿಲ್ಲ. ಒಂದು ವಿಚಾರವನ್ನು ನಿಷ್ಕರ್ಷವಾಗಿ ನೋಡಿದಾಗಲೇ ಅದರ ಒಳತಿರುಳು ಹಾಗೂ ಉದ್ದೇಶಗಳು ತಿಳಿಯು ತ್ತವೆ. ಹಾಗಾಗಿ ಏನೇ ಸಮಸ್ಯೆಗಳು, ತೊಡಕುಗಳಿದ್ದರೂ ಅದನ್ನೆಲ್ಲಾ ಹಿಂದಿಟ್ಟು ಹೊಸ ಚಿಂತನೆ, ಆಯಾಮದೊಂದಿಗೆ ಮುನ್ನಡೆಯಬೇಕೆಂದು ಅಡ್ಡಂಡ ಕಾರ್ಯಪ್ಪ ನವರಿಗೆ ಹೇಳಲಿಚ್ಛಿಸುತ್ತೇನೆ. ನೀವು ಮತ್ತು ರಂಗಾಯಣ, ಎಲ್ಲರನ್ನು ಒಳಗೊಂಡಂತಹ ಭವ್ಯ ಭವಿಷ್ಯವಿರುವ ನಮ್ಮ ದೇಶ, ನಾಡು ಹಾಗೂ ಹೊಸಜನಾಂಗಕ್ಕೆ ಮುಖ್ಯವಾಹಿನಿ ಆಗಬೇಕೆಂಬುದು ನನ್ನ ಆಶಯ. ಸಂಘರ್ಷ ಗಳಿಂದ ನಾವು ಪಾಠ ಕಲಿತಿರುತ್ತೇವೆ. ಅದರಲ್ಲಿ ಬದುಕಿಗೆ ಹತ್ತಿರವಾದ ಸತ್ಯವಾದ ವಿಚಾರಗಳನ್ನು ಯುವ ಪೀಳಿಗೆಗೆ ಧಾರೆ ಎರೆಯುವ ಕಾರ್ಯವನ್ನು ರಂಗಾಯಣ ಮಾಡಬೇಕು.

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಮೈಸೂರಲ್ಲಿ ಡಿ.24ರಿಂದ 10 ದಿನ ಮಾಗಿ ಉತ್ಸವ

- ಅರಮನೆ ಆವರಣದಲ್ಲಿ ಫಲಪುಷ್ಪ ಪ್ರದರ್ಶನ
- ನಾನಾ ಪುಷ್ಪಗಳಿಂದ ಕಾಶಿ ವಿಶ್ವನಾಥ ದೇವಾಲಯ ಮಾದರಿ ಚಿತ್ರ ರಚನೆ
- ವಿದ್ಯುದ್ದೀಪಾಲಂಕಾರ, ಪೊಲೀಸ್ ಬ್ಯಾಂಡ್, ಶಬ್ದ ರಹಿತ ಪಟಾಕಿ ಸಿಡಿತ
- ಮಾಗಿ ಉತ್ಸವಕ್ಕೆ ಜಿಲ್ಲಾಧಿಕಾರಿಗಳಿಂದ 50 ಲಕ್ಷ ರೂ. ಅನುದಾನ ಕೋರಿಕೆ
- ಪ್ರವಾಸಿಗರನ್ನು ಆಕರ್ಷಿಸಲು ಮೈಸೂರು ಜಿಲ್ಲಾಡಳಿತದಿಂದ ಉತ್ಸವಕ್ಕೆ ಸಿದ್ಧತೆ



ಮೈಸೂರು, ಡಿ. 10(ಆರ್‌ಕೆ)- ಕೊರೊನಾ ಭೀತಿ ದೂರವಾಗುತ್ತಿದ್ದಂತೆಯೇ ಮೈಸೂರಿನತ್ತ ಪ್ರವಾಸಿಗರ ಆಕರ್ಷಣೆಗೆ ಮಾಗಿ ಉತ್ಸವ ನಡೆಸಲು ಜಿಲ್ಲಾಡಳಿತ ಸಕಲ ಸಿದ್ಧತೆ ನಡೆಸುತ್ತಿದೆ. ಡಿಸೆಂಬರ್ 24ರಿಂದ 2023ರ ಜನವರಿ 2ರವರೆಗೆ ಅರಮನೆ ಆವರಣದಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದ್ದು, ಡಿಸೆಂಬರ್ 24ರಂದು ಸಂಜೆ 5 ಗಂಟೆಗೆ ಕಾರ್ಯಕ್ರಮವನ್ನು ಉದ್ಘಾಟಿಸಲಾಗುವುದು. ವರ್ಷಾಂತ್ಯದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಮಾಗಿ ಉತ್ಸವ ಆಯೋಜಿಸಲಾಗುತ್ತಿದ್ದು, ಅದಕ್ಕಾಗಿ 50 ಲಕ್ಷ ರೂ. ಅನುದಾನ ಕೋರಿ ಪ್ರವಾಸೋದ್ಯಮ ಇಲಾಖೆ ▶ 3ನೇ ಪುಟಕ್ಕೆ

ಪೆರಿಫೆರಲ್ ರಸ್ತೆ ಡಿಪಿಆರ್‌ಗೆ ಜನವರಿ ಮೊದಲ ವಾರ ಟೆಂಡರ್

ಎನ್‌ಹೆಚ್‌ಎಐ ಯೋಜನಾ ನಿರ್ದೇಶಕ ಡಿ.ಬಿ.ಶ್ರೀಧರ್ ಸಲಹೆಯಂತೆ ಕರುಡು ಪ್ರಸ್ತಾವನೆ ಸಿದ್ಧಪಡಿಸಲು ಮುಡಾ ಅಧಿಕಾರಿಗಳಿಗೆ ಸಂಸದ ಪ್ರತಾಪ್ ಸಿಂಹ ಸೂಚನೆ

ಮೈಸೂರು, ಡಿ.10(ಆರ್‌ಕೆ)-ಬಹು ನಿರೀಕ್ಷಿತ ಮೈಸೂರಿನ ಪೆರಿಫೆರಲ್ ರಸ್ತೆ (ಬಾಹ್ಯ ರಸ್ತೆ) ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು 2023ರ ಜನವರಿ ಮೊದಲ ವಾರ ಟೆಂಡರ್ ಕರೆಯಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಸಿದ್ಧತೆ ನಡೆಸಿದೆ.

ಈ ಕುರಿತು ಇಂದು ಮುಡಾ ಕಚೇರಿಯಲ್ಲಿ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಹಾಗೂ ಎನ್‌ಹೆಚ್‌ಎಐ ಯೋಜನಾ ನಿರ್ದೇಶಕ ಡಿ.ಬಿ.ಶ್ರೀಧರ್ ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಂಸದ ಪ್ರತಾಪ್ ಸಿಂಹ, 103 ರಿಂದ 105 ಕಿ.ಮೀ. ಉದ್ದದ ಪೆರಿಫೆರಲ್ ರಸ್ತೆಯನ್ನು ಹಸಿರು ಕ್ಷೇತ್ರ (ಗ್ರೀನ್ ಫೀಲ್ಡ್)ವಾಗಿ ರೂಪಿಸಲು ಅಗತ್ಯ ಮೂಲ ಸೌಲಭ್ಯಗಳೊಂದಿಗೆ ಹೊಸ ಪ್ರಸ್ತಾವನೆ ಸಲ್ಲಿಸುವಂತೆ ಸಲಹೆ ನೀಡಿದರು. ಕೈಗಾರಿಕೆಗಳು, ಟೌನ್‌ಶಿಪ್‌ಗಳು, ಕಾರ್ಮಿಕರ ಸಂಚಾರ, ಸರಕು ಸಾಗಣೆ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಿ, ಪ್ರಸ್ತುತ ಇರುವ ರಸ್ತೆಗಳನ್ನು ಬಳಸಿಕೊಂಡು ಕೆರೆ, ಪುರಾತನ ದೇವಸ್ಥಾನಗಳು, ಗ್ರಾಮಗಳಿಗೆ ತೊಂದರೆಯಾಗದಂತೆ ಬಾಹ್ಯ ರಸ್ತೆ ವಿನ್ಯಾಸಗೊಳಿಸಬೇಕಾಗಿದೆ. ಮುಂದಿನ 50-60 ವರ್ಷಗಳಲ್ಲಿ ಮೈಸೂರು ನಗರ ಬೆಳೆದು, ಅಂದಿನ ವಾಹನ ಸಂಚಾರ ದಟ್ಟಣೆಯನ್ನು ಗಮನದಲ್ಲಿರಿಸಿಕೊಂಡು ಈ ಯೋಜನೆ ಸಿದ್ಧಪಡಿಸಿ ಎಂದು ಸಂಸದರು ತಿಳಿಸಿದರು. ಆದಷ್ಟು ಸರ್ಕಾರಿ ಭೂಮಿ ಬಳಸಿಕೊಂಡು ಅಲ್ಲಲ್ಲಿ ರಿಕ್ರಿಯೇಷನ್ ಪಾರ್ಕ್, ಸಮೀಪದ ಗ್ರಾಮಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪೆರಿಫೆರಲ್ ರಿಂಗ್ ರಸ್ತೆ ರೂಪಿಸಬೇಕು. ಅದರ ಉಪಯುಕ್ತತೆಯನ್ನು ಗಮನದಲ್ಲಿರಿಸಿಕೊಂಡು ಡಿಪಿಆರ್ ತಯಾರಿಸಬೇಕಾಗಿದ್ದು, ಅದಕ್ಕಾಗಿ ಸಮಗ್ರ ಮಾಹಿತಿ ಒಳಗೊಂಡ ಪ್ರಸ್ತಾವನೆ ಸಲ್ಲಿಸಿ ಎಂದು ಪ್ರತಾಪ್ ಸಿಂಹ ಮುಡಾ ಅಧಿಕಾರಿಗಳಿಗೆ ತಿಳಿಸಿದರು. ಮೈಸೂರು-ಬೆಂಗಳೂರು ಹೆದ್ದಾರಿ ನಿರ್ಮಾಣ ಯೋಜನೆಯಲ್ಲಿ ತೊಡಗಿಸಿಕೊಂಡಿರುವ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾಜೆಕ್ಟ್ ಡೈರೆಕ್ಟರ್ ಡಿ.ಬಿ.ಶ್ರೀಧರ್ ಅವರ ಸಲಹೆ ಪಡೆದು ಪ್ರಸ್ತಾವನೆ ಸಿದ್ಧಪಡಿಸುವಂತೆಯೂ ಅವರು ತಿಳಿಸಿದರು.



ಎಲ್ಲಾ ಮಾನದಂಡಗಳನ್ನು ಕ್ರೋಢೀಕರಿಸಿ ಪೆರಿಫೆರಲ್ ರಸ್ತೆ ಹೇಗಿರಬೇಕು, ಅದರ ಅಗಲ, ಉದ್ದ, ಸರ್ವೀಸ್ ರಸ್ತೆ, ಸೇತುವೆ, ಓವರ್ ಬ್ರಿಡ್ಜ್, ಅಂಡರ್ ಬ್ರಿಡ್ಜ್, ಬೈಪಾಸ್‌ಗಳು, ವಾಣಿಜ್ಯ ಸಂಕೀರ್ಣ, ಟೌನ್‌ಶಿಪ್‌ಗಳ ನಿರ್ಮಾಣ ಸೇರಿದಂತೆ ಅಗತ್ಯ ಎಲ್ಲಾ ಮೂಲ ▶ 8ನೇ ಪುಟಕ್ಕೆ

ಹಳ್ಳಿ ಜನರಿಗೆ ತೊಂದರೆಯಾಗದಂತೆ ಹಸಿರು ಕ್ಷೇತ್ರವಾಗಿಸಲು ನಿರ್ಧಾರ

ಮೈಸೂರು, ಡಿ. 10- ಗ್ರಾಮಗಳ ಮನೆಗಳು ಹಾಗೂ ದೇವಾಲಯಗಳಿಗೆ ಧಕ್ಕೆಯಾಗದಂತೆ ಹಾಗೂ ಹಸಿರು ಕ್ಷೇತ್ರ (ಗ್ರೀನ್ ಫೀಲ್ಡ್)ವನ್ನು ಕಾಪಾಡಿಕೊಂಡು ಪೆರಿಫೆರಲ್ ರಸ್ತೆ ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ ತಯಾರಾಗುತ್ತಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.



ಮೈಸೂರಿನ ಪೆರಿಫೆರಲ್ ರಸ್ತೆ ಸಂಬಂಧ ಮುಡಾ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಟ್ಟು 102 ಕಿಲೋಮೀಟರ್ ಪೆರಿಫೆರಲ್ ರಸ್ತೆ ಪೈಕಿ 73 ಕಿಲೋ ಮೀಟರ್ ಹೊಸದಾಗಿ ನಿರ್ಮಾಣವಾಗುವ ರಸ್ತೆ ಉಳಿದದ್ದು ಜಿಲ್ಲಾ ಮುಖ್ಯ ರಸ್ತೆಗಳನ್ನೊಳಗೊಂಡು ಕೆಲ ಗ್ರಾಮಗಳನ್ನು ಹಾದು ಹೋಗುವ ರಸ್ತೆಯಾಗಿದೆ. ಈ ರಸ್ತೆಯು ಇಲವಾಲ, ಬೆಳಗೊಳ ಸೇರಿದಂತೆ ಕೆಲ ಊರುಗಳ ಒಳಗೆ ಹಾದು ಹೋಗುತ್ತದೆ. ಅದನ್ನು ತಪ್ಪಿಸಲು ಯೋಜನೆಯಲ್ಲಿ ಸ್ವಲ್ಪ ಮಾರ್ಪಾಡು ಮಾಡಲಾಗುತ್ತಿದೆ ಎಂದರು. ಊರೊಳಗೆ ಪೆರಿಫೆರಲ್ ರಸ್ತೆ ಹಾದು ಹೋದರೆ ರಸ್ತೆ ಅಗಲೀಕರಣಕ್ಕಾಗಿ ಜನರು ಹಲವು ದಶಕಗಳಿಂದ ಬಾಳಿ ಬದುಕಿರುವ ಮನೆಗಳನ್ನು ಒಡೆಯಬೇಕಾಗುತ್ತದೆ. ನೂರಾರು ವರ್ಷಗಳ ಇತಿಹಾಸವಿರುವ ದೇವಾಲಯಗಳನ್ನು ಸ್ಥಳಾಂತರಿಸಬೇಕಾಗುತ್ತದೆ. ಇದಕ್ಕೆ ಗ್ರಾಮಸ್ಥರಿಂದ ತಕರಾರು ಬರಬಹುದು. ಜೊತೆಗೆ ಅವರ ಭಾವನೆಗಳಿಗೂ ಧಕ್ಕೆ ಬರಬಹುದು ಎಂಬ ಕಾರಣಕ್ಕಾಗಿ ಯೋಜನೆಯಲ್ಲಿ ಸ್ವಲ್ಪ ಬದಲಾವಣೆ ತರಲಾಗುತ್ತಿದೆ. ಹೀಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾಜೆಕ್ಟ್ ಡೈರೆಕ್ಟರ್ ಡಿ.ಬಿ.ಶ್ರೀಧರ್ ಅವರು, ಹಸಿರು ಕ್ಷೇತ್ರ ವಲಯ ರೂಪಿಸಲು ಸಲಹೆ ನೀಡಿದ್ದಾರೆ. 15 ದಿನದೊಳಗೆ ಅವರು ಒಂದು ಕರಡು ಮಂಡಿಸಲಿದ್ದು, ಅದರ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು. ಪೆರಿಫೆರಲ್ ರಸ್ತೆ ನಿರ್ಮಾಣಕ್ಕೆ ಸರ್ಕಾರದಿಂದ ಅನುಮತಿ ದೊರೆತಿದ್ದು, ಜನವರಿಯಲ್ಲಿ ಟೆಂಡರ್ ಕರೆಯಲಾಗುತ್ತದೆ. ಟೆಂಡರ್ ಮೊತ್ತ ಇಷ್ಟೇ ಇರಬೇಕು ಎಂದು ನಿಗದಿಪಡಿಸಿಲ್ಲ ಎಂದರು.

ಸಂಸ್ಕೃತ, ಪ್ರಾಕೃತ ಭಾಷೆಗಳ ಪುಸ್ತಕಗಳು, ಹಸ್ತಪ್ರತಿಗಳ ಸಂರಕ್ಷಣೆಗಾಗಿ

ಇನ್ಫೋಸಿಸ್ ಸುಧಾಮೂರ್ತಿ ಅವರ ಮೂರ್ತಿ ಟ್ರಸ್ಟ್‌ನಿಂದ 75 ಲಕ್ಷ ಅನುದಾನ



ಮೈಸೂರು,ಡಿ.10–ಇನ್ಫೋಸಿಸ್‌ನ ಶ್ರೀಮತಿ ಸುಧಾಮೂರ್ತಿ ಮತ್ತು ಶ್ರೀ ನಾರಾಯಣ ಮೂರ್ತಿಯವರ ಕುಟುಂಬದ ಪ್ರತಿಷ್ಠಾನವಾದ ಮೂರ್ತಿ ಟ್ರಸ್ಟ್ ವತಿಯಿಂದ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಅಪರೂಪದ ಪುಸ್ತಕಗಳು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸಲು ಹಾಗೂ ಅವುಗಳ ಮೇಲಿನ ಸಂಶೋಧನೆಯನ್ನು ಉತ್ತೇಜಿಸಲು ಭಂಡಾರ್ಕರ್ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗೆ 75 ಲಕ್ಷ ರೂ. ಅನುದಾನ ಘೋಷಿಸಿದೆ.

ಅನುದಾನವು ಮೂರ್ತಿ ಸೆಂಟರ್ ಆಫ್ ಇಂಡಿಕ್ ಸ್ಟಡೀಸ್ ಹೆಸರಿನ 18,000 ಚದರ ಅಡಿ ವಿಸ್ತೀರ್ಣದ ಪಾರಂಪರಿಕ ಶೈಲಿಯ, 200 ಆಸನಗಳ ತುಗತಿ ಸಾಮರ್ಥ್ಯ ಹೊಂದಿದ ಶೈಕ್ಷಣಿಕ ಮತ್ತು ಸಂಶೋಧನಾ ಕಟ್ಟಡ, ಉಪನ್ಯಾಸಗಳನ್ನು ನಡೆಸಲು ಅತ್ಯಾಧುನಿಕ ಆಡಿಟೋರಿಯಂ ಮತ್ತು ಪ್ರಾಚೀನ ಪುಸ್ತಕಗಳು ಮತ್ತು ಹಸ್ತಪ್ರತಿಗಳನ್ನು ಡಿಜಿಟಲೀಕರಣ ಮಾಡಲು ಆಡಿಯೊ– ವಿಶುವಲ್ ಸ್ಟುಡಿಯೊದ ನಿರ್ಮಾಣವನ್ನು ಕೂಡಾ ಒಳಗೊಂಡಿದೆ. ಶ್ರೀಮತಿ ಸುಧಾಮೂರ್ತಿಯವರು ಕಟ್ಟಡದ ಶಿಲಾನ್ಯಾಸವನ್ನು ನೆರವೇರಿಸುವ ಮೂಲಕ ಕಟ್ಟಡದ ಭೂಮಿ ಪೂಜೆ ನೆರವೇರಿಸಿದರು.

ಈ ಸಂಬಂಧ ಶ್ರೀಮತಿ ಸುಧಾಮೂರ್ತಿ ಮಾತನಾಡಿ, ಬಿಓಆರೈ 105 ವರ್ಷಗಳ ಹಳೆಯ ಸಂಸ್ಥೆ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಆಧಾರಸ್ತಂಭವಾಗಿದೆ. ಇದು ಬೌದ್ಧಿಕ ಸಂಶೋಧನಾ ಪ್ರಬಂಧಗಳು ಮತ್ತು ಪುಸ್ತಕಗಳ ಸಮೃದ್ಧಿಗೆ ಕಾರಣವಾಗಿದೆ ಎಂದರು. ಬಿಓಆರೈ ಕಾರ್ಯಕಾರಿ ಮಂಡಳಿ ಅಧ್ಯಕ್ಷ ಭೂಪಾಲ್ ಪಟವರ್ಧನ್ ಮತ್ತಿತರರು ಹಾಜರಿದ್ದರು.



ಚಾಮರಾಜ ಕ್ಷೇತ್ರದ ವಾರ್ಡ್ ನಂ.22ರ ನೂತನ ಜೆಡಿಎಸ್ ಅಧ್ಯಕ್ಷ ಹೇಮಂತ್ ಕುಮಾರ್ ಅವರಿಗೆ ಶಾಸಕ ಜಿ.ಟಿ.ದೇವೇಗೌಡರು ನೇಮಕಾತಿ ಪತ್ರ ನೀಡಿದರು. ಈ ವೇಳೆ ಕ್ಷೇತ್ರದ ಅಧ್ಯಕ್ಷ ಮಂಜುನಾಥ್ ಮುಖಂಡರಾದ ಎಂ.ರಮೇಶ್, ಭುವನ್, ಅರ್ಜುನ್ ಹಾಜರಿದ್ದರು.

ಪಾರ್ಟ್‌ಟೈಂ ಜಾಬ್ ಆಮಿಷ ತೋರಿ ಗೃಹಿಣಿಗೆ 2.60 ಲಕ್ಷ ರೂ. ವಂಚನೆ

ಮೈಸೂರು,ಡಿ.10–ಪಾರ್ಟ್‌ಟೈಂ ಜಾಬ್ ಹೆಸರಿನಲ್ಲಿ ನಡೆಯುತ್ತಿರುವ ಆನ್‌ಲೈನ್ ವಂಚನೆ ದಿನೇ ದಿನೆ ಹೆಚ್ಚುತ್ತಿದ್ದು, ಮೈಸೂರಿನ ಶ್ರೀರಾಂಪುರ 2ನೇ ಹಂತದ ಗೃಹಿಣಿಯೊಬ್ಬರಿಗೆ 2.60 ಲಕ್ಷ ರೂ. ವಂಚಿಸಲಾಗಿದೆ. ಟೆಲಿಗ್ರಾಂ ಆಪ್‌ನಲ್ಲಿ ಆನ್‌ಲೈನ್ ಜಾಬ್ ಬಗ್ಗೆ ಇದ್ದ ಸಂದೇಶವನ್ನು ಗಮನಿಸಿದ್ದ ಎಂ. ನಂದಿನಿ(26) ಅವರು ಅದರ ಲಿಂಕ್ ಮೇಲೆ ಒತ್ತಿ 2.60 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿ, ಟಾಸ್ಕ್‌ಗಳನ್ನು ಪೂರೈಸಿದ ನಂತರ ತಮ್ಮ ಹಣವನ್ನು ಡ್ರಾ ಮಾಡಿಕೊಳ್ಳಲು ಆಗುತ್ತಿಲ್ಲ. ಪಾರ್ಟ್‌ಟೈಂ ಜಾಬ್ ಹೆಸರಿನಲ್ಲಿ ತಮ್ಮನ್ನು ವಂಚಿಸಲಾಗಿದೆ ಎಂದು ನೀಡಿರುವ ದೂರನ್ನು ಮೈಸೂರು ನಗರ ಸೆನ್ ಠಾಣೆ ಪೊಲೀಸರು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಡಿಬಿ ಕುಪ್ಪೆ ಅರಣ್ಯ ವಲಯದಲ್ಲಿ 6 ಟ್ರ್ಯಾಪಿಂಗ್ ಕ್ಯಾಮರಾ ಕಳವು

ಅಂತರಸಂತೆ,ಡಿ.10–ಹುಲಿ ಗಣತಿಗಾಗಿ ಅಂತರಸಂತೆ ವನ್ಯಜೀವಿ ವಲಯದಲ್ಲಿ ಅಳವಡಿಸಿದ್ದ 4 ಟ್ರ್ಯಾಪಿಂಗ್ ಕ್ಯಾಮರಾಗಳನ್ನು ಕಳವು ಮಾಡಿದ ಬೆನ್ನಲ್ಲೇ ಖದೀಮರು ಡಿ.ಬಿ. ಕುಪ್ಪೆ ಅರಣ್ಯ ವಲಯದಲ್ಲಿ 6 ಟ್ರ್ಯಾಪಿಂಗ್ ಕ್ಯಾಮರಾಗಳನ್ನು ಕದ್ದಿದ್ದಾರೆ.

ಅಂತರಸಂತೆ ವಲಯದಲ್ಲಿ ಈಚೆಗೆ 4 ಕ್ಯಾಮರಾ ಕಳವಾಗಿತ್ತು

ಹುಲಿ ಗಣತಿಗಾಗಿ ಮಾಸ್ತಿಗುಡಿ ಗಸ್ತಿನ ಕಲ್ಪಾರೆ ಜೀಪ್ ರಸ್ತೆ ಬಳಿ ಅಳವಡಿಸಿದ್ದ 2, ಬರಬಳ್ಳೇ ಗಸ್ತಿನ ಸುಂಕದಕಟ್ಟೆ ಕೂಡು ಜೀಪ್ ರಸ್ತೆ ಬಳಿ ಅಳವಡಿಸಿದ್ದ 2 ಹಾಗೂ ಬಾವಲಿ ಗಸ್ತಿನ ಕರ್ನಾಟಕ–ಕೇರಳ ಗಡಿ ಭಾಗದ ಡಿ. ಲೈನ್ ಕಲ್ಲುಪಾರೆ ರಸ್ತೆ ಬಳಿ ಅಳವಡಿಸಿದ್ದ 2 ಟ್ರ್ಯಾಪಿಂಗ್ ಕ್ಯಾಮರಾ ಸೇರಿದಂತೆ 6 ಕ್ಯಾಮರಾಗಳು ಮತ್ತು 48 ಬ್ಯಾಟರಿಗಳನ್ನು ಕಳವು ಮಾಡಲಾಗಿದೆ.

ಈ ಸಂಬಂಧ ಡಿ.ಬಿ.ಕುಪ್ಪೆ ವಲಯ ಅರಣ್ಯಾಧಿಕಾರಿ ಕೆ.ಎಲ್. ಮಧು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಅಂತರಸಂತೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಅರಣ್ಯದಲ್ಲಿ ಅಳವಡಿಸಿರುವ ಆಧುನಿಕ ಕ್ಯಾಮರಾಗಳನ್ನು ಕಳವು ಮಾಡುತ್ತಿರುವುದು ಅರಣ್ಯ ಇಲಾಖೆಗೆ ತಲೆನೋವಾಗಿ ಪರಿಣಮಿಸಿದೆ.

ಮರದಿಂದಲೇ 1.50 ಲಕ್ಷ ಮೌಲ್ಯದ ಅಡಿಕೆ ಕಳವು

ಬನ್ನೂರು, ಡಿ. 10– ಜಮೀನಿನಲ್ಲಿ ಬೆಳೆದಿದ್ದ 1.50 ಲಕ್ಷ ರೂ. ಮೌಲ್ಯದ ಅಡಿಕೆ ಕಳವು ಮಾಡಿರುವ ಘಟನೆ ತಿ.ನರಸೀಪುರ ತಾಲೂಕು ಮೆಣಸಿಕ್ಯಾತನಹಳ್ಳಿ ಗ್ರಾಮದಿಂದ ವರದಿಯಾಗಿದೆ. ಕೆ.ಶಿವಶಂಕರ್(52) ಎಂಬ ರೈತ ತನ್ನ ಜಮೀನಿನಲ್ಲಿ 850 ಅಡಿಕೆ ಸಸಿಗಳನ್ನು ಬೆಳೆದಿದ್ದು, 500ರಿಂದ 600 ಮರಗಳಲ್ಲಿ ಸುಮಾರು 30 ಕ್ವಿಂಟಾಲ್‌ನಷ್ಟು ಅಡಿಕೆ ಗೊಂಚಲುಗಳಿದ್ದವು. ಡಿಸೆಂಬರ್ 8ರಂದು ರಾತ್ರಿ ಖದೀಮರು ಗೊಂಚಲು ಸಮೇತ ಅಡಿಕೆಯನ್ನು ಕತ್ತರಿಸಿಕೊಂಡು ಹೋಗಿದ್ದಾರೆ. ಈ ಸಂಬಂಧ ಬನ್ನೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾಳೆಯಿಂದ ಉಚಿತ ತಲೆನೋವು, ಬೆನ್ನು ಮೂಳೆ ತಪಾಸಣೆ ಶಿಬಿರ

ಮೈಸೂರು,ಡಿ.10–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಡಿ.12ರಿಂದ 17ರವರೆಗೆ ತಲೆನೋವು ಹಾಗೂ ಬೆನ್ನುಮೂಳೆ ಸಮಸ್ಯೆಗಳಿಗೆ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ.

ಶಿಬಿರದಲ್ಲಿ ಮೈಗ್ರೇನ್ ಮುಂತಾದ ತಲೆನೋವಿನ ಸಮಸ್ಯೆಗಳಿರುವವರು ಹಾಗೂ ಬೆನ್ನುನೋವು ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ವೈದ್ಯರು ಸೂಚಿಸುವ ಎಂ.ಆರ್.ಐ ಪರೀಕ್ಷೆಗೆ ಶೇ.50 ಹಾಗೂ ಸಿಟಿ ಸ್ಕ್ಯಾನ್ ಪರೀಕ್ಷೆಗೆ ಶೇ.30 ರಿಯಾಯತಿ ಇದೆ. ಹೆಚ್ಚಿನ ಮಾಹಿತಿಗಾಗಿ 0821–2533 600, 9986399862 ಸಂಪರ್ಕಿಸಬಹುದಾಗಿದೆ.

ಎನ್‌ಆರ್ ಫೌಂಡೇಷನ್‌ಗೆ ರೋಟರಿ ಮೈಸೂರು ಮಿಡ್‌ಟೌನ್ ಜೀಯಸ್ ಸಿಎಸ್‌ಆರ್ ಪ್ರಶಸ್ತಿ

ಡಿ.14ರಂದು ಪ್ರಶಸ್ತಿ ಪ್ರದಾನ ಸಮಾರಂಭ

ಫೌಂಡೇಷನ್ ಸಂಸ್ಥಾಪಕರೂ ಆದ ಎನ್‌ಆರ್ ಗ್ರೂಪ್ ಅಧ್ಯಕ್ಷ ಆರ್.ಗುರು ಅವರಿಗೆ ಪ್ರಶಸ್ತಿ





ಡಾ.ಗುರು



ಡಾ.ಮುತ್ತುಕುಮಾರ್

ಮೈಸೂರು,ಡಿ.10(ಪಿಎಂ)– ರೋಟರಿ ಮೈಸೂರು ಮಿಡ್‌ಟೌನ್ ಮತ್ತು ಮೈಸೂರಿನ ಜೀಯಸ್ ಬಯೋಟೆಕ್ ಕಂಪನಿ ಜಂಟಿ ಆಶ್ರಯದಲ್ಲಿ ಇದೇ ಮೊದಲ ಬಾರಿಗೆ ಕೊಡಮಾಡುತ್ತಿರುವ 'ರೋಟರಿ ಮೈಸೂರು ಮಿಡ್‌ಟೌನ್ ಜೀಯಸ್ ಸಿಎಸ್‌ಆರ್ ಪ್ರಶಸ್ತಿ–2022'ಕ್ಕೆ ಸಮಾಜಕ್ಕೆ ಗಮನಾರ್ಹ ಸೇವೆಗಳನ್ನು ನೀಡುತ್ತಿರುವ ಎನ್‌ಆರ್ ಫೌಂಡೇಷನ್ ಭಾಜನವಾಗಿದೆ ಎಂದು ರೋಟರಿ ಮಿಡ್‌ಟೌನ್ ಅಧ್ಯಕ್ಷ ಎಂ.ಎಸ್.ನವೀನ್‌ಚಂದ್ರ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.14ರಂದು ಸಂಜೆ 6.30ಕ್ಕೆ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಗ್ರ್ಯಾಂಡ್ ಮರ್ಕ್ಯೂರ್ ಹೋಟೆಲ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ. ಫೌಂಡೇಷನ್ ಸಂಸ್ಥಾಪಕರೂ ಆದ ಎನ್‌ಆರ್ ಗ್ರೂಪ್ ಅಧ್ಯಕ್ಷ ಆರ್.ಗುರು ಅವರಿಗೆ ಅಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮೈಸೂರಿನ ಮೆರಿಟರ್ ಹೆಚ್‌ವಿಎಸ್ ಇಂಡಿಯಾ ಲಿಮಿಟೆಡ್/ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ಸಿಇಓ ಡಾ.ಎನ್. ಮುತ್ತುಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದರು.

ಶಿಕ್ಷಣ, ಕ್ರೀಡೆಗೆ ಉತ್ತೇಜನ, ಮಹಿಳಾ ಸಬಲೀಕರಣ, ಅಂಗವಿಕಲ ಸಮುದಾಯದ ಶ್ರೇಯೋಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಎನ್‌ಆರ್ ಫೌಂಡೇಷನ್ ಆರಂಭದಿಂದ ತೊಡಗಿಸಿಕೊಂಡಿದೆ. ಸಿಎಸ್‌ಆರ್ (ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ) ಕಾರ್ಯಕ್ರಮ ಜಾರಿಗೊಳ್ಳುವ ಮೊದಲೇ ಮಹತ್ತರ ಸೇವಾ ಕಾರ್ಯದಲ್ಲಿ ಸದರಿ ಫೌಂಡೇಷನ್ ನಿರತವಾಗಿದೆ. ಇದೇ ಮೊದಲ ಬಾರಿಗೆ ಜೀಯಸ್ ಬಯೋಟೆಕ್ ಕಂಪನಿ ಪ್ರಾಯೋಜಕತ್ವದಲ್ಲಿ 'ರೋಟರಿ ಮೈಸೂರು ಮಿಡ್‌ಟೌನ್ ಜೀಯಸ್ ಸಿಎಸ್‌ಆರ್ ಪ್ರಶಸ್ತಿ' ಕೊಡಮಾಡುತ್ತಿದ್ದು, ಇದು ಪ್ರತಿವರ್ಷವೂ ಮುಂದುವರೆಯಲಿದೆ ಎಂದು ತಿಳಿಸಿದರು.

ಪ್ರತಿಯೊಂದು ಸಂಸ್ಥೆ ತಮ್ಮ ಪ್ರಾಮಾಣಿಕ ಪ್ರಯತ್ನದ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಉಂಟುಮಾಡುವ ಸಾಮರ್ಥ್ಯ ಹೊಂದಿವೆ. ಈ ಪ್ರಶಸ್ತಿಯು ಇನ್ನಿತರ ಸಂಸ್ಥೆಯ ಚುಕ್ಕಾಣಿ ಹಿಡಿದವರಲ್ಲಿ ಸೇವಾ ಮನೋಭಾವಕ್ಕೆ ಪ್ರೇರಣೆ ನೀಡುವ ವಿಶ್ವಾಸವಿದೆ ಎಂದರು. ರೋಟರಿ ಮೈಸೂರು ಮಿಡ್‌ಟೌನ್ ಮಾಜಿ ಅಧ್ಯಕ್ಷ ಅಯ್ಯಣ್ಣ, ಗೌರವ ಕಾರ್ಯದರ್ಶಿ ಎಸ್.ಕುಮಾರಸ್ವಾಮಿ, ಉಪಾಧ್ಯಕ್ಷ ಕೆ.ಎಲ್.ರಾಕೇಶ್‌ಬಾಬು ಗೋಷ್ಠಿಯಲ್ಲಿದ್ದರು.

ಗಡಿ ಸಮಸ್ಯೆ

ಡಿ.14 ಇಲ್ಲವೇ 15ಕ್ಕೆ ಉಭಯ ಸಿಎಂಗಳ ಸಭೆ

ಸಿಎಂ ಬೊಮ್ಮಾಯಿ ಮಾಹಿತಿ

ಬೆಂಗಳೂರು, ಡಿ.10(ಕೆಎಂಶಿ)–ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಅಧ್ಯಕ್ಷತೆಯಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿಗಳೊಂದಿಗೆ ಡಿ.14 ಅಥವಾ 15ರಂದು ಸಭೆ ನಡೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದರ ನಿಯೋಗ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಲಿದೆ. ನಾನೂ ಕೂಡ ಅಮಿತ್ ಶಾ ಅವರೊಂದಿಗೆ ಮಾತನಾಡಿದ್ದೇನೆ. ಅವರು ಹೇಳಿ ಕಳಿಸಿದಾಗ ಬರಬೇಕಾಗುವುದು ಎಂದು ಹೇಳಿದ್ದಾರೆ. ಕರ್ನಾಟಕದ ವಿಚಾರ, ನಿಲುವು, ವಾಸ್ತವಾಂಶವನ್ನು ಈಗಾಗಲೇ ತಿಳಿಸಲಾಗಿದೆ. ಹಲವಾರು ವಿವರಗಳನ್ನು ಸಹ ನೀಡಲಾಗಿದೆ. ಭೇಟಿಯಾದ ಸಂದರ್ಭದಲ್ಲಿ ಕರ್ನಾಟಕದ ನಿಲುವನ್ನು ಅವರಿಗೆ ಸ್ಪಷ್ಟಪಡಿಸಲಾಗುವುದು ಎಂದರು. ಸರ್ವಪಕ್ಷ ಸಭೆ ಬಗ್ಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಮಾತನಾಡಲಾಗಿದೆ. ಸಭೆ ನಿಗದಿಯಾದ ಕೂಡಲೇ ತಿಳಿಸಲಾಗುವುದು ಎಂದರು.

ಪ್ರೇಮಾಶಂಕರೇಗೌಡರೂ ಜೆಡಿಎಸ್ ಟಿಕೆಟ್ ಆಕಾಂಕ್ಷಿ

ಮೈಸೂರು, ಡಿ.10(ಪಿಎಂ)– ಮೈಸೂರು ಮಹಾನಗರ ಪಾಲಿಕೆ ಜೆಡಿಎಸ್ ಸದಸ್ಯೆ ಪ್ರೇಮಾ ಶಂಕರೇಗೌಡರು ಕೂಡ ಚಾಮರಾಜ ಕ್ಷೇತ್ರದಲ್ಲಿ ಜೆಡಿಎಸ್‌ನ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಪಾಲಿಕೆ ವಾರ್ಡ್ ನಂ.2ರ ಸದಸ್ಯೆಯಾದ ಇವರು ಈಗಾಗಲೇ ವರಿಷ್ಠರಲ್ಲಿ ಚಾಮರಾಜ ಕ್ಷೇತ್ರದಿಂದ ಸ್ಪರ್ಧಿಸುವ ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರೇ ಈ ಹಿಂದೆ ಮೈಸೂರಲ್ಲಿ ಒಂದು ಕ್ಷೇತ್ರದಲ್ಲಿ ಮಹಿಳೆಗೆ ಪಕ್ಷದ ಟಿಕೆಟ್ ನೀಡುವ ಆಶ್ವಾಸನೆ ನೀಡಿದ್ದರು. ಅದೂ ಪ್ರೇಮಾ ಶಂಕರೇಗೌಡರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಹೇಳಿದ್ದ ಮಾತಿದು. ಹಾಗಾಗಿ ಚಾಮರಾಜ ಕ್ಷೇತ್ರದಲ್ಲಿ ಸ್ಪರ್ಧಿಸಲು ತಮಗೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದ್ದಾರೆ ಎಂದು ಬಲ್ಲ ಮೂಲಗಳು ತಿಳಿಸಿವೆ.



ಇತ್ತೀಚೆಗೆ ನಡೆದ ಮೇಯರ್ ಚುನಾವಣೆಯಲ್ಲೂ ಈ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಪ್ರೇಮಾ ಶಂಕರೇಗೌಡರು ಪಕ್ಷದ ಮುಖಂಡರಿಗೆ ಮನವಿಯನ್ನೂ ಮಾಡಿದ್ದರು. ಆದರೆ ಯಾರೊಬ್ಬರೂ ಮೇಯರ್ ಗಾದಿ ಹಿಡಿಯುವ ಸಂಬಂಧ ಆಸಕ್ತಿ ತೋರದೇ ಇದ್ದರಿಂದ ಅದು ಬಿಜೆಪಿ ಪಾಲಾಗಿತ್ತು. ಅದು ಕೈತಪ್ಪಿದ ಹಿನ್ನೆಲೆಯಲ್ಲಿ ನಿರಾಸೆಗೊಂಡಿದ್ದರು. ಇದೀಗ ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಲು ಟಿಕೆಟ್ ಆಕಾಂಕ್ಷೆ ಹೊಂದಿದ್ದಾರೆ.

ಬಿಜೆಪಿಯಿಂದ ಜೆಪಿ ಪ್ರಬಲ ಆಕಾಂಕ್ಷಿ: ಜೆಪಿ ಎಂದೇ ಹೆಸರಾಗಿರುವ ಬಿಜೆಪಿ ಮುಖಂಡ ಜಯಪ್ರಕಾಶ್, ಚಾಮರಾಜ ಕ್ಷೇತ್ರದಿಂದ ಕಣಕ್ಕಿಳಿಯಲು ಪಕ್ಷದ ಟಿಕೆಟ್ ಭಾರೀ ಕಸರತ್ತು ಆರಂಭಿಸಿದ್ದಾರೆ. ಕ್ಷೇತ್ರದಲ್ಲಿ ಪಕ್ಷದ ಹಾಲಿ ಶಾಸಕರು ಸೇರಿದಂತೆ ದೊಡ್ಡ ಸಂಖ್ಯೆಯಲ್ಲಿ ಆಕಾಂಕ್ಷಿಗಳಿದ್ದರೂ ಟಿಕೆಟ್ ದೊರೆಯುವ ವಿಶ್ವಾಸದಲ್ಲಿ ಜೆಪಿ ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಹಾಗೂ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.



ವಿಶ್ವ ಮಾನವ ಹಕ್ಕುಗಳ ದಿನದ ಪ್ರಯುಕ್ತ ಜಾಗೃತಿ ಜಾಥಾ



ಮೈಸೂರು,ಡಿ.10(ಪಿಎಂ)– ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಅಂಗವಾಗಿ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಜಂಟಿ ಆಶ್ರಯದಲ್ಲಿ ಜಾಗೃತಿ ಜಾಥಾ ನಡೆಸಲಾಯಿತು. ಮೈಸೂರಿನ ಜಿಲ್ಲಾ ನ್ಯಾಯಾಲಯ ಎದುರಿನ ಗಾಂಧಿ ಪುತ್ಥಳಿ ಬಳಿ ಲಘು ವ್ಯವಹಾರಗಳ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಭಾರ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಜಾಥಾಗೆ ಚಾಲನೆ ನೀಡಿದರು.

ಜಾಥಾದಲ್ಲಿ ಪಾಲ್ಗೊಂಡಿದ್ದ ಕಾಲೇಜಿನ ವಿದ್ಯಾರ್ಥಿನಿಯರು ಮಾನವ ಹಕ್ಕುಗಳ ಮಹತ್ವ ಕುರಿತು ಘೋಷಣೆಗಳನ್ನು ಕೂಗುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ವಾಣಿ ವಿಲಾಸ ರಸ್ತೆಯಲ್ಲಿ ಸಾಗಿದ ಜಾಥಾವು, ಆರ್‌ಟಿಓ ವೃತ್ತ, ಡಾ.ಅಂಬೇಡ್ಕರ್ ರಸ್ತೆ, ಬಲ್ಲಾಳ್ ವೃತ್ತ (ಅಶೋಕ ವೃತ್ತ) ಮಾರ್ಗವಾಗಿ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜು ಎದುರು ಅಂತ್ಯಗೊಂಡಿತು.

ನ್ಯಾಯಾಧೀಶರಿಂದ ರಕ್ತದಾನ : ನ್ಯಾಯಾಧೀಶ ಬಿ.ಜಿ.ದಿನೇಶ್ ಅವರು ಮಾನವ ಹಕ್ಕುಗಳ ದಿನದ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರಕ್ತದಾನ ಮಾಡಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಸಾಯಿನಾಥ ಮಲ್ಲಿಗೆಮಾಡು ಸೇರಿದಂತೆ ಮತ್ತಿತರರು ಜಾಥಾದಲ್ಲಿ ಹಾಜರಿದ್ದರು.

ವನ್ಯಜೀವಿ ಛಾಯಾಚಿತ್ರ ಒಳಗೊಂಡ ಕ್ಯಾಲೆಂಡರ್ ಬಿಡುಗಡೆ

ಸಾಂಸ್ಕೃತಿಕ ಬದಲಾವಣೆಯ ವೇಗ ಗಮನಿಸಿದರೆ ಆತಂಕ; ವನ್ಯಜೀವಿ ತಜ್ಞ ಕೃಪಾಕರ

ಮೈಸೂರು,ಡಿ.10(ಪಿಎಂ)–ಛಾಯಾಗ್ರಾಹಕ ಡಾ. ಲೋಕೇಶ್ ಮೊಸಳೆ ಕ್ಯಾಮರಾಗೆ ಸೆರೆಸಿಕ್ಕ ವನ್ಯಜೀವಿಗಳ ಛಾಯಾಚಿತ್ರಗಳೊಂದಿಗೆ ಹೊರತಂದಿರುವ 2023ನೇ ಸಾಲಿನ ಟೇಬಲ್ ಹಾಗೂ ವಾಲ್ ಕ್ಯಾಲೆಂಡರ್ ಅನ್ನು ಶನಿವಾರ ಬಿಡುಗಡೆ ಮಾಡಲಾಯಿತು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ನಮ್ಮ ಮನೆಯ ಗೆಳೆಯರ ಬಳಗದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವನ್ಯಜೀವಿ ತಜ್ಞರಾದ ಕೃಪಾಕರ ಮತ್ತು ಸೇನಾನಿ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಕೃಪಾಕರ, ಕ್ಯಾಲೆಂಡರ್ ಅದ್ಭುತವಾಗಿ ಮೂಡಿಬಂದಿದೆ. ಕನ್ನಡದ ಕವಿತೆ–ಕವನಗಳನ್ನು ಚಿತ್ರಗಳಿಗೆ ಪೂರಕವಾಗಿ ಬಳಸಿರುವುದು ಕ್ಯಾಲೆಂಡರ್ ಅಂದ ಹೆಚ್ಚಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಸ್ತುತದ ಸಾಂಸ್ಕೃತಿಕ ಬದಲಾವಣೆಗಳನ್ನು ಗಮನಿಸಿದರೆ ಆತಂಕ ಉಂಟಾಗುತ್ತದೆ. ವೇಗವಾಗಿ ಎಲ್ಲವೂ ಬದಲಾಗುತ್ತಿದೆ. ಹಾಗೆ ಸುಮ್ಮನೆ ಯೋಚನೆ ಮಾಡುತ್ತಿದ್ದಾಗ ನನಗೆ ಅಂಚೆಯಣ್ಣನ ಕಾರ್ಯವೈಖರಿ ಇಂದು ಮರೆಯಾಗುತ್ತಿರುವುದು ಆಲೋಚನೆಗೆ ಬಂತು. ಒಂದು ಕಾಲದಲ್ಲಿ ಒಬ್ಬ ಅಂಚೆ ಸಿಬ್ಬಂದಿ ಇಡೀ ಒಂದು ಬಡಾವಣೆಗೆ ಪರಿಚಿತನಾಗಿರುತ್ತಿದ್ದ. ಆದರೆ ಅಂತಹ ಸನ್ನಿವೇಶ ಇಂದು ಬಹುತೇಕ ಮರೆಯಾಗಿದ್ದು, ಸ್ಪರ್ಶಕ್ಕೆ ನಿಲುಕದ ಇ–ಮೇಲ್ ಮೋಡಿಗೆ ಒಳಗಾಗಿದ್ದೇವೆ ಎಂದರು.



ಆತ್ಮೀಯತೆ ಸಂಸ್ಕೃತಿ ಇಂದು ಮರೆಯಾಗಿ ಹೋಗುತ್ತಿದೆ. ಅದೇ ರೀತಿ ಕ್ಯಾಲೆಂಡರ್ ಸಹ ಸಂಸ್ಕೃತಿಯ ಒಂದು ಭಾಗವಾಗಿತ್ತು. ಆದರೆ ಈಗ ಅದೂ ಅಳಿವಿನ ಅಂಚಿಗೆ ಹೋಗುತ್ತಿದೆ. ಈ ಸನ್ನಿವೇಶದಲ್ಲಿ ಇಂತಹ ಕ್ಯಾಲೆಂಡರ್ ಹೊರತರುವ ಮೂಲಕ ಒಂದು ಸಂಸ್ಕೃತಿ ಉಳಿಸುವ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಛಾಯಾಗ್ರಾಹಕ ಡಾ.ಲೋಕೇಶ್ ಮೊಸಳೆ, 'ಕಣ್ಣು ಮತ್ತು ಬಣ್ಣ' ಪರಿಕಲ್ಪನೆಯಲ್ಲಿ ಕ್ಯಾಲೆಂಡರ್ ರೂಪುಗೊಂಡಿದೆ. ಮಕ್ಕಳ ಪದ್ಯಗಳು, ಕವಿತೆಗಳನ್ನೂ ಪ್ರಕಟಿಸಲಾಗಿದೆ ಎಂದರು. ವಾಸ್ತುಶಿಲ್ಪಿ ಮೆರೀನಾ ಪ್ರಸಾದ್, ದಂತ ವೈದ್ಯೆ ಡಾ.ರಜನಿ ಲೋಕೇಶ್, ಬಳಗದ ರಾಜೇಂದ್ರಪ್ರಸಾದ್ ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ:** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ನಿತ್ಯಾರಾಧನೆ, ಬೆಳಗ್ಗೆ 9ಕ್ಕೆ ಮಹಾ ಸುದರ್ಶನ ಹೋಮ, ವಿಶೇಷ ಅಲಂಕಾರ, ವಿಶೇಷ ಪೂಜೆ, ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 7 ಗಂಟೆಗೆ ಭರತನಾಟ್ಯ ಮತ್ತು ಸಂಗೀತ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಇರ್ವಿನ್ ರಸ್ತೆ.

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್:** 88ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30ರಿಂದ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 10ರಿಂದ ರಥೋತ್ಸವ, ಗಣಪತಿ ಹೋಮ, ವಿಷ್ಣು ಸಹಸ್ರನಾಮ ಹೋಮ, ಶ್ರೀ ಭಾವಸಾರ ಕ್ಷತ್ರಿಯ ಭಜನಾ ಮಂಡಳಿಯವರಿಂದ ಅಖಂಡ ಭಜನೆ, ಮಧ್ಯಾಹ್ನ 1 ಗಂಟೆಗೆ ಅನ್ನಪೂರ್ಣೇಶ್ವರಿ ಪೂಜೆ, ಸ್ಥಳ: ಟ್ರಸ್ಟ್ ಆವರಣ, ಶ್ರೀ ಗೀತಾ ಮಂದಿರ ರಸ್ತೆ, ಅಶೋಕ ರಸ್ತೆ.

■ **ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್:** 30ನೇ ಕ್ಯಾರೋಲ್ ಸಿಂಗಿಂಗ್ ಕಾಂಪಿಟೇಶನ್, ಬೆಳಗ್ಗೆ 9ಕ್ಕೆ ಉದ್ಘಾಟನೆ: ಬಿಷಪ್ ರೆ.ಡಾ. ಕೆ.ಎ.ವಿಲಿಯಂ, ಗೌರವ ಅತಿಥಿಗಳು: ಮೌಂಟ್ ಕಾರ್ಮೆಲ್ ಚರ್ಚ್ ಪ್ಯಾರೀಸ್ ಪ್ರೀಸ್ಟ್ ರೆ.ಶಾಜಿ ಕುನ್ನೆಲ್, ಕಾರ್ಮೆಲ್ ಭವನದ ಸಲಹೆಗಾರ ರೆ. ರಾಯ್ ಪೂಪಿಲ್ಲಿ, ಸಂಜೆ 6ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಡಾ.ಜಾನ್ ಫ್ರಾನ್ಸಿಸ್ ಸೆಕ್ವೇರಾ, ಗೌರವ ಅತಿಥಿಗಳು : ಶ್ರೀ ಮಾತಾ ಅಮೃತಾನಂದಮಯಿ ಮಠದ ಬ್ರಹ್ಮಚಾರಿ ಅತ್ಮನಿರತಾಮೃತಾ ಚೈತನ್ಯ, ಡಾ. ವರ್ಗೀಸ್ ಕೆಲಂಪರಂಬಿಲ್, ಜಾನ್‌ಸನ್ ಕೆ. ಚಾಲಿಸ್ಸೆರಿ, ಸ್ಥಳ: ಟೆರೇಷಿಯನ್ ಕಾಲೇಜು ಸಭಾಂಗಣ, ಸಿದ್ದಾರ್ಥನಗರ ಬಡಾವಣೆ.


■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಭಾವನೆಗಳ ಅನಾವರಣಕ್ಕೊಂದು ವೇದಿಕೆ ಮೈಸೂರು ಸಾಹಿತ್ಯ ದಾಸೋಹ:** ಎಂ.ಆರ್.ಆನಂದ್ ವಿರಚಿತ ಸ್ತ್ರೀಯಾನ (ಕಾದಂಬರಿ) ಮತ್ತು ಕಥಾ ನಿನಾದ (ಕಥಾ ಸಂಕಲನ) ಕೃತಿಗಳ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ: ಜಿಲ್ಲಾ ಕಸಾಪರಿ ಮಾಜಿ ಅಧ್ಯಕ್ಷ ಪ್ರೊ.ನೀ.ಗಿರಿಗೌಡ, ಕೃತಿಗಳ ಲೋಕಾರ್ಪಣೆ: ಕಿರುತೆರೆ ಕಲಾವಿದೆ ದೀಪಾ ರವಿಶಂಕರ್, ಮುಖ್ಯ ಅತಿಥಿಗಳು: ಪ್ರಾಂಶುಪಾಲ ಡಾ.ಮಂಜುರಾಜ್, ವಿಶ್ರಾಂತ ಕನ್ನಡ ಪ್ರಾಧ್ಯಾಪಕಿ ಡಾ.ಉಷಾ ದೇವಿ, ಕೃತಿ ಕುರಿತು ಮಾತನಾಡುವವರು: ಲೇಖಕಿ ಬಿ.ಆರ್.ನಾಗರತ್ನ, ರಂಗನಾಥ್, ಉಪಸ್ಥಿತರು: ಲೇಖಕ ಎಂ.ಆರ್.ಆನಂದ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಅರೋರ:** ಸ್ಯಾರಿ ಮತ್ತು ಕುರ್ತಿ ಮೇಳ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10.30ರಿಂದ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು:** ಮೈಬಿಲ್ಡ್ ವಸ್ತುಪ್ರದರ್ಶನ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ:** 25ನೇ ವರ್ಷದ ರಜತ ಮಹೋತ್ಸವ, ಬೆಳಗ್ಗೆ 9.30ಕ್ಕೆ ಸರಗಮಪ ಖ್ಯಾತಿಯ ಟಿ.ಎಂ.ವೈಷ್ಣವಿ ಮತ್ತು ಭುವನ ವೃಂದದವರಿಂದ ಸುಗಮ ಸಂಗೀತ, ಬೆಳಗ್ಗೆ 11ಕ್ಕೆ ಯುವ ಸಂಕಲ್ಪ, ಸಮ್ಮುಖ: ಶ್ರೀ ಕೈವಲ್ಯಾನಂದಾ ಸ್ವಾಮೀಜಿ, ಡಾ.ಶರತ್‌ಚಂದ್ರ ಸ್ವಾಮೀಜಿ, ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀಚನ್ನಬಸವ ಸ್ವಾಮೀಜಿ, ಅಧ್ಯಕ್ಷತೆ: ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮುಖ್ಯ ಅತಿಥಿಗಳು: ಖ್ಯಾತ ಉದ್ಯಮಿ ಆನಂದ ಸಂಕೇಶ್ವರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಮಹಾಂತೇಶ್ ಪಾಟೀಲ್, ರಾಜ್ಯಾಧ್ಯಕ್ಷ ಮನೋಹರ್ ಬಿ. ಅಬ್ಬಿಗೆರೆ, ಮಧ್ಯಾಹ್ನ 2.30ರಿಂದ ಒಕ್ಕೂಟದ ಬಳಗಗಳ ವಿವಿಧ ಮಹಿಳಾ ಮತ್ತು ಮಕ್ಕಳ ಸಮಿತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಮ್ಮುಖ: ಶ್ರೀ ಗುರುಶಾಂತ ಸ್ವಾಮೀಜಿ, ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಅಧ್ಯಕ್ಷತೆ: ಚಾ.ನಗರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಶ್ರೀಮತಿ ಹೆಚ್.ಎಸ್. ಬಿಂದ್ಯಾ, ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ: ಶ್ರೀ ಮಹಾಂತ ಸ್ವಾಮೀಜಿ, ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ: ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ, ಸಮಾರೋಪ ಭಾಷಣ: ವಸತಿ ಸಚಿವ ವಿ.ಸೋಮಣ್ಣ, ಮುಖ್ಯ ಅತಿಥಿಗಳು: ಮಹಾಸಭಾ ರಾಜ್ಯಾಧ್ಯಕ್ಷ ಎನ್. ತಿಪ್ಪಣ್ಣ, ಸಚಿವರಾದ ಜೆ.ಸಿ.ಮಾಧುಸ್ವಾಮಿ, ಮುರುಗೇಶ್ ನಿರಾಣಿ, ಹಾಲಪ್ಪ ಆಚಾರ್, ಸ್ಥಳ: ಶ್ರೀ ಸುತ್ತೂರು ಶಾಖಾ ಮಠ, ಚಾಮುಂಡಿಬೆಟ್ಟದ ತಪ್ಪಲು.



ಇಂದಿನ ಪಂಚಾಂಗ

11.12.2022 ಭಾನುವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022ರಿಂದ 15.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ತೃತೀಯ, ನಕ್ಷತ್ರ : ಪುನರ್ವಸು, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಬಸವ ಸಮಿತಿ, ಶರಣ ಸಾಹಿತ್ಯ ಪರಿಷತ್ :** ಶರಣ ಸಂಗಮ 276 ಮತ್ತು ಶರಣ ಸಾಹಿತ್ಯ ಪರಿಷತ್ತಿನ ದತ್ತಿ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಶಿವಬಸವ ಸ್ವಾಮೀಜಿ, ಪ್ರಾಧ್ಯಾಪಕ ವಿಜಯ ಹನೂರು ಅವರಿಂದ ಅಷ್ಟಾವರಣಗಳಲ್ಲಿ ಗುರು ಕುರಿತು ದತ್ತಿ ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಮುಖ್ಯ ಅತಿಥಿಗಳು : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಅಕಾಡೆಮಿ ಆಫ್ ಫ್ಯಾಮಿಲಿ ಫಿಸಿಷಿಯನ್ಸ್ ಆಫ್ ಇಂಡಿಯಾ, ಜೆಎಸ್‌ಎಸ್ ಆಸ್ಪತ್ರೆ:** ಎಎಫ್‌ಪಿಐಕಾನ್ ಕರ್ನಾಟಕ–2022, ಫ್ಯಾಮಿಲಿ ಮೆಡಿಸಿನ್ ಅಪ್‌ಡೇಟ್ ಕುರಿತು 3ನೇ ರಾಜ್ಯ ಮಟ್ಟದ ಸಮ್ಮೇಳನದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಪ್ರಾಸ್ತಾವಿಕ ನುಡಿ: ಡಾ.ಆರ್.ಬಾಲಸುಬ್ರಮಣಿಯಮ್, ಮುಖ್ಯ ಅತಿಥಿಗಳು: ಡಿಹೆಚ್‌ಓ ಡಾ.ಹೆಚ್.ಕೆ.ಪ್ರಸಾದ್, ಜಿಲ್ಲಾ ಎಎಫ್‌ಪಿಐ ಅಧ್ಯಕ್ಷ ಡಾ.ಕೆ.ನಾಗೇಂದ್ರಪ್ರಸಾದ್, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಮೈಸೂರು ಶಾಖೆ ಅಧ್ಯಕ್ಷ ಡಾ.ವೈ.ಎಂ.ಶಿವಕುಮಾರ್, ಎಎಫ್‌ಪಿಐ ರಾಷ್ಟ್ರೀಯ ಅಧ್ಯಕ್ಷ ಡಾ.ರಾಮನ್‌ಕುಮಾರ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಮಧ್ಯಾಹ್ನ 12ಕ್ಕೆ.

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕಾರ್ಯಕ್ರಮ



■ **ವನರಂಗ:** ಶ್ರೀಮತಿ ಸವಿತಾ ಚಿರಕುನ್ನಯ್ಯ, ಮಂಡ್ಯ ಅವರಿಂದ ಪೂಜಾ ಕುಣಿತ, ಡಾ.ಮೈಸೂರು ಗುರುರಾಜ್ ಮತ್ತು ತಂಡದಿಂದ ನೀಲಗಾರರ ಮೇಳ, ಸಂಜೆ 5ಕ್ಕೆ.

■ **ಶ್ರೀರಂಗಮಂದಿರ (ಚಲನಚಿತ್ರೋತ್ಸವ) :** ಬೆಳಗ್ಗೆ 10.30ರಿಂದ ರಾಂಚಿ ಪಖಾರ (ಹಿ), ನಿರ್ದೇಶನ: ಆದಿತ್ಯ ರಾನಡೆ, ಮಧ್ಯಾಹ್ನ 12ರಿಂದ ದಿ ಪ್ರೈಸ್ ಆಫ್ ಫ್ರೀ (ಇ), ನಿರ್ದೇಶನ : ಡೆರಿಕ್ ಡೊನೆನ್, ಮಧ್ಯಾಹ್ನ 2ರಿಂದ ಟೇಕ್ ಆಫ್ (ಮ), ನಿರ್ದೇಶನ: ಮಹೇಶ್ ನಾರಾಯಣನ್.

■ **ಬಿ.ವಿ. ಕಾರಂತ ರಂಗಚಾವಡಿ:** ಬೆಳಗ್ಗೆ 10.30ಕ್ಕೆ ರಾಷ್ಟ್ರೀಯ ವಿಚಾರ ಸಂಕಿರಣ, ಬೆಳಗ್ಗೆ 10ರಿಂದ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ, ವಿಷಯ: ವೈವಿಧ್ಯತೆಯಲ್ಲಿ ಭಾರತೀಯತೆ, ಸಂಜೆ 4ರಿಂದ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ವಿಷಯ: ಪ್ರಾಚೀನ ರಂಗಭೂಮಿ ಮತ್ತು ಭಾರತೀಯತೆ, ಉಪನ್ಯಾಸ : ಸಾಹಿತಿ ಬಾಬು ಕೃಷ್ಣಮೂರ್ತಿ, ಸಮಾರೋಪ ನುಡಿ : ಸಂಸ್ಕೃತಿ–ಪರಂಪರೆ ಚಿಂತಕ ಸು. ರಾಮಣ್ಣ.

■ **ಭೂಮಿಗೀತ :** ಕಲಾಸುರುಚಿ ತಂಡದಿಂದ ಲೀಲಾವತಿ (ಕನ್ನಡ) ನಾಟಕ ಪ್ರದರ್ಶನ, ರಚನೆ : ಶಶಿಧರ ಡೋಂಗ್ರೆ, ನಿರ್ದೇಶನ : ಪ್ರೊ. ಹೆಚ್.ಎಸ್. ಉಮೇಶ್, ಸಂಜೆ 6.30 ರಿಂದ.

■ **ಸಂಪತ್ ರಂಗಮಂದಿರ :** ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾ ಸಂಘದಿಂದ ಚಂದ್ರಹಾಸ (ಕನ್ನಡ) ನಾಟಕ ಪ್ರದರ್ಶನ, ರಚನೆ : ಕುವೆಂಪು, ನಿರ್ದೇಶನ : ಪ್ರಮೋದ್ ಶಿಗ್ಗಾಂವ್, ಸಂಜೆ 7ರಿಂದ.

■ **ಕಲಾಮಂದಿರ:** ತಮಿಳುನಾಡಿನ ಮನಲ್‌ಮಾಗುಡಿ ಥಿಯೇಟರ್ ಲ್ಯಾಂಡ್ ಕಲಾವಿದರಿಂದ ಇಡಕಿಣಿ ಕಥಾಯರಥಂ (ತಮಿಳು) ನಾಟಕ ಪ್ರದರ್ಶನ, ರಚನೆ, ನಿರ್ದೇಶನ: ಎಸ್.ಮುರುಘಭೂಪತಿ, ಸಂಜೆ 7.30ರಿಂದ.

■ **ದಕ್ಷಿಣ ಭಾರತದ ಅತೀ ದೊಡ್ಡ ಫ್ಯಾಷನ್ ವೀಕ್:** ಮೈಸೂರು ಫ್ಯಾಷನ್ ವೀಕ್ ಸೀಸನ್–6, ಸ್ಥಳ: ಮೈಸೂರು ಯೂನಿಯನ್, ಸಂಜೆ 4ರಿಂದ.

■ **ಶ್ರೀ ಶಾರದಾ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್:** ಸ್ವರಾಂಜಲಿ–22, ಹಣ್ಣೆಲೆ ಚಿಗುರೆಲೆ, ಚಲನಚಿತ್ರಗೀತೆಗಳ ರಸ ಸಂಜೆ, ಮುಖ್ಯ ಅತಿಥಿಗಳು: ಅಕಾಡೆಮಿ ಆಫ್ ಕ್ರಿಯೇಟಿವ್ ಟೀಚಿಂಗ್ ಛೇರ್‌ಮನ್ ಡಾ.ಗುರುರಾಜ್ ಕರಜಗಿ, ವಿಶೇಷ ಆಹ್ವಾನಿತರು: ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ, ಅಧ್ಯಕ್ಷತೆ: ಪ್ರಾಧ್ಯಾಪಕ ಡಾ.ಹೆಚ್.ಎನ್.ದಿನೇಶ್, ಉಪಸ್ಥಿತರು: ಡಾ.ಲಾವಣ್ಯ ಶೆಣೈ, ಶ್ರೀಮತಿ ಭುವನೇಶ್ವರಿ ವೆಂಕಟೇಶ್, ಸ್ಥಳ: ಮೈಸೂರು ಮೆಡಿಕಲ್ ಕಾಲೇಜು ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಜೆ.ಕೆ.ಮೈದಾನ, ಸಂಜೆ 4.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಶಿವಕಾಂತಾನಂದ ಅವರಿಂದ ರಾಜಯೋಗ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ನಾಗಾನಂದ ದತ್ತಾತ್ರೇಯ ಮಠ :** ಭಗವಾನ್ ಶ್ರೀ ದತ್ತಾತ್ರೇಯ ಸ್ವಾಮಿಯವರ 47ನೇ ವರ್ಷದ ಸಪ್ತಾಹ, ಕಳಸ ಸ್ಥಾಪನೆ, ಗಣಪತಿ ಪೂಜೆ, ವರುಣ ಪೂಜೆ, ಕಂಕಣ ಬಂಧನ, ಅಭಿಷೇಕ, ವಿಷ್ಣು ಸಹಸ್ರನಾಮ, ದತ್ತ ಸಹಸ್ರನಾಮ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11ರಿಂದ ಭಜನೆ, ಶ್ರೀ ದತ್ತಾತ್ರೇಯ ಉತ್ಸವ, ಔದಂಬರ ಪೂಜೆ, ಮ. 1.30ಕ್ಕೆ ಮಹಾಮಂಗಳಾರತಿ, ಶ್ರೀಯವರಿಂದ ಪ್ರವಚನ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಭಜನೆ, ರಾತ್ರಿ 8ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ಮಠದ ಆವರಣ, ಬೆಲವತ್ತ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ –ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ–ರೋಹಿಣಿ ಸುಧಾಮ್, ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 9.40 ನಮ್ಮ ಆರೋಗ್ಯ, ಬಾಯಿ–ದೈಹಿಕ ಆರೋಗ್ಯದ ಕೈಗನ್ನಡಿ ಕುರಿತು ಡಾ.ಸ್ಮಿತಾ ಅವರೊಂದಿಗೆ ಮಾತುಕತೆ, 10.00 ಕಥೆ ಕೇಳು ಪುಟ್ಟಾ–ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಮುಖಾಮುಖಿ–ಇಂಗ್ಲೀಷ್ ಭಾಷೆಯ ಅಧ್ಯಯನ ಕುರಿತು ಮಕ್ಕಳ ಪ್ರಶ್ನೆಗೆ ಉತ್ತರಿಸುತ್ತಾರೆ ಆರ್. ಸದಾನಂದ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಕೆ.ಎಂ. ಕುಸುಮ, ವೃಂದಗಾನ, 12.45 ಜನಪದ ಸಂಗೀತ–ಮದ್ದೂರಮ್ಮ ಮತ್ತು ತಂಡ, 1.20 ಭಾವಗೀತೆ–ಎಂ.ಜೆ.ದಿವ್ಯಾ, 3.45 ಯಕ್ಷಗಾನ ತಾಳ ಮದ್ದಲೆ–ಪ್ರಸಂಗ–ಪಾಂಡವ–ಕೌರವ ಜನನ, ಪ್ರಸ್ತುತಿ –ಕುಕ್ಕುವಳ್ಳಿಯ ತೆಂಕುತಿಟ್ಟಿ ಯಕ್ಷಗಾನ ವೇದಿಕೆ ಸದಸ್ಯರು, 6.50 ಕೃಷಿರಂಗ–ಕೃಷಿ ಲೋಕ, ಕೃಷಿ ಮಾಹಿತಿ, ಜನಪದಗೀತೆಗಳು, 8.00 ಯುವವಾಣಿ–ಯುವ ಪ್ರತಿಭೆ–ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯ ಕಲಾವಿದೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಕೀರ್ತನಾ ಅವರೊಂದಿಗೆ ಮಾತುಕತೆ, 9.15 ರಂಗಗೀತೆಗಳು–ಸದಾರಮೆ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಂಡಿತ್ ಗೋವಿಂದ್ ಪ್ರಸಾದ್ ಜೈಪುರ್ ವಾಲೆ– ಗಾಯನ

■ **ದಸರಾ ವಸ್ತುಪ್ರದರ್ಶನ :** ಸಂಜೆ 6.30 ರಿಂದ ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಕಾನೂನು ಅರಿವು ಬಗ್ಗೆ ನಾಟಕ, ಸಂಜೆ 7 ರಿಂದ ಚಾಮುಂಡೇಶ್ವರಿ ಭಜನಾ ಮಂಡಳಿಯ ಸಿ. ಶಕುಂತಲಾ ಅವರಿಂದ ಭಾವಗೀತೆ, ರಾತ್ರಿ 8 ರಿಂದ ಚಿದಂಬರ ನಟೇಶ ನಾಟ್ಯ ಶಾಲೆಯ ಸುನಿತಾ ಅವರಿಂದ ನೃತ್ಯ ಕಾರ್ಯಕ್ರಮ, ಸ್ಥಳ: ಪಿ. ಕಾಳಿಂಗರಾವ್ ಕಲಾ ಮಂಟಪ.


■ **ನಾದಬ್ರಹ್ಮ ಸಂಗೀತ ಸಭಾ :** ಹೆಚ್.ಆರ್. ಲೀಲಾವತಿ ಮತ್ತು ಡಾ. ವಸುಂಧರಾ ದೊರೆಸ್ವಾಮಿ ಅವರಿಗೆ ಅಭಿನಂದನಾ ಕಾರ್ಯಕ್ರಮ, ಡಾ.ವಸುಂಧರಾ ದೊರೆಸ್ವಾಮಿ ಅವರಿಂದ ಕ್ಷಾತ್ರ ದ್ರೌಪದಿ ನಾಟಕ ಪ್ರದರ್ಶನ, ಸ್ಥಳ: ಶ್ರೀನಾದಬ್ರಹ್ಮ ಸಂಗೀತ ಸಭಾ, ಸಂಜೆ 6ಕ್ಕೆ.

ಬಿಳುಗಲಿ ಗ್ರಾಮದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಬೆಳಗ್ಗೆ 10ಕ್ಕೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಉದ್ಘಾಟನೆ: ಬಿಳುಗಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರೂಪಶ್ರೀ, ಸಂಜೆ 4ಕ್ಕೆ ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ : ನಂಜನಗೂಡು ಉಪವಿಭಾಗಾಧಿಕಾರಿ ಗೋವಿಂದರಾಜು, ಸಂಪನ್ಮೂಲ ವ್ಯಕ್ತಿ ವಾಸು ಅವರಿಂದ ವೃದ್ಧಾಪ್ಯದಲ್ಲಿ ಯಶಸ್ವಿ ಜೀವನ ಕುರಿತು ಉಪನ್ಯಾಸ, ಮಲ್ಕುಂಡಿ ಮಹದೇವಸ್ವಾಮಿ ಅವರಿಂದ ಉಪನ್ಯಾಸ.



ಕೃಷ್ಣರಾಜ ಕ್ಷೇತ್ರದಲ್ಲೂ ವಿವಿಧ ಪಕ್ಷಗಳ ಬಹು ಆಕಾಂಕ್ಷಿಗಳು



ಕ್ಷೇತ್ರದ ಶಾಸಕರ ಪರಂಪರೆ

1967	ಎಸ್.ಚೆನ್ನಯ್ಯ	(ಪಕ್ಷೇತರ)
1972	ಡಿ.ಸೂರ್ಯನಾರಾಯಣ	(ಕಾಂಗ್ರೆಸ್)
1978	ಹೆಚ್.ಗಂಗಾಧರನ್	(ಜನತಾ ಪಕ್ಷ)
1983	ಎನ್.ಹೆಚ್.ಗಂಗಾಧರ	(ಬಿಜೆಪಿ)
1985	ವೇದಾಂತ ಹೆಮ್ಮಿಗೆ	(ಜನತಾ ಪಕ್ಷ)
1989	ಕೆ.ಎನ್.ಸೋಮಸುಂದರ	(ಕಾಂಗ್ರೆಸ್)
1994	ಎಸ್.ಎ.ರಾಮದಾಸ್	(ಬಿಜೆಪಿ)
1999	ಎಸ್.ಎ.ರಾಮದಾಸ್	(ಬಿಜೆಪಿ)
2004	ಎಂ.ಕೆ. ಸೋಮಶೇಖರ್	(ಜನತಾ ದಳ)
2008	ಎಸ್.ಎ.ರಾಮದಾಸ್	(ಬಿಜೆಪಿ)
2013	ಎಂ.ಕೆ.ಸೋಮಶೇಖರ್	(ಕಾಂಗ್ರೆಸ್)
2018	ಎಸ್.ಎ.ರಾಮದಾಸ್	(ಬಿಜೆಪಿ)


ರಾಮದಾಸ್


ಸೋಮಶೇಖರ್


ರಾಜೀವ್


ಪ್ರದೀಪ್


ಗುರುಪಾದಸ್ವಾಮಿ


ಮಲ್ಲೇಶ್


ಫಣೀಶ್


ನವೀನ್‌ಕುಮಾರ್


ಶ್ರೀವತ್ಸ


ರವಿಚಂದ್ರಗೌಡ


ಪ್ರಕಾಶ್ ಪ್ರಿಯದರ್ಶಿನಿ


ಭಾಸ್ಕರ್


ಅಮ್ಮ ಸಂತೋಷ್


ಶೈಲೇಂದ್ರ

■ ಎಂ.ಟಿ.ಯೋಗೇಶ್ ಕುಮಾರ್

ಹಳೆ ಮೈಸೂರು ವಿಭಾಗದ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ ಜಿಲ್ಲೆಗಳಲ್ಲೇ ಅತೀ ಹೆಚ್ಚು ಬ್ರಾಹ್ಮಣ ಮತದಾರರನ್ನು ಹೊಂದಿರುವ ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಮುಂಬರುವ ಚುನಾವಣೆಯಲ್ಲಿ ಸ್ಪರ್ಧೆಗಿಳಿಯಲು ಟಿಕೆಟ್‌ಗಾಗಿ ಪ್ರಮುಖ ಮೂರು ಪಕ್ಷಗಳಲ್ಲೂ ಹಲವರು ಲಾಬಿ ಆರಂಭಿಸಿದ್ದಾರೆ.

ಈ ಕ್ಷೇತ್ರದಲ್ಲಿ ಈವರೆಗೆ ನಡೆದಿರುವ 12 ಚುನಾವಣೆಗಳಲ್ಲಿ ಐದು ಬಾರಿ ಬಿಜೆಪಿ ಹಾಗೂ ಕಾಂಗ್ರೆಸ್ ಮತ್ತು ಜನತಾ ಪರಿವಾರ ತಲಾ ಮೂರು ಬಾರಿ ಗೆಲುವು ಸಾಧಿಸಿದ್ದರೆ, 1967ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿ ಎಸ್.ಚನ್ನಯ್ಯ ಗೆಲುವು ಸಾಧಿಸಿದ್ದರು. ಕೆ.ಆರ್.ಕ್ಷೇತ್ರ ಬಿಜೆಪಿಯ ಭದ್ರಕೋಟೆ ಎನಿಸಿದ್ದರೂ, ಕಾಂಗ್ರೆಸ್ ಮತ್ತು ಜೆಡಿಎಸ್ ಕ್ಷೇತ್ರದಲ್ಲಿ ಪ್ರಬಲವಾಗಿವೆ ಎಂಬುದನ್ನು ತಳ್ಳಿ ಹಾಕಲಾಗದು.

2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದ ಶಾಸಕ ಎಸ್.ಎ.ರಾಮದಾಸ್ ಈ ಕ್ಷೇತ್ರದಿಂದ ಒಟ್ಟು 4 ಬಾರಿ ಆಯ್ಕೆಯಾಗಿದ್ದು, ಮುಂದಿನ ಚುನಾವಣೆಯಲ್ಲೂ ಸ್ಪರ್ಧಿಸಿ, 5ನೇ ಬಾರಿಗೆ ಶಾಸಕರಾಗಿ ದಾಖಲೆ ನಿರ್ಮಿಸುವ ನಿಟ್ಟಿನಲ್ಲಿ ಮತ್ತೆ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ರಾಮದಾಸ್ ಅಭಿವೃದ್ಧಿ ವಿಚಾರದಲ್ಲಿ ವಿಶಿಷ್ಟ ಶೈಲಿ ಅನುಸರಿಸುತ್ತಾ ಬಂದಿದ್ದು, ಕ್ಷೇತ್ರದ ಪ್ರತಿಯೊಬ್ಬ ಮತದಾರರ ಸಮಗ್ರ ಮಾಹಿತಿಯನ್ನು ಹೊಂದಿದ್ದಾರೆ. ಪ್ರತಿ ಮತದಾರನ ಬಗ್ಗೆ ವಿಶೇಷ ಆಸ್ಥೆ ವಹಿಸಿದ್ದಾರೆ. ಪಕ್ಷಾತೀತ ಹಾಗೂ ಜಾತ್ಯತೀತವಾಗಿ ಕ್ಷೇತ್ರದ ಪ್ರತಿ ಮನೆ ತಲುಪುವಂತಹ ಯೋಜನೆಗಳ ನೀಡಿ, ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಪ್ರಧಾನಿ ಮೋದಿ ಹುಟ್ಟು ಹಬ್ಬದ ಅಂಗವಾಗಿ ಕಳೆದ ಕೆಲ ವರ್ಷಗಳಿಂದ ವಾರಗಟ್ಟಲೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರತಿಯೊಂದು ಇಲಾಖೆಯಿಂದಲೂ ದೊರೆಯುವ ಸೌಲಭ್ಯಗಳನ್ನು ಕ್ಷೇತ್ರದ ಜನರ ಮನೆ ಬಾಗಿಲಿಗೆ ತಲುಪಿಸುವ ಮೂಲಕ ಬಿಜೆಪಿ ವರಿಷ್ಠರ ಗಮನ ಸೆಳೆದಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ನಿಕಟ ಬಾಂಧವ್ಯ ಹೊಂದಿರುವ ರಾಮದಾಸ್, ತಮ್ಮ ಅಭಿವೃದ್ಧಿ ಕಾರ್ಯಗಳ ಮೂಲಕ ಪ್ರಧಾನಿಯವರ ಮೆಚ್ಚುಗೆಯನ್ನು ಪಡೆದಿದ್ದು, ವಿಶ್ವ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಮೋದಿ ವೇದಿಕೆಯಲ್ಲೇ ರಾಮದಾಸರಿಗೆ ಪ್ರೀತಿ ಗುದ್ದು ನೀಡಿ, ಕುಶಲ ವಿಚಾರಿಸುವ ಮೂಲಕ ತಮ್ಮ ಅಭಿಮಾನವನ್ನು ಮೆರೆದಿದ್ದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸಹ ಹಲವು ವರ್ಷಗಳಿಂದ ಬಿಜೆಪಿಯಲ್ಲಿದ್ದಾರೆ. ಹೆಚ್.ವಿ.ರಾಜೀವ್ ಅಭಿಮಾನಿ ಬಳಗದ ಬ್ಯಾನರ್‌ನಡಿ ಅವರು ಸತತವಾಗಿ ಸ್ವಚ್ಛತಾ ಕಾರ್ಯ ಹಾಗೂ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡು ಜನರಲ್ಲಿ ಭರವಸೆ ಮೂಡಿಸಿದ್ದಾರೆ. ಅವರ ಪಕ್ಷನಿಷ್ಠೆ ಗಮನಿಸಿ ಅವರನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಈ ಸಂದರ್ಭದಲ್ಲಿ ರಾಜೀವ್ ಮೈಸೂರು ನಗರ ವ್ಯಾಪ್ತಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದರು. ದಶಕಗಳಿಂದ ಪಕ್ಷದ ಕಟ್ಟಾಳುವಾಗಿ ಕಾರ್ಯ ನಿರ್ವಹಿಸುತ್ತಿರುವ ಹಾಲಿ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮೈಲ್ಯಾಕ್ ಮಾಜಿ ಅಧ್ಯಕ್ಷ ಎನ್.ವಿ.ಫಣೀಶ್, ಪಾಲಿಕೆ ಸದಸ್ಯರಾದ ಎಂ.ಪಿ.ರಮೇಶ್ ಮತ್ತು ಮಾ.ವಿ.ರಾಮಪ್ರಸಾದ್ ಸಹ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದು, ಇವರೆಲ್ಲರೂ ಬ್ರಾಹ್ಮಣ ಸಮುದಾಯದವರು ಎಂಬುದು ವಿಶೇಷ. 2018ರಲ್ಲಿ ನಡೆದ ಚುನಾವಣೆಯಲ್ಲಿ ನಟಿ ಮಾಳವಿಕ ಕೂಡ ಕೆ.ಆರ್.ಕ್ಷೇತ್ರದ ಬಿಜೆಪಿ ಟಿಕೆಟ್ ಪಡೆಯಲು ತೀವ್ರ ರೀತಿ ಪ್ರಯತ್ನಿಸಿದ್ದರು. ಜೊತೆಗೆ ಮೈಸೂರಲ್ಲೇ ಮನೆ ಮಾಡಲೂ ಮುಂದಾಗಿದ್ದರು. ಒಟ್ಟಾರೆ ಬ್ರಾಹ್ಮಣ ಸಮುದಾಯದ ಆಕಾಂಕ್ಷಿಗಳು ಕೆ.ಆರ್.ಕ್ಷೇತ್ರದಲ್ಲಿ ಅಧಿಕ ಮಂದಿ ಇದ್ದಾರೆ. ಬ್ರಾಹ್ಮಣ ಸಮುದಾಯದವರಾದ ರಾಮದಾಸ್ 6 ಬಾರಿ ಸ್ಪರ್ಧಿಸಿ, 4 ಬಾರಿ ಗೆಲುವು ಸಾಧಿಸಿದ್ದಾರೆ. 2004ರಲ್ಲಿ ಅವರದೇ ಸಮುದಾಯದವರಾದ ಮಾಜಿ ಸಚಿವ ಎಸ್.ರಮೇಶ್ ಅವರು ಬೆಂಗಳೂರಿನಿಂದ ಕೆ.ಆರ್. ಕ್ಷೇತ್ರಕ್ಕೆ ವಲಸೆ ಬಂದು ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ ಮತಗಳ ವಿಭಜನೆಯಿಂದ ರಾಮದಾಸ್ ಅಂದು ಜನತಾದಳ ಅಭ್ಯರ್ಥಿಯಾಗಿದ್ದ ಎಂ.ಕೆ.ಸೋಮಶೇಖರ್ ವಿರುದ್ಧ ಅಲ್ಪ ಮತಗಳ ಅಂತರದಲ್ಲಿ ಪರಾಭವಗೊಂಡಿದ್ದರು. ಅದೇ ರೀತಿ 2013ರಲ್ಲಿ ಕೆಜೆಪಿಯಿಂದ ಹೆಚ್.ವಿ. ರಾಜೀವ್ ಸ್ಪರ್ಧಿಸಿದಾಗಲೂ ಬ್ರಾಹ್ಮಣ ಸಮುದಾಯದ ಮತಗಳು ವಿಭಜನೆಗೊಂಡು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎಂ.ಕೆ.ಸೋಮಶೇಖರ್ ಜಯ ಸಾಧಿಸಿದರು. ವಿಶೇಷವೆಂದರೆ ರಾಮದಾಸ್ ಗೆಲುವು ಸಾಧಿಸಿದ ನಾಲ್ಕೂ ಚುನಾವಣೆಗಳಲ್ಲೂ ಭಾರೀ ಮತಗಳ ಅಂತರದಿಂದಲೇ ಗೆದ್ದು ಬೀಗಿದ್ದಾರೆ.

ಒಮ್ಮೆ ಜನತಾದಳದಿಂದ ಹಾಗೂ ಮತ್ತೊಮ್ಮೆ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಮಾಜಿ ಶಾಸಕ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಆಪ್ತ ಎಂ.ಕೆ.ಸೋಮಶೇಖರ್, ಈ ಬಾರಿಯೂ ಕಾಂಗ್ರೆಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದು, ನಗರ ಪಾಲಿಕೆ ಸದಸ್ಯರಾಗಿದ್ದ ವೇಳೆ 2004ರಲ್ಲಿ ಸಿದ್ದರಾಮಯ್ಯನವರ ಶಿಫಾರಸ್ಸಿನಿಂದ ಜನತಾದಳ ಟಿಕೆಟ್ ಪಡೆದು ಕೆ.ಆರ್.ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದ ಸೋಮಶೇಖರ್, 2013ರಲ್ಲಿ ಕಾಂಗ್ರೆಸ್‌ನಿಂದ ಗೆದ್ದಾಗ ತಮ್ಮ ರಾಜಕೀಯ ಗುರುಗಳಾದ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ತಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕೆಲಸಗಳನ್ನು ಮಾಡಿರುವುದರಿಂದ ಈ ಬಾರಿಯೂ ತಮಗೇ ಟಿಕೆಟ್ ದೊರೆಯುತ್ತದೆ ಎಂಬ ನಿರೀಕ್ಷೆಯಿಂದ ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದರೂ ಕೂಡ ಕ್ಷೇತ್ರದ ಮತದಾರರೊಂದಿಗೆ ನಿಕಟ ಸಂಪರ್ಕವನ್ನು ಎಂ.ಕೆ.ಸೋಮಶೇಖರ್ ಹೊಂದಿದ್ದಾರೆ.

ಮಾಜಿ ಕಾರ್ಪೊರೇಟರ್ ಎಂ.ಪ್ರದೀಪ್ ಕುಮಾರ್, ಮುಡಾ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್ ಕುಮಾರ್ ಪುತ್ರ ನವೀನ್ ಕುಮಾರ್, ಕೆಪಿಸಿಸಿ ಕಾರ್ಯದರ್ಶಿ ಭಾಸ್ಕರ್, ಹಿರಿಯ ಮುಖಂಡರೂ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗುರುಪಾದಸ್ವಾಮಿ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಮಾಜಿ ಕಾರ್ಪೊರೇಟರ್ ಎಂ.ಪ್ರದೀಪ್ ಕುಮಾರ್ ಅವರು ಕ್ಷೇತ್ರದಲ್ಲಿ ಹೆಚ್ಚಿನ ಮತದಾರರನ್ನು ಹೊಂದಿರುವ ಎರಡನೇ ಸಮುದಾಯವಾದ ವೀರಶೈವ ಲಿಂಗಾಯತ ಸಮುದಾಯದವರಾಗಿದ್ದು, ವಿದ್ಯಾರ್ಥಿ ದೆಸೆಯಿಂದಲೂ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಾವು ಶಾಸಕರಾಗಲೇಬೇಕು ಎಂಬ ಛಲದಿಂದ ಮುನ್ನಡೆಯುತ್ತಿರುವ ಪ್ರದೀಪ್ ಕುಮಾರ್ ಕ್ಷೇತ್ರದಲ್ಲಿ ಯುವಕರ ಪಡೆಯ ಸಹಕಾರದೊಂದಿಗೆ ಕಳೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕ್ಷೇತ್ರದಲ್ಲಿ ಸಂಚಲನ ಮೂಡಿಸಿದ್ದರಾದರೂ, ಪರಾಭವಗೊಂಡಿದ್ದರು. ಕ್ಷೇತ್ರದ ಮತದಾರರಿಗೆ ಈಗ ಚಿರಪರಿಚಿತರಾಗಿರುವ ಇವರು, ಕಾಂಗ್ರೆಸ್ ಟಿಕೆಟ್ ತಮಗೇ ದೊರೆಯುತ್ತದೆ ಎಂಬ ಆಶಾಭಾವನೆಯಲ್ಲಿದ್ದಾರೆ. ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ನವೀನ್ ಕುಮಾರ್ ಮತ್ತು ಕೆಪಿಸಿಸಿ ಕಾರ್ಯದರ್ಶಿ ಭಾಸ್ಕರ್ ಅವರು ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿದ್ದಾರೆ.

ಗುರುಪಾದಸ್ವಾಮಿ ಎರಡು ದಶಕದಿಂದಲೂ ಕಾಂಗ್ರೆಸ್‌ನಲ್ಲಿ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿಯುತ್ತಾ ಬಂದಿದ್ದಾರೆ. 2013ರಲ್ಲಿ ವೀರಶೈವ ಲಿಂಗಾಯತ ಸಮುದಾಯ ಬಿಜೆಪಿ ಪರವಿದೆ ಎಂದು ಹೇಳುತ್ತಿರುವಾಗಲೇ ಸಿದ್ದರಾಮಯ್ಯನವರ ಪರ ನಿಂತ ಗುರುಪಾದಸ್ವಾಮಿ ನೀಡಿದ ಒಂದು ಪತ್ರಿಕಾ ಹೇಳಿಕೆ ಇಡೀ ವೀರಶೈವ ಲಿಂಗಾಯತ ಸಮುದಾಯವೇ ಚಿಂತನೆ ನಡೆಸಬೇಕಾಗಿ ಬಂದಿತ್ತು. ಹೀಗೆ ಪಕ್ಷ ನಿಷ್ಠೆ ಹಾಗೂ ಸಿದ್ದರಾಮಯ್ಯನವರ ನಾಯಕತ್ವಕ್ಕೆ ಮಾರುಹೋಗಿರುವ ಗುರುಪಾದಸ್ವಾಮಿಯವರ ಬಗ್ಗೆ ಆ ಪಕ್ಷದ ನಾಯಕರಲ್ಲಿ ಒಳ್ಳೆಯ ಅಭಿಪ್ರಾಯವಿದ್ದು, ಅದು ಇವರ ಪಾಲಿಗೆ ವರದಾನವಾಗುವ ಸಾಧ್ಯತೆ ಇದೆ. ಕಾಂಗ್ರೆಸ್‌ನಿಂದ ಟಿಕೆಟ್ ಆಕಾಂಕ್ಷಿಯಾಗಿರುವ ಗುರುಪಾದಸ್ವಾಮಿ, 1993ರಿಂದ ಕಾಂಗ್ರೆಸ್‌ನ ವಿವಿಧ ಹುದ್ದೆಗಳಲ್ಲಿ ಜವಾಬ್ದಾರಿ ಸಮರ್ಥವಾಗಿ ನಿಭಾಯಿಸಿದ್ದಾರೆ. ಇತ್ತೀಚೆಗೆ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಡೆದ 'ಭಾರತ್ ಜೋಡೋ' ಯಾತ್ರೆಯಲ್ಲಿ ಚಾಮರಾಜನಗರ ಹಾಗೂ ರಾಯಚೂರು ಜಿಲ್ಲೆಯಲ್ಲಿ 'ರಾಷ್ಟ್ರೀಯ ಯಾತ್ರಿಗಳ ಉಪಚಾರ ಸಮಿತಿ'ಯ ಸದಸ್ಯರಾಗಿ ಸೇವೆ ಸಲ್ಲಿಸಿ, ಗಮನ ಸೆಳೆದಿದ್ದಾರೆ.

ವಿಪಕ್ಷ ನಾಯಕ ಸಿದ್ದರಾಮಯ್ಯ ಜನತಾ ಪರಿವಾರದಲ್ಲಿದ್ದಾಗ ಅವರ ಪ್ರಭಾವದಿಂದ ಈ ಕ್ಷೇತ್ರದಲ್ಲಿ ಜನತಾ ಪರಿವಾರದ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಿದ್ದರು. ಅವರು ಕಾಂಗ್ರೆಸ್ ಪಕ್ಷಕ್ಕೆ ಹೋದ ನಂತರ ಈ ಕ್ಷೇತ್ರದಲ್ಲಿ ಜೆಡಿಎಸ್ ಸಾಧನೆ ಅಷ್ಟೇನೂ ಸಮಾಧಾನಕರವಾಗಿಲ್ಲ. ಈ ಪಕ್ಷದಿಂದ ಟಿಕೆಟ್ ಪಡೆಯಲು ಕಳೆದ ಬಾರಿ ಸ್ಪರ್ಧಿಸಿದ್ದ ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್, ಎಸ್.ಪ್ರಕಾಶ್ ಪ್ರಿಯದರ್ಶಿನಿ, ಅಮ್ಮಾ ಸಂತೋಷ್, ರಾಜ್ಯ ವಕ್ತಾರ ಎನ್.ಆರ್. ರಾಮಚಂದ್ರೇಗೌಡ, ಮಾಜಿ ಉಪ ಮೇಯರ್ ಶೈಲೇಂದ್ರ ಆಕಾಂಕ್ಷಿಗಳಾಗಿದ್ದಾರೆ. ಆದರೆ ಜೆಡಿಎಸ್ ವರಿಷ್ಠರು ಈ ಮೂವರಲ್ಲಿ ಒಬ್ಬರನ್ನು ಕಣಕ್ಕಿಳಿಸಬಹುದು. ಇಲ್ಲವೆ ಕಾಂಗ್ರೆಸ್ ಇಲ್ಲವೇ ಬಿಜೆಪಿಯಲ್ಲಿ ಟಿಕೆಟ್ ವಂಚಿತರಾದವರನ್ನು ಕರೆತಂದು ಸ್ಪರ್ಧೆಗಿಳಿಸಬಹುದು ಎಂಬ ಮಾತಿದೆ.

ಶಾಸ್ತ್ರೀಯ ಸಂಗೀತ, ನೃತ್ಯ ಸಂಗಮ ಒಡಿಸ್ಸಿ ಉತ್ಸವ



ಮೈಸೂರು, ಡಿ.10(ಎಸ್‌ಪಿಎನ್)– ಮೈಸೂರು ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ರುದ್ರ ನೃತ್ಯಶಾಲೆ ಹಾಗೂ ಪುರಿ ಜಗನ್ನಾಥ್ ಕಲ್ಚರ್ ಅಂಡ್ ವೆಲ್ಫೇರ್ ಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಒಡಿಸ್ಸಿ ಉತ್ಸವ–2022 ಕಾರ್ಯಕ್ರಮವನ್ನು ಪುರಿ ಜಗನ್ನಾಥ್ ಕಲ್ಚರ್ ಅಂಡ್ ವೆಲ್ಫೇರ್ ಟ್ರಸ್ಟ್‌ನ ಘನಶ್ಯಾಮ್ ಪ್ರಧಾನ್ ಶನಿವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಕಠಿಣ ಪರಿಶ್ರಮ ಇರುತ್ತದೆ. ಸಾಧಕನಿಗೆ ಎಷ್ಟೇ ಅಡೆ ತಡೆ ಇದ್ದರೂ ಸಾಧನೆ ಒಂದೇ ಅವನ ಮುಖ್ಯ ಗುರಿಯಾಗಿರಬೇಕು ಎಂದರು. ಇತ್ತೀಚೆಗೆ ಯುವ ಜನತೆ ಶಾಸ್ತ್ರೀಯ ಸಂಗೀತ, ನೃತ್ಯ ಹಾಗೂ ಚಿತ್ರಕಲೆಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದಾರೆ. ಇದರಿಂದ ಕಲೆಯಿಂದ ವಿಮುಖರಾಗಿದ್ದ ಯುವ ಜನತೆ, ಈಗ ಪುನಃ ಕಲೆಯತ್ತ ಮರಳುತ್ತಿರುವುದು ಉತ್ತಮ ಸಂಗತಿ ಎಂದರು.

ಜಗತ್ತಿನಲ್ಲಿ ಭಾರತೀಯ ಪರಂಪರೆ ಮತ್ತು ಸಂಸ್ಕೃತಿಗೆ ಉತ್ತಮ ಅವಕಾಶವಿದೆ. ಇದು ನಮ್ಮ ಸಂಸ್ಕೃತಿ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಮ್ಮೆ ಪಡುವ ಸಂಗತಿ ಎಂದರು. ಈ ವೇಳೆ ಬೆಂಗಳೂರಿನ ಚೈತ್ರಗೌಡ, ಸೋಹಿನಿ ಬೋಸ್ ಬ್ಯಾನರ್ಜಿ, ಅನುಶ್ರೀ ಪದ್ಮನಾಭ, ಬೀದರ್‌ನ ಜ್ಯೋತಿ ಸಮಂತ ರೈ ಗೋಶಾಲ್, ಸುದರ್ಶನ್ ಸಾಹು, ಸಿಂಧೂ ಕಿರಣ್, ಸಮ ವೇದ್ ಮೌಲ, ಪೃಥೆ ಹವಲ್ದಾರ್, ಸ್ತುತ್ಯಶ್ರೀ ಬೆಹೊರ, ಶರ್ಮಿಳಾ ಮುಖರ್ಜಿ, ಸುರಜಿತ್ ಸೋಮ್, ಶ್ರೀಜಿತ ಸನ್ಯಾಲ್, ಬಿ.ಟಿ. ರವಿಶಂಕರ್, ಶ್ವೇತ ಶ್ರೀಧರನ್, ನಂದಿತಾ ಭಟ್ಟಾಚಾರ್ಯ, ಶ್ರೇಯಾನಷಿ ದಾಸ್, ಜಾನ್ವಿ ಮುದುಳಿ, ಪ್ರೀತಿ ಬ್ಯಾನರ್ಜಿ, ಸರಿತಾ ಮಿಶ್ರಾ, ಅನಹಿತ, ಸಹನಾ, ಮಾನಸಿ, ಈಶಾ ಅವರು ಕಲಾವಿದರು ಒಡಿಸ್ಸಿ ನೃತ್ಯ ಪ್ರದರ್ಶಿಸಿ, ಪ್ರೇಕ್ಷಕರ ಗಮನ ಸೆಳೆದರು.

ವೇದಿಕೆಯಲ್ಲಿ ಹಿರಿಯ ಕಲಾವಿದೆ ಕೃಪಾಫಡ್ಕೆ, ಶ್ಯಾಮ್‌ಹರಿ ಚಕ್ರ, ಭೂಷಣ್ ಅಕಾಡಮಿ ಪ್ರದರ್ಶಕ ಕಲೆಗಳ ಕೇಂದ್ರದ ಬದ್ರಿ ದಿವ್ಯಾ ಭೂಷಣ್, ಶ್ರೀಧರ್ ರಾಜೇ ಅರಸ್ ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ


ಮೈಸೂರಲ್ಲಿ ಡಿ.24ರಿಂದ 10 ದಿನ ಮಾಗಿ ಉತ್ಸವ

ಮೂಲಕ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಕೊರೊನಾ ಸಂಕಷ್ಟ ಪರಿಸ್ಥಿತಿಯಿಂದಾಗಿ ಎರಡು ವರ್ಷ ಸ್ಥಗಿತಗೊಂಡಿದ್ದ ಮಾಗಿ ಉತ್ಸವವನ್ನು ಈ ಬಾರಿ ಅದ್ಧೂರಿಯಾಗಿ ನಡೆಸಲು ಸರ್ವ ರೀತಿಯಲ್ಲೂ ತಯಾರಿ ನಡೆಸಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರ ಮಾರ್ಗದರ್ಶನ, ಸಲಹೆಯಂತೆ ಮೈಸೂರಿನ ಅರಮನೆ ಆವರಣದಲ್ಲಿ ಫಲಪುಷ್ಪ ಪ್ರದರ್ಶನ ನಡೆಸಲು ಭರದ ತಯಾರಿ ನಡೆಯುತ್ತಿದೆ. ಜಿಲ್ಲಾಡಳಿತ, ಮೈಸೂರು ಅರಮನೆ ಮಂಡಳಿ, ಪ್ರವಾಸೋದ್ಯಮ ಹಾಗೂ ತೋಟಗಾರಿಕೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಿರುವ ಮಾಗಿ ಉತ್ಸವದಲ್ಲಿ ವಿವಿಧ ಪುಷ್ಪಗಳಿಂದ ಕಾಶಿ ವಿಶ್ವನಾಥ ದೇವಾಲಯದ ಮಾದರಿ ರಚನೆ, ವಿದ್ಯುದ್ದೀಪಾಲಂಕಾರ, ಪೊಲೀಸ್ ಬ್ಯಾಂಡ್, ಶಬ್ದರಹಿತ ಪಟಾಕಿ ಸಿಡಿಸುವುದೂ ಸೇರಿದಂತೆ ನಿತ್ಯ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಅರಮನೆಗೆ ಭೇಟಿ ನೀಡಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಪ್ರತೀ ದಿನ ಬೆಳಗ್ಗೆ 10ರಿಂದ ರಾತ್ರಿ 9 ಗಂಟೆವರೆಗೆ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. 25,000 ಅಲಂಕಾರಿಕ ಹೂ ಕುಂಡಗಳು, ಗುಲಾಬಿ, ಕ್ರೈಸಾಂಥಿಯಮ್, ಪಿಂಗ್ ಪಾಂಗ್, ಕಾರ್ನೆಷನ್, ಆಸ್ಟ್ರಮೇರಿಯ, ಜರ್ಬೆರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂ ಡೈಸಿ, ಡ್ರೆಸಿನಾ ಸೇರಿದಂತೆ 4 ಲಕ್ಷ ಹೂಗಳು ಹಾಗೂ ಊಟಿ ಕಟ್ ಫ್ಲವರ್‌ಗಳಿಂದ ಅಲಂಕರಿಸಲಾಗುವುದು.

55 ಅಡಿ ಉದ್ದ, 12 ಅಡಿ ಅಗಲ, 28 ಅಡಿ ಎತ್ತರದ ಕಾಶಿ ವಿಶ್ವನಾಥ ದೇವಸ್ಥಾನ ಮಾದರಿಯ ಚಿತ್ರ, ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಚಿತ್ರ, ನಮೀಬಿಯಾ ದೇಶದಿಂದ ಆಮದು ಮಾಡಿಕೊಂಡಿರುವ ಚೀತಾ ಪ್ರಾಣಿಗಳು, ಯೋಗಾ ಫಾರ್ ಲೈಫ್ ಮಾದರಿ ಚಿತ್ರ, ರಾಜವಂಶಸ್ಥ ಜಯ ಚಾಮರಾಜ ಒಡೆಯರ್ ಅವರು ಸರ್ ಎಂ. ವಿಶ್ವೇಶ್ವರಯ್ಯ ಜೊತೆ ಸಂಭಾಷಣೆ ಮಾಡುತ್ತಿರುವ ಚಿತ್ರಗಳ ಪುಷ್ಪಾಲಂಕಾರ ಈ ಬಾರಿಯ ಮಾಗಿ ಉತ್ಸವದ ವಿಶೇಷಗಳಾಗಿವೆ. ರಂಗನತಿಟ್ಟು ಪಕ್ಷಿಧಾಮ, ಖ್ಯಾತ ಹಾಕಿ ಪಟು ಧ್ಯಾನ್‌ಚಂದ್, ಕಲಾವಿದ ರಾಜಾ ರವಿವರ್ಮ, ಗಜಪಡೆಯ ಲಕ್ಷ್ಮಿ ಮತ್ತು ದತ್ತಾತ್ರೇಯ, ಅಮರ್ ಜವಾನ್ ಯುದ್ಧ ಸ್ಮಾರಕ, ಸೆಲ್ಫಿ ಮಾಡೆಲ್, ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಮಾದರಿ, ಔಷಧಿಯುಕ್ತ ಅಲೋವೆರ, ತುಳಸಿ, ಮಲ್ಲಿಗೆ, ವೀಳ್ಯದೆಲೆ ಗಿಡಗಳ ವಿತರಣೆ ಮಾಡಲಾಗುವುದು.

ನಿತ್ಯ ರಾತ್ರಿ 7ರಿಂದ 9 ಗಂಟೆವರೆಗೆ ಅರಮನೆಗೆ ವಿದ್ಯುತ್ ದೀಪಾಲಂಕಾರ, ಡಿಸೆಂಬರ್ 31ರಂದು ರಾತ್ರಿ 11ರಿಂದ 12 ಗಂಟೆವರೆಗೆ ಪೊಲೀಸ್ ಬ್ಯಾಂಡ್, ನಂತರ ಹೊಸ ವರ್ಷಾಚರಣೆ ಪ್ರಯುಕ್ತ ಶಬ್ದರಹಿತ ಪಟಾಕಿ ಸಿಡಿಸಲಾಗುವುದು.

ರಾಜ್ಯಸಭೆಯಲ್ಲಿ ಮೇಕೆದಾಟು ಯೋಜನೆ ಕುರಿತು ಧ್ವನಿ ಎತ್ತಿದ ಮಾಜಿ ಪ್ರಧಾನಿ ದೇವೇಗೌಡ



ನವದೆಹಲಿ, ಡಿ.10– ಮೇಕೆದಾಟು ಯೋಜನೆಯಿಂದ ಹಳೇ ಮೈಸೂರು ಭಾಗಕ್ಕೆ ಕುಡಿಯಲು ನೀರು ಸಿಗಲಿದೆ. ಅದಕ್ಕಾಗಿ ನಮ್ಮ ಭಾಗದಲ್ಲಿ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆಯೇ ಹೊರತು ಬೇರೆ ರಾಜ್ಯದ ಗಡಿಯಲ್ಲಿ ಅಲ್ಲ. ಹೀಗಾಗಿ ಕೇಂದ್ರ ಸರ್ಕಾರ ಮೇಕೆದಾಟು ಯೋಜನೆ ವಿವಾದವನ್ನು ಬಗೆಹರಿಸಬೇಕು ಎಂದು ರಾಜ್ಯಸಭೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಆಗ್ರಹಿಸಿದ್ದಾರೆ.

ಮೇಕೆದಾಟು ವಿಚಾರವನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ವಿಷಮ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕದ ವಿವಿಧ ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳಿಗೆ ಅಗತ್ಯವಿರುವ ಅನುಮತಿಗಳನ್ನು ನೀಡಬೇಕೆಂದು ಕೇಂದ್ರಕ್ಕೆ ಮನವಿ ಮಾಡಿದರು.

ಮೇಕೆದಾಟು ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿದೆ. ಕರ್ನಾಟಕ ನೀರಿನ ಕೊರತೆಯ ರಾಜ್ಯ, ತುಂಗಭದ್ರಾ ಆಗಲೀ, ಮಹದಾಯಿಯಾಗಲೀ ಕೇಂದ್ರದ ಮುಂದೆ ಎಷ್ಟೋ ಯೋಜನೆಗಳು ಬಾಕಿ ಇವೆ. ಇಂದು ಹಳೇ ಮೈಸೂರು ಭಾಗದ ಒಂಬತ್ತು ಜಿಲ್ಲೆಗಳಲ್ಲಿ ಕುಡಿಯುವ ನೀರಿಗಾಗಿ ಮೊರೆ ಹೋಗುತ್ತಿದ್ದೇವೆ ಎಂದು ಶೂನ್ಯ ವೇಳೆಯಲ್ಲಿ ದೇವೇಗೌಡರು ಪ್ರಸ್ತಾಪಿಸಿದರು.

ಅನ್‌ಲೀಷ್ ಯುವ ಸಮೂಹ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ತೆರೆ

ಇರುವುದೊಂದೇ ಭೂಮಿ ಇದನ್ನು ನಮ್ಮ ಮುಂದಿನ ಪೀಳಿಗೆಗೆ ಸುರಕ್ಷಿತವಾಗಿ ಒಪ್ಪಿಸೋಣ

● ಯುವ ಶಕ್ತಿಗೆ ಮುಖ್ಯಮಂತ್ರಿ ಬೊಮ್ಮಾಯಿ ಕಿವಿಮಾತು ● ಕಲಿಯುವ ಹಸಿವಿದ್ದರೆ ಸಾಧನೆ ಸಾಧ್ಯ





ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ನಡೆದ 4ನೇ 'ಅನ್‌ಲೀಷ್ ಇನೋವೇಷನ್ ಲ್ಯಾಬ್ ಇಂಡಿಯಾ–2022' ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ವಿಜೇತ ತಂಡಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಗದು ಬಹುಮಾನ ವಿತರಿಸಿದರು. ಇನ್ಫೋಸಿಸ್ ಮುಖ್ಯಸ್ಥ ನಂದನ್ ನಿಲೇಕಣಿ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ಸಮ್ಮೇಳನದಲ್ಲಿ ಭಾಗವಹಿಸಿದ್ದ ಯುವಸಮೂಹವನ್ನು ಕಾಣಬಹುದು

ಮೈಸೂರು, ಡಿ.10(ಎಂಕೆ)– ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ 8 ದಿನಗಳ ಕಾಲ ನಡೆದ 4ನೇ 'ಅನ್‌ಲೀಷ್ ಇನೋವೇಷನ್ ಲ್ಯಾಬ್ ಇಂಡಿಯಾ–2022' ಯುವಸಮೂಹದ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಶನಿವಾರ ತೆರೆ ಬಿದ್ದಿತು.

ಇನ್ಫೋಸಿಸ್, ಹೆಚ್‌ಸಿಎಲ್ ಹಾಗೂ ಕಿಮೋನಿಕ್ಸ್ ಸಂಸ್ಥೆಗಳ ಸಹಯೋಗದಲ್ಲಿ ಆಯೋಜನೆಗೊಂಡಿದ್ದ 'ಅನ್‌ಲೀಷ್' ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಪಂಚದಾದ್ಯಂತದ 1 ಸಾವಿರ ಯುವಜನರು ಭಾಗವಹಿಸಿದ್ದು, ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಂಕ್ರಾಮಿಕವಲ್ಲದ ರೋಗಗಳು, ಮಾನಸಿಕ ಆರೋಗ್ಯ, ಶಿಕ್ಷಣ ಹಾಗೂ ಕುಡಿಯುವ ಶುದ್ಧ ನೀರು ಹಾಗೂ ಸ್ವಚ್ಛತೆ, ಬಡತನ ನಿರ್ಮೂಲನೆ, ಹವಾಮಾನ ವೈಪರೀತ್ಯ ಹತೋಟಿ, ಜಲಚರಗಳ ಸಂರಕ್ಷಣೆ ಎಂಬ 7 ಪ್ರಮುಖ ವಿಷಯಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಸಲಹೆಗಳನ್ನು ನೀಡಿದರು. ಅಲ್ಲದೆ ಪರಿಣಾಮಕಾರಿಯಾಗಿ ವಿಷಯ ಮಂಡಿಸಿದ ಎರಡು ತಂಡಗಳು ತಲಾ 5 ಸಾವಿರ ಯುಎಸ್ ಡಾಲರ್ ನಗದು ಬಹುಮಾನ ಗೆದ್ದುಕೊಂಡರು.

'ಅನ್‌ಲೀಷ್' ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಮಗಿರುವುದೊಂದೇ ಭೂಮಿ. ಅದು ಎಂದಿಗೂ ಗಾತ್ರದಲ್ಲಿ ಮತ್ತೆ ದೊಡ್ಡದಾಗುವುದಿಲ್ಲ. ಆದರೆ ಭೂಮಿಯನ್ನು ನಂಬಿರುವ ನಾವುಗಳು ಆರ್ಥಿಕವಾಗಿ ಸ್ಥಿತಿವಂತರಾಗುತ್ತೇವೆ, ಬೆಳೆಯುತ್ತೇವೆ. ಆದ್ದರಿಂದ ಹಿರಿಯರು ನಮಗೆ ಬಳುವಳಿಯಾಗಿ ನೀಡಿರುವ ಈ ಭೂಮಿಯನ್ನು ನಮ್ಮ ಮುಂದಿನ ಪೀಳಿಗೆಗೂ ಇರುವಂತೆಯೇ ನೀಡುವುದು ನಮ್ಮ ಮುಖ್ಯ ಜವಾಬ್ದಾರಿಯಾಗಿದೆ ಹೇಳಿದರು.

'ಅನ್‌ಲೀಷ್' ಎಂದರೆ ಯುವ ಜನರ ಆಲೋಚನಾ ಶಕ್ತಿ ಅನಾವರಣಗೊಳ್ಳುವ ಸಮ್ಮೇಳನ. ಇದರಲ್ಲಿ ಚಿಂತನಾ ಶಕ್ತಿ, ಕೌಶಲ್ಯತೆ ಹಾಗೂ ಉತ್ಸಾಹ ವ್ಯಕ್ತವಾಗುತ್ತದೆ. ಭವಿಷ್ಯದಲ್ಲಿ ನಮಗೆ ಏನು ಬೇಕಾಗಿದೆ ಎಂಬುದರ ಕುರಿತು ಹತ್ತು–ಹಲವು ಅಭಿಪ್ರಾಯಗಳು ವ್ಯಕ್ತವಾಗುವ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನವಾಗಿದೆ ಎಂದು ಶ್ಲಾಘಿಸಿದರು. ನಮಗೆ ಒಂದಷ್ಟು ಮೂಲಭೂತ ಹಕ್ಕುಗಳಿವೆ. ಆದರೆ ಹಕ್ಕುಗಳ ಬಗ್ಗೆ ತಿಳಿದುಕೊಳ್ಳುವುದಕ್ಕೂ ಮುನ್ನ ನಾವು ಭೂಮಿಯನ್ನು ನಂಬಿದ್ದೇವೆಯೇ ಅಥವಾ ನಮ್ಮನ್ನು ಭೂಮಿ ನಂಬಿದೆಯಾ ಎಂಬುದು ಸ್ಪಷ್ಟವಾಗಬೇಕು ಎಂದು ಯುವಕರನ್ನು ಪ್ರಶ್ನಿಸಿದ ಸಿಎಂ, ನಾವು ಭೂಮಿಯನ್ನು ನಂಬಿದ್ದೇವೆ. ಭೂಮಿ ಗಾತ್ರದಲ್ಲಿ, ವಿಸ್ತೀರ್ಣದಲ್ಲಿ ಎಂದಿಗೂ ದೊಡ್ಡದಾಗದು. ಆದರೆ ನಮ್ಮ ಹಿರಿಯರು ನಮಗೆ ಬಿಟ್ಟುಹೋಗಿರುವಂತೆಯೇ ನಾವು ನಮ್ಮ ಮುಂದಿನ ಪೀಳಿಗೆಗೆ ಬಿಟ್ಟು ಹೋಗುವುದು ಮುಖ್ಯವಾಗಿದೆ ಎಂದರು.

ಕಲಿಯುವ ಹಸಿವಿರಬೇಕು: ಕಲಿಯುವ ಹಸಿವಿಲ್ಲದಿದ್ದರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ನಾವು ಯಾವಾಗಲು ಕಲಿಯುವ ಹಸಿವುಳ್ಳವರಾಗಬೇಕು. ನಮ್ಮ ಬಳಿ ಭೂಮಿ ಜೊತೆಗೆ ಸಾಕಷ್ಟು ಹಣವಿದ್ದರೂ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ. ಹಾಗಾದರೆ ಉತ್ತಮ ಜೀವನ ಎಂದರೇನು, ಅದನ್ನು ತಿಳಿಯುವುದು ಹೇಗೆ ಎಂದು ಮರು ಪ್ರಶ್ನಿಸಿದ ಅವರು, ನಮ್ಮ ಕಾರ್ಯ ಚಟುವಟಿಕೆಗಳಿಂದ ಬೇರೊಬ್ಬರಿಗೆ ತೊಂದರೆಯಾಗದಿದ್ದರೇ ಅದುವೇ ನಾವು ನಡೆಸುತ್ತಿರುವ ಉತ್ತಮ ಜೀವನವಾಗಿದೆ. ಇನ್ನೊಬ್ಬರ ಜೊತೆಗೆ ನಾವುಗಳು ಕೂಡ ಖುಷಿಯಾಗಿರುತ್ತೇವೆ. ಪ್ರತಿಯೊಂದು ಕ್ಷಣವನ್ನು ಸಂತಸದಿಂದಲೇ ಕಳೆಯಬಹುದು ಎಂದು ತಿಳಿಸಿದರು.

'ಅನ್‌ಲೀಷ್' ಮುಖ್ಯಸ್ಥ ಫ್ಲೆಮಿಂಗ್ ಮಾತನಾಡಿ, ಯುವ ಮನಸ್ಸುಗಳ ಪ್ರತಿಭೆ, ಆಸಕ್ತಿ ನೋಡಿ ಬಹಳ ಖುಷಿಯಾಯಿತು. ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿದಂತೆ ಇವರೆಲ್ಲರೂ ರೂಪಿಸಿರುವ ಯೋಜನೆಗಳು ಶ್ಲಾಘನೀಯ. ಇನ್ನು ಮುಂದೆ ಇಂತಹ ಇನ್ನಷ್ಟು ಜನರಿಗೆ ಈ ರೀತಿಯ ವೇದಿಕೆ ಕಲ್ಪಿಸಿಕೊಡುವುದು ನಮ್ಮೆಲ್ಲರ ಉದ್ದೇಶ. ಈ ಉದ್ದೇಶಕ್ಕೆ ನಮ್ಮ ಜೊತೆಯಲ್ಲಿ ಸಹಕರಿಸಿದ ಕಿಮೋನಿಕ್ಸ್, ಹೆಚ್‌ಸಿಎಲ್ ಮತ್ತು ಇನ್ಫೋಸಿಸ್ ಸಂಸ್ಥೆಗಳಿಗೆ ತುಂಬು ಹೃದಯದ ಧನ್ಯವಾದಗಳು ಎಂದರು.

ಇನ್ಫೋಸಿಸ್ ಮುಖ್ಯಸ್ಥ ನಂದನ್ ನಿಲೇಕಣಿ ಮಾತನಾಡಿ, ನನ್ನ ಪ್ರಕಾರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಒಂದು ಸಾವಿರ ಯುವಜನರೂ ವಿಜೇತರೆ. ಎಲ್ಲರೂ ಸುಸ್ಥಿರ ಅಭಿವೃದ್ಧಿಯನ್ನು ಸಾಧ್ಯವಾಗಿಸುವ ಸಲುವಾಗಿ ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ಗೆ ಬಂದಿದ್ದಾರೆ. ಇನ್ಫೋಸಿಸ್‌ನಲ್ಲಿ ನಮ್ಮ ಮುಂದಿರುವ ದೊಡ್ಡ ದೊಡ್ಡ ಸವಾಲುಗಳು ನಮ್ಮನ್ನು ಇನ್ನಷ್ಟು ಬೆಳೆಸುವ ಅವಕಾಶಗಳಂತೆ ನೋಡುತ್ತೇವೆ. ಪಾರದರ್ಶಕವಾಗಿ ಕೆಲಸ ಮಾಡುವ ಮೂಲಕ ಹೊಸ ಮೈಲುಗಲ್ಲನ್ನು ಸೃಷ್ಟಿಸಿ ದೊಡ್ಡ ಮಟ್ಟದಲ್ಲಿ ಸಾಧಿಸುತ್ತೇವೆ. ಅನ್‌ಲೀಷ್‌ನೊಂದಿಗೆ ಕೈಜೋಡಿಸಿರುವುದು ಇನ್ಫೋಸಿಸ್‌ಗೆ ಹೆಮ್ಮೆಯ ವಿಷಯ. ಸುಸ್ಥಿರ ಅಭಿವೃದ್ಧಿಯನ್ನು ಸಾಧ್ಯವಾಗಿಸುವ ಯೋಜನೆಗಳನ್ನು ರೂಪಿಸಲು ಯುವ ಜನರಿಗೆ ನೆರವಾಗಿದ್ದೇವೆ ಎಂಬ ತೃಪ್ತಿ ನಮಗಿದೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ, ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಎಸ್‌ಪಿ ಚೇತನ್, ಜಿಪಂ ಸಿಇಓ ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಓದುವ ಆಸೆಯಿಂದ ಬೆಳಗ್ಗೆ ಬೇಗ ಎದ್ದೆ
ಸ್ನೇಹಿತ : ಮತ್ತ್ಯಾಕೆ ತಿರುಗಿ ಮಲಗಿದೆ?
ಗುಂಡ : ಓದುವ ಆಸೆಯಿಂದ ಬೆಳಗ್ಗೆ ಬೇಗ ಎದ್ದೆ, ಆದರೆ ಆಸೆಯೇ ದುಃಖಕ್ಕೆ ಮೂಲ ಎಂದು ಪುನಃ ಮಲಗಿದೆ!

ಮೈಸೂರು ಮಿತ್ರ
ಭಾನುವಾರ, 11 ಡಿಸೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ಮೊದಲು ಚಾರಿತ್ರ್ಯವನ್ನು ವೃದ್ಧಿಸಿ, ನೀವು ಮಾಡಬೇಕಾದ ಅತ್ಯುನ್ನತ ಕರ್ತವ್ಯವಿದು. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಣದಷ್ಟು ಮಾತಿಗಿಂತ ಕಣದಷ್ಟು ಕೆಲಸ ಲೇಸು

ನಿಮ್ಮ ಪತ್ರಗಳು

ಹಿರಿಯ ನಾಗರಿಕರ ಸುರಕ್ಷತೆ ಬಗೆಗೆ ಮೈಸೂರು ನಗರಪಾಲಿಕೆಯ ದಿವ್ಯ ನಿರ್ಲಕ್ಷ್ಯ



ಮಾನ್ಯರೆ,
ನ.29 ರಂದು ನಾವು ಬೆಳಗ್ಗೆ 6.45 ರ ಸಮಯದಲ್ಲಿ ಹಾಲು ತೆಗೆದುಕೊಂಡು ಬರುವಾಗ ಮೈಸೂರಿನ ವಿ.ವಿ.ಮೊಹಲ್ಲಾದ ದೇವಸ್ಥಾನದ ರಸ್ತೆ ಮತ್ತು ನಾಲ್ಕನೆಯ ಮುಖ್ಯ ರಸ್ತೆ ಸಂಧಿಸುವ ಜಾಗದಲ್ಲಿ (ಚಿತ್ರದಲ್ಲಿ ತೋರಿಸಿರುವಂತೆ) ಸುಮಾರು ಎಪ್ಪತ್ತು ವರ್ಷದ ಹಿರಿಯ ದಂಪತಿ ವಾಯುವಿಹಾರಕ್ಕೆ ನಡೆದುಕೊಂಡು ಹೋಗುತ್ತಿದ್ದ ಸಮಯದಲ್ಲಿ ಮಹಿಳೆಯೊಬ್ಬರು ಕಾಲು ಎಡವಿ ಬಿದ್ದರು. ತಕ್ಷಣ ನಾನು ಸಹ ಧಾವಿಸಿ ಏನಾದರೂ ಪೆಟ್ಟಾಗಿದೆಯೇ ಎಂದು ವಿಚಾರಿಸಿದೆ. ಬಿದ್ದ ಜಾಗದಲ್ಲಿ ಪಾದಚಾರಿ ರಸ್ತೆ ಚರಂಡಿಯ ಮೇಲೆ ಹಾಕಿರುವ ಸಿಮೆಂಟ್ ಸ್ಲಾಬ್ ಅಲುಗಾಡುತ್ತಿದ್ದು, ನಗರಪಾಲಿಕೆಯ ತಪ್ಪಿನಿಂದಾಗಿ ಕೆಳಗೆ ಬಿದ್ದು ಕೈಗೆ ಸ್ವಲ್ಪ ಗಾಯವಾಗಿತ್ತು. ಆ ಮಹಿಳೆ ಬೇರೆ ಯಾರೂ ಆಗಿರದೆ ನನ್ನ ಹಿರಿಯ ಸಹೋದ್ಯೋಗಿ ಲತಾ, ವಿಶ್ರಾಂತ ಪ್ರಾಧ್ಯಾಪಕಿ, ಐದನೇ ಮುಖ್ಯ ರಸ್ತೆಯಲ್ಲಿದ್ದಾರೆ ಎಂದು ತಿಳಿಯಿತು. ನಮ್ಮ ಪ್ರದೇಶದ ನಗರಪಾಲಿಕೆ ಪ್ರತಿನಿಧಿಗಳು, ಶಾಸಕರು, ಬೇರೆ ಪ್ರದೇಶದ ನಗರಪಾಲಿಕೆ ಜನಪ್ರತಿನಿಧಿಗಳಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಪಾದಚಾರಿ ಮಾರ್ಗದಲ್ಲಿ ಅನೇಕ ಅಡಚಣೆಗಳು ಇವೆ. ರಸ್ತೆ ನಾಮಫಲಕ ಮಾರ್ಗ ಮಧ್ಯೆ ಅಡ್ಡಲಾಗಿ ಹಾಕಲಾಗಿದೆ. ಜೊತೆಗೆ ಪ್ರತಿ ರಸ್ತೆ ಪಾದಚಾರಿ ಮಾರ್ಗಕ್ಕೆ ಅಡ್ಡಲಾಗಿ ಎರಡು ಮೂರು ಆಟೋಗಳು ನಿಂತಿರುತ್ತವೆ. ಪಾದಚಾರಿಗಳ ಸುರಕ್ಷತೆ ನಗರಪಾಲಿಕೆ ಕರ್ತವ್ಯವಲ್ಲವೇ?

–ಟಿ. ರಘುನಾಥ್, ಮೈಸೂರು.

ಗಡಿವಿವಾದಕ್ಕೆ ಗೆರೆ ಯಾವಾಗ?

ಮಾನ್ಯರೆ,
ಇದೇ ತಿಂಗಳು ಡಿ.19ರಂದು ಬೆಳಗಾವಿ ಅಧಿವೇಶನ ಆರಂಭವಾಗಲಿದ್ದು, ರಾಜ್ಯದಲ್ಲಿನ ಅನೇಕ ವಿಷಯಗಳೊಂದಿಗೆ ಸಾರ್ವಜನಿಕರ ಸಮಸ್ಯೆಗಳನ್ನು ಹಾಗೂ ರಾಜ್ಯದಲ್ಲಿ ಅಭಿವೃದ್ಧಿಯಾಗದ ಕೆಲಸಗಳು, ವಿದ್ಯಾರ್ಥಿ ವೇತನ, ನಿರಾಶ್ರಿತರಿಗೆ ವಸತಿ, ರಾಜ್ಯದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ, ಆರ್ಥಿಕ ಪರಿಸ್ಥಿತಿ, ಜಿಡಿಪಿ – ಜಿಎಸ್‌ಟಿ, ಖಾಸಗಿ ಶಾಲೆಗಳಲ್ಲಿ ಆರ್‌ಟಿಇಗೆ ಸಂಬಂಧಿಸಿದ ವಿಷಯಗಳು, ಅಭಿವೃದ್ಧಿಯಾಗದಿರುವ ರಸ್ತೆಗಳು, ಸರ್ಕಾರಿ ಶಾಲೆಗಳ ಅಭಿವೃದ್ಧಿ ಇತ್ಯಾದಿಯಾಗಿ ವಿಷಯಗಳನ್ನು ಚರ್ಚೆ ಮಾಡುವ ಸಮಯದಲ್ಲಿ ಗಡಿ ಭಾಗದ ವಿಚಾರದಲ್ಲಿ ಗಲಾಟೆ ಎಬ್ಬಿಸಿ ಯಾವ ಕಿಡಿಗೇಡಿಗಳು ಇಂತಹ ಘಟನೆ ಹಬ್ಬಿಸುತ್ತಾರೆ. ಕಿಡಿಗೇಡಿಗಳ ಸಹಿತ ಅವರಿಗೆ ಬೆಂಬಲವಾಗಿ ಅಡಗಿ ಕುಳಿತಿರುವವರನ್ನು ಹಿಡಿದು ಇಂತವರಿಗೆ ಸಂಬಂಧಪಟ್ಟ ಅಧಿಕಾರಿಗಳು ಕಾನೂನಿನ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆಯಾಗಬೇಕು ಹಾಗೂ ಗಡಿಗೆ ಸಂಬಂಧಪಟ್ಟ ವಿಷಯಕ್ಕೂ ಕೂಡ ಸರ್ಕಾರ ಗೆರೆ ಎಳೆಯಬೇಕು.

–ನಾಗೇಶ್, ಮಾನಸಗಂಗೋತ್ರಿ

ಗುಣಮಟ್ಟದ ಹೊದಿಕೆ, ಬಿಸಿ ಆಹಾರ ನೀಡಿ ಕೊರೆವ ಚಳಿಯಿಂದ ಮುಕ್ತಿ ನೀಡಿ

ಮಾನ್ಯರೆ,



ಸೂರ್ಯನ ಗೈರು ಹಾಜರಿಯಿಂದ ಎಲ್ಲೆಡೆಯೂ ಶುರುವಾಗಿದೆ ಕೊರೆವ ಚಳಿ. ಇದರಿಂದ ತಪ್ಪಿಸಿಕೊಳ್ಳಲು ಹಲವಾರು ಜನ ಬೆಳಗಿನ ವೇಳೆ ಕೈಗವಸು, ಕಾಲು ಚೀಲ, ಟೋಪಿ, ಮಫ್ಲರ್, ಸ್ವೆಟರ್ ಧರಿಸಿ ರಾತ್ರಿ ವೇಳೆ ಶುಚಿ–ರುಚಿಯಾದ ಬಿಸಿಬಿಸಿ ಆಹಾರ ಸೇವಿಸಿ, ಉತ್ತಮ ಹೊದಿಕೆ ಬಳಸಿ ಬೆಚ್ಚನೆಯ ಅನುಭವ ಪಡೆಯುತ್ತಾರೆ. ಆದರೆ, ಇರಲು ನೆಲೆಯಿಲ್ಲದೆ ದೇವಸ್ಥಾನ, ಬಸ್ ಸ್ಟ್ಯಾಂಡ್, ಅಂಗಡಿ ಮುಂಗಟ್ಟು ಹೀಗೆ ಎಲ್ಲೆಂದರಲ್ಲಿ ಆಶ್ರಯ ಪಡೆಯುವ ಅಶಕ್ತರು, ವಯೋವೃದ್ಧರು, ಮಹಿಳೆಯರು, ಮಕ್ಕಳ ಪಾಡೇನು?! ದಯಮಾಡಿ, ಜಿಲ್ಲಾಡಳಿತ ಇಂತಹವರನ್ನು ಗುರುತಿಸಿ ಇವರಿಗೆಲ್ಲ ಕನಿಷ್ಠಪಕ್ಷ ಒಂದು ಉತ್ತಮ ಗುಣಮಟ್ಟದ ಹೊದಿಕೆ ಮತ್ತು ಬಿಸಿಯಾದ ಆಹಾರ ನೀಡಿ ಕೊರೆವ ಚಳಿಯಿಂದ ಮುಕ್ತಿ ನೀಡಬೇಕಿದೆ. ಇದಕ್ಕೆ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಕೈ ಜೋಡಿಸಬೇಕೆಂದು ಮನವಿ.


–ಬಿ.ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.

ಮೈಸೂರು 'ಮಿತ್ರ'ನ ಫಲಶ್ರುತಿ



ಮಾನ್ಯರೆ,
ಚಾಮುಂಡಿಬೆಟ್ಟದ ರಾಜಗೋಪುರ ವಿದ್ಯುತ್ ತಾಂತ್ರಿಕ ದೋಷದ ಕಾರಣ ಕಂಗೊಳಿಸದೇ ಕಳೆದ ಐದಾರು ತಿಂಗಳಿಂದ ಮಂಕಾಗಿತ್ತು. ಸಾಕಷ್ಟು ಭಕ್ತರು ಇದರ ಬಗ್ಗೆ ಪ್ರಶ್ನಿಸಿದರೂ ಸರಿಯಾದ ಉತ್ತರ ಅಧಿಕಾರಿಗಳಿಂದ ಸಿಗುತ್ತಿರಲಿಲ್ಲ. ಡಿಸೆಂಬರ್ 7 ರಂದು 'ಮೈಸೂರು ಮಿತ್ರ'ನ ನಿಮ್ಮ ಪತ್ರಗಳು ವಿಭಾಗದಲ್ಲಿ ಈ ವಿಚಾರ ಪ್ರಕಟವಾದ ಕೂಡಲೇ ಎಚ್ಚೆತ್ತ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ವಿದ್ಯುತ್ ತಾಂತ್ರಿಕ ಸಮಸ್ಯೆ ಸರಿಪಡಿಸಿ ರಾಜಗೋಪುರ ದೀಪದಿಂದ ಕಂಗೊಳಿಸುವಂತೆ ಮಾಡಿ ಮೈಸೂರು ನಗರಕ್ಕೆ ಕಾಣುವಂತೆ ಮಾಡಿದ್ದಾರೆ. ಇದರಿಂದ ಲಕ್ಷಾಂತರ ಭಕ್ತರ ಪ್ರಾರ್ಥನೆಗೆ ಮನ್ನಣೆ ಸಿಕ್ಕಂತಾಗಿದೆ. ಈ ವಿಷಯ ಪ್ರಕಟಿಸಿದ 'ಮೈಸೂರು ಮಿತ್ರ' ಮತ್ತು ಸ್ಪಂದಿಸಿದ ಇಲಾಖೆಯ ಅಧಿಕಾರಿಗಳಿಗೆ, ಶ್ರಮಿಸಿದ ಚಾಮುಂಡಿಬೆಟ್ಟದ ಸಿಬ್ಬಂದಿ ವರ್ಗಕ್ಕೆ ಧನ್ಯವಾದಗಳು.

–ಅಜಯ್ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಬದುಕಿನುದ್ದಕ್ಕೂ ಬಾಂಧವ್ಯದ ಬೆಸುಗೆ...!!



ನಾವು ಈ ಭೂಮಿಯ ಮೇಲೆ ಜನಿಸಿದ ನಂತರ ಹಲವು ಬಾಂಧವ್ಯಗಳಿಗೆ ಒಳಪಡುತ್ತೇವೆ. ಮೊದಲ ಬಾಂಧವ್ಯವೇ ತಾಯಿ–ಮಗುವಿನ ಬಾಂಧವ್ಯ. ನಂತರ ತಂದೆಯೊಡನೆ ಬಾಂಧವ್ಯ, ಸಹೋದರ ಸಹೋದರಿಯರೊಡನೆ ಬಾಂಧವ್ಯ, ತಾತ–ಅಜ್ಜಿಯರ ಬಾಂಧವ್ಯ, ಕುಟುಂಬದ ಇತರೆ ಸದಸ್ಯರೊಡನೆ ಬಾಂಧವ್ಯ, ಸ್ನೇಹಿತರೊಡನೆ ಬಾಂಧವ್ಯ, ನಮ್ಮೂರಿನೊಡನೆ ಬಾಂಧವ್ಯ, ಶಾಲಾ ಶಿಕ್ಷಕರು, ಸಹಪಾಠಿಗಳೊಡನೆ ಬಾಂಧವ್ಯ, ಉದ್ಯೋಗಕ್ಕೆ ಸೇರಿದಾಗ ಅಲ್ಲಿನವರೊಡನೆ ಬಾಂಧವ್ಯ, ಮದುವೆಯ ನಂತರ ಪತಿ–ಪತ್ನಿ ಬಾಂಧವ್ಯ, ನಂತರ ಮಕ್ಕಳೊಡನೆ ಬಾಂಧವ್ಯ, ಮೊಮ್ಮಕ್ಕಳೊಡನೆ ಬಾಂಧವ್ಯ, ವೃದ್ಧಾಪ್ಯದಲ್ಲಿ ಆಪ್ತ ಸ್ನೇಹಿತರೊಡನೆ ಬಾಂಧವ್ಯ –ಆಸ್ಪತ್ರೆಗೆ ದಾಖಲಾದರೆ ಅಲ್ಲಿನ ವೈದ್ಯರು ಹಾಗೂ ನರ್ಸ್‌ಗಳೊಡನೆಯ ಬಾಂಧವ್ಯ ಹೀಗೆ ಜೀವನದಲ್ಲಿ ಹಲವಾರು ಬಾಂಧವ್ಯ ಹೊಂದುತ್ತೇವೆ. ಕೆಲವು ಇಡೀ ಜೀವಮಾನ ಪೂರ್ತಿ ನಮ್ಮೊಡನೆ ಬಂದರೆ, ಕೆಲವು ತಾತ್ಕಾಲಿಕವಾದ ಸಂಬಂಧಗಳಾದರೂ ಜೀವಮಾನ ಪೂರ್ತಿ ನೆನಪಿಡಬಹುದಾದ ಬಾಂಧವ್ಯವಾಗಿರುತ್ತವೆ. ಇದರ ಅರ್ಥ ಮನುಷ್ಯ ಏಕಾಂಗಿಯಾಗಿ ಬದುಕಿರಲಾರ. ಅವನಿಗೆ ಅನೇಕರೊಡನೆ ಸಂಪರ್ಕ ಹಾಗೂ ಸ್ನೇಹ ಬೇಕಾಗುತ್ತದೆ. ಕೆಲವು ಸ್ನೇಹಗಳೂ ಅನಿರೀಕ್ಷಿತವಾಗಿ ಉಂಟಾದರೂ ಅವು ಜೀವಮಾನಪೂರ್ತಿ ಮುಂದುವರೆಯುತ್ತವೆ. ಎಲ್ಲ ಸಂಬಂಧಗಳೂ ಒಂದಷ್ಟು ಮಧುರ ನೆನಪುಗಳೊಡನೆ, ಕಹಿ ನೆನಪುಗಳನ್ನೂ ನಮ್ಮೊಳಗೆ ಸ್ಥಾಪಿಸಿಬಿಡುತ್ತವೆ. ಒಮ್ಮೆ ಕೂತು ಅವಲೋಕಿಸಿದಾಗ ಕಡಿದುಕೊಂಡ ಸಂಬಂಧಗಳು ನಮ್ಮ ತಪ್ಪಿನಿಂದಲೇ ಆಗಿರುತ್ತದೆ ಎಂಬ ಅರಿವಾಗುತ್ತದೆ. ಇರಬಹುದು, ಕೆಲವು ನಮ್ಮ ತಪ್ಪಿನಿಂದಲ್ಲದಿರಲೂಬಹುದು.

ಆದರೂ ಅಂತಹ ಸಂಬಂಧ ಇದ್ದಾಗ, ವೈಮನಸ್ಸಿಗೆ ಅದು ನೀಡಿದ್ದ ಸುಮಧುರ ಅನುಭವಗಳು ನಮ್ಮನ್ನು ಜೀವಮಾನಪೂರ್ತಿ ಕಾಡದೇ ಬಿಡುವುದಿಲ್ಲ. ಕೆಲವು ಸಂಬಂಧ ಮುರಿದುಕೊಳ್ಳಲು ಗೊತ್ತಿದ್ದೋ, ಗೊತ್ತಿಲ್ಲದೆಯೋ ನಾವು ತೆಗೆದುಕೊಂಡ ತಪ್ಪು ನಿರ್ಧಾರಗಳು ಕಾರಣವಾಗಿರುತ್ತವೆ. ಏನೇ ಆದರೂ ಹಳೆಯ ಸಂಬಂಧಗಳು ನೀಡುವ ಮುದ ಜೀವಮಾನಪೂರ್ತಿ ನೆನಪಿನಲ್ಲಿರುತ್ತವೆ. ಇದರಿಂದಾಗಿ ಸಂಬಂಧಗಳು ಅಗತ್ಯ ಹಾಗೂ ಅದು ಶಾಶ್ವತವಾಗಿದ್ದಿದ್ದರೆ? ಎಂದು ನೆನಪಿಸಿಕೊಳ್ಳುವಂತೆ ಮಾಡಿಬಿಡುತ್ತವೆ.

ನಿಜ, ನಮಗೆ ಸಂಬಂಧಗಳ ಮೌಲ್ಯ ಅರ್ಥವಾಗುತ್ತಿದ್ದುದು ಅವಿಭಕ್ತ ಕುಟುಂಬಗಳಲ್ಲಿ. ಅಲ್ಲಿನ ಸದಸ್ಯರು ಮನೆಯ ಹಿರಿಯ ಹೇಳಿದಂತೆ ಕೇಳಿಕೊಂಡಿದ್ದರೆ ಸಾಕು, ಜೀವನ ಸುಲಲಿತವಾಗಿ ನಡೆಯುತ್ತಿತ್ತು. ಮನೆಯ ಹಿರಿಯನೂ ಅಷ್ಟೇ!! ಸದಸ್ಯರ ದೈಹಿಕ ಹಾಗೂ ಮಾನಸಿಕ ಶಕ್ತಿಯ ಆಧಾರದ ಮೇಲೆ ಕೆಲಸವನ್ನು ಹಂಚುತ್ತಿದ್ದನು. ಇದರಿಂದ ಯಾವುದೇ ಗೊಂದಲವಾಗಲೀ, ಮೇಲುಕೀಳುಗಳಾಗಲೀ ಉಂಟಾಗುತ್ತಿರಲಿಲ್ಲ. ಮನುಷ್ಯ ಸಮಾಜ ಜೀವಿ. ಅವನಲ್ಲಿ ಎಷ್ಟೇ ಹಣ, ಕೀರ್ತಿ ಇದ್ದರೂ ಅದನ್ನು ಸಂಭ್ರಮಿಸುವವರು ಇಲ್ಲದಿದ್ದಾಗ ಅವುಗಳಿಗೆ ಬೆಲೆ ಬರುವುದಿಲ್ಲ. ಬಹುಶಃ ಅಂತರಿಕ್ಷಗಾಮಿಗಳು ತಾವು ಮತ್ತೆ ಭೂಮಿಗೆ ಹಿಂದಿರುಗಿದಾಗ ತಮ್ಮವರು ತನ್ನನ್ನು ಕಂಡು ಹೇಗೆ ಖುಷಿಪಡಬಹುದು ಎಂದು ಊಹಿಸಿಯೇ ತಲ್ಲಣಗೊಳ್ಳುತ್ತಾರೆ. ಸಂಬಂಧಗಳ ಸಾರವೇ ಹಾಗೆ.

ನಿಮಗೆ ಎಷ್ಟು ಸ್ನೇಹಿತರು ಇದ್ದರೆ ನಿಮಗೆ ಸಂತೋಷವಾಗುತ್ತದೆ? ಎಂದು ಪ್ರಶ್ನಿಸಿದರೆ, ಯಾರೊಬ್ಬರೂ ಸರಿಯಾದ ಉತ್ತರ ನೀಡಲಾರರು. ಆದರೆ ಆತ್ಮೀಯರಾದ ಹತ್ತಾರು ಜನರಾದರೂ ಇದ್ದರೆ ಉತ್ತಮ ಎಂದು ಹೇಳಬಹುದು. ಹಾಗಾದರೆ ಆತ್ಮೀಯರು ಎಂದರೆ ಯಾರು? ಎಂದರೆ ನಮಗೆ ಕಷ್ಟ ಬರಲಿ, ಸುಖವಿರಲಿ ನನ್ನೊಡನೆ ನಿಲ್ಲುವವರು ಎಂದು ಹೇಳಬಹುದು. ಅಂದರೆ ನಿಜವಾದ ಸ್ನೇಹ ಬರೀ ಸುಖದಲ್ಲಿ ಮಾತ್ರ ಇರುವುದಲ್ಲ. ಕಷ್ಟದಲ್ಲೂ ಅದು ಇರಬೇಕು. ಮತ್ತೆ ಈ ಸ್ನೇಹವೂ ಒಮ್ಮುಖವಾಗಿರುವುದಲ್ಲ. ಅದು ದ್ವಿಮುಖ ನೀತಿಯಂತೆ. 'ನೀ ನನಗಿದ್ದರೆ ನಾ ನಿನಗೆ' ಎಂಬಂತೆ ಎರಡೂ ಕಡೆ ಆತ್ಮೀಯತೆ ಇರಬೇಕು. ಸ್ನೇಹ ಶ್ರೀಮಂತರು ಶ್ರೀಮಂತರ ನಡುವೆ, ಅಥವಾ ಬಡವ ಬಡವರ ನಡುವೆ ಮಾತ್ರ ಇರಬೇಕೆಂದೇನೂ ಇಲ್ಲ. ಶ್ರೀಕೃಷ್ಣ–ಕುಚೇಲನ ಉದಾಹರಣೆ ನಮ್ಮ ಮುಂದಿದೆ. ರಾಜನಾದ ಶ್ರೀಕೃಷ್ಣ, ಬಡವನಾದ ಕುಚೇಲನನ್ನು ಕಂಡು ಹಿರಿಹಿರಿ ಹಿಗ್ಗಿ ಅವನ ಪಾದಪೂಜೆ ಮಾಡುತ್ತಾನೆ. ಗೆಳೆಯ ತಂದಿದ್ದ ಹಿಡಿ ಅವಲಕ್ಕಿ ಸೇವಿಸಿ, ಪರಮಾನ್ನ ಸೇವಿಸಿದಂತೆ ಖುಷಿಪಡುತ್ತಾನೆ. ಇದು ಸ್ನೇಹ. ಸಂಬಂಧಗಳು ಹಾಗೆಯೇ. ಒಂದು ಕುಟುಂಬದ ಎಲ್ಲ ಸದಸ್ಯರಿಗೆ ಮತ್ತೊಂದು ಕುಟುಂಬದ ಎಲ್ಲ ಸದಸ್ಯರ ನಡುವೆ ಒಂದೇ ರೀತಿಯ ಬಾಂಧವ್ಯ ಇರುವುದಿಲ್ಲ. ಇಲ್ಲಿ ನಮ್ಮ ಮನೋಭೂಮಿಕೆ ಮುಖ್ಯವಾದ ಪಾತ್ರ ವಹಿಸುತ್ತದೆ. ಸ್ನೇಹ ಹಾಗೂ ಸಂಬಂಧಗಳು ಎಂದಿಗೂ ಒಮ್ಮುಖ ಕ್ರಿಯೆಯನ್ನು ಒಪ್ಪುವುದಿಲ್ಲ. ಅದು ದ್ವಿಮುಖದ ಹಾದಿ. ನಾನು ಹೇಗೋ, ಅದೂ ಹಾಗೆ! ಎನ್ನುವಂತಹ ಷರತ್ತು ಅದರಲ್ಲಿರುತ್ತದೆ.

> ನಮಗೆ ಸಂಬಂಧಗಳ ಮೌಲ್ಯ ಅರ್ಥವಾಗುತ್ತಿದ್ದುದು ಅವಿಭಕ್ತ ಕುಟುಂಬಗಳಲ್ಲಿ. ಅಲ್ಲಿನ ಸದಸ್ಯರು ಮನೆಯ ಹಿರಿಯ ಹೇಳಿದಂತೆ ಕೇಳಿ ಕೊಂಡಿದ್ದರೆ ಸಾಕು, ಜೀವನ ಸುಲಲಿತವಾಗಿ ನಡೆಯುತ್ತಿತ್ತು. ಮನೆಯ ಹಿರಿಯನೂ ಅಷ್ಟೇ!! ಸದಸ್ಯರ ದೈಹಿಕ ಹಾಗೂ ಮಾನಸಿಕ ಶಕ್ತಿಯ ಆಧಾರದ ಮೇಲೆ ಕೆಲಸವನ್ನು ಹಂಚುತ್ತಿದ್ದನು. ಇದರಿಂದ ಯಾವುದೇ ಗೊಂದಲವಾಗಲೀ, ಮೇಲುಕೀಳುಗಳಾಗಲೀ ಉಂಟಾಗುತ್ತಿರಲಿಲ್ಲ. ಮನುಷ್ಯ ಸಮಾಜ ಜೀವಿ. ಅವನಲ್ಲಿ ಎಷ್ಟೇ ಹಣ, ಕೀರ್ತಿ ಇದ್ದರೂ ಅದನ್ನು ಸಂಭ್ರಮಿಸುವವರು ಇಲ್ಲದಿದ್ದಾಗ ಅವುಗಳಿಗೆ ಬೆಲೆ ಬರುವುದಿಲ್ಲ. ಬಹುಶಃ ಅಂತರಿಕ್ಷಗಾಮಿಗಳು ತಾವು ಮತ್ತೆ ಭೂಮಿಗೆ ಹಿಂದಿರುಗಿದಾಗ ತಮ್ಮವರು ತನ್ನನ್ನು ಕಂಡು ಹೇಗೆ ಖುಷಿಪಡಬಹುದು ಎಂದು ಊಹಿಸಿಯೇ ತಲ್ಲಣಗೊಳ್ಳುತ್ತಾರೆ. ಸಂಬಂಧಗಳ ಸಾರವೇ ಹಾಗೆ.

ಈ ಸಂಬಂಧ ಮನುಷ್ಯ ಮನುಷ್ಯರ ನಡುವೆ ಮಾತ್ರ ಎಂದು ಹೇಳಲಾಗದು. ಅದು ಮನುಷ್ಯ–ಪ್ರಾಣಿಗಳ ಜೊತೆಗೂ ಅಧಿಕವಾಗಿ ಕಂಡುಬರುವಂತಹುದು. ಮನುಷ್ಯನ ಜೊತೆಗೆ ಬದುಕು ಕಂಡುಕೊಳ್ಳುವ ಎಲ್ಲಾ ಪ್ರಾಣಿಗಳು ಮನುಷ್ಯರೊಡನೆ ಹೆಚ್ಚಿನ ಸ್ನೇಹ–ಸಂಬಂಧ ಇಟ್ಟುಕೊಳ್ಳುತ್ತವೆ. ತನ್ನ ಮನೆಯ ಮಾಲೀಕ ಆಸ್ಪತ್ರೆಗೆ ಸೇರಿದಾಗ ಅವನನ್ನು ಕರೆದುಕೊಂಡು ಹೋದ ಆಂಬುಲೆನ್ಸ್‌ನ ಹಿಂದೆ ಓಡುವ ನಾಯಿ, ಮಾಲೀಕ ಬಿಡುಗಡೆಯಾಗುವವರೆಗೂ ಆಸ್ಪತ್ರೆಯಲ್ಲಿಯೇ ಕಾಲ ಕಳೆದ ಬಗ್ಗೆ ಕೇಳಿದ್ದೇವೆ. ಮನೆಯ ನಾಯಿ ಕಾಣೆಯಾಗಿದೆ ಎಂಬ ಜಾಹೀರಾತು ಅನುಸರಿಸಿ ಬರುವ ದೂರವಾಣಿ ಕರೆ ಆ ನಾಯಿ ಒಂದು ವೃದ್ಧಾಶ್ರಮದಲ್ಲಿರುವುದಾಗಿಯೂ, ಆ ವೃದ್ಧಾಶ್ರಮದಲ್ಲಿ ಆ ಮನೆಯ ವಯಸ್ಸಾದ ತಾಯಿ ಇರುವುದನ್ನು ಕಂಡುಹಿಡಿದು, ಅದು ಅಲ್ಲಿಗೆ ಹೋಗಿದ್ದರ ಬಗ್ಗೆ ಕೇಳಿದ್ದೇವೆ. ಸಣ್ಣ ಇಲಿಯಿಂದ ಹಿಡಿದು ದೊಡ್ಡ ಗಾತ್ರದ ಆನೆಗಳವರೆಗೆ ಇಂತಹ ಸ್ನೇಹ ಸಂಬಂಧದ ಬಂಧನದಲ್ಲಿರುವುದು ಕಾಣುತ್ತೇವೆ. ಹಾಗೆ ನೋಡಿದರೆ ನಾವು ಮನುಷ್ಯರನ್ನು ಪರಸ್ಪರ ಸಂಶಯದಿಂದ ಕಂಡರೆ, ಪ್ರಾಣಿಗಳಲ್ಲಿ ಅಂತಹ ಭೇದವೇ ಇರುವುದಿಲ್ಲ.

ನಮ್ಮ ಸ್ನೇಹ–ಸಂಬಂಧ ಹೇಗಿರಬೇಕು? ಎಂದರೆ ಭೂಮಿ ಹಾಗೂ ಮೇಘದ ನಡುವಿನ ಸಂಬಂಧದಂತೆ ಇರಬೇಕು ಎಂದು ಹೇಳಲಾಗುತ್ತದೆ. ಎಲ್ಲಿಯ ಭೂಮಿ, ಎಲ್ಲಿಯ ಮೋಡ. ಆದರೆ ಅದೆಂತಹ ಮಧುರ ಸಂಬಂಧ ಅದು. ಭೂಮಿಯು ಬಿಸಿಲಿನಲ್ಲಿ ಕಾಯ್ದು ಸಂಕಟ ಅನುಭವಿಸುತ್ತದೆ. ಭೂಮಿಯ ಮೇಲಿರುವ ನೀರು ಆ ಶಾಖದಿಂದಾಗಿ ಆವಿಯಾಗುತ್ತದೆ. ಭೂಮಿಯ ಗಂಟಲು ಒಣಗುತ್ತದೆ. ಆದರೆ ಭೂಮಿ ಅದನ್ನು ಸಹಿಸುತ್ತದೆ, ಭೂಮಿಗೆ ಗೊತ್ತು ತನ್ನಿಂದ ಹೋದ ಜಲ ಮತ್ತೆ ಮಳೆಯ ರೂಪದಲ್ಲಿ ತನ್ನೊಡಲಿಗೇ ಹಿಂದಿರುಗುತ್ತದೆ ಎಂದು. ಅದಕ್ಕಾಗಿ ಅದು ಸಹಿಸುತ್ತದೆ. ಮೋಡವೂ ಅಷ್ಟೇ!! ತಾನು ಎಷ್ಟೇ ನೀರು ಸಂಗ್ರಹಿಸಿದರೂ ಅದು ಕೊನೆಗೆ ಭೂಮಿಗಾಗಿ ಎಂದು ಗೊತ್ತಿರುತ್ತದೆ. ತನಗಾಗಿ ಅದು ಹನಿ ನೀರನ್ನೂ ಬಳಸುವುದಿಲ್ಲ. ಮೋಡದ ಭಾರ ಜಾಸ್ತಿಯಾದಾಗ, ಅದು ತಣ್ಣಗಾದಾಗ (ನೀರಿದ್ದರೂ ಅದು ಅಲ್ಲಿಯವರೆಗೆ ಬಿಸಿಯಾಗೇ ಇರುತ್ತದೆ) ಮಳೆಯ ರೂಪದಲ್ಲಿ ಧರೆಗಿಳಿಯುತ್ತದೆ. ತನ್ನ ಆಪ್ತ ಭೂಮಿಯೊಡನೆ ಸೇರಲು ಅದೇನು ಧಾವಂತ ಅದಕ್ಕೆ!! ಗುಡುಗು, ಸಿಡಿಲಿನೊಡನೆ ಭರ್ಜರಿಯಾಗಿ ಭೂಮಿಗೆ ಬಂದು, ಭೂಮಿಯಿಂದ ಪಡೆದಿದ್ದ ಹನಿಹನಿ ನೀರನ್ನೂ ವಾಪಸ್ಸು ನೀಡಿ ಕೃತಾರ್ಥ ಭಾವ ತಳೆಯುತ್ತದೆ. ಭೂಮಿಯೂ ಅಷ್ಟೇ, ತಾನು ಈ ಹಿಂದೆ ಕಳೆದುಕೊಂಡ ನೀರನ್ನು ವಾಪಸ್ಸು ಪಡೆಯುತ್ತದೆ. ಮಳೆ ಬರುವಾಗ ಅದಕ್ಕೆ ಸ್ವಾಗತ ರೂಪದಲ್ಲಿ ತನ್ನ ಮೈಮೇಲಿನ ಗಿಡಮರಗಳ ನಡು ಬಾಗಿಸಿ ಅದಕ್ಕೆ ನಮಸ್ಕರಿಸಿ ಸ್ವಾಗತಿಸುತ್ತದೆ. ಇದು ಬಾಂಧವ್ಯದ ಉದಾಹರಣೆ. ಮೇಘ ನೀರನ್ನು ತನ್ನಲ್ಲೇ ಇಟ್ಟುಕೊಳ್ಳಲಾಗದು, ಹಾಗೂ ಅದು ಅದರ ಉದ್ದೇಶವೂ ಅಲ್ಲ. ಸಮಯ ನೋಡಿ ಭೂಮಿಗೆ ಆರ್ಭಟದೊಂದಿಗೆ ಬಂದು ಇಳೆಯನ್ನು ತಣಿಸುತ್ತದೆ. ಅದರಲ್ಲಿ ಸಾರ್ಥಕತೆ ಕಾಣುತ್ತದೆ.

ಸಂಬಂಧಗಳು ದೀರ್ಘ ಕಾಲದಿಂದ ಬಂದವುಗಳೇ ಆಗಬೇಕೆಂದಿಲ್ಲ. ತಕ್ಷಣದಲ್ಲಿಯೂ ಸಂಬಂಧ ಏರ್ಪಡಬಹುದು. ಆದರೆ ಅದು ನಮ್ಮ ಮನೋಭಾವಕ್ಕೆ ಸಂಬಂಧಿಸಿದ್ದು. ಇತ್ತೀಚೆಗೆ ಪತ್ರಿಕೆಯಲ್ಲಿ ವರದಿಯಾದ ಒಂದು ಘಟನೆ: ಊಟ ಮಾಡಲೆಂದು ಒಬ್ಬ ವ್ಯಕ್ತಿ ಹೋಟೆಲಿಗೆ ಹೋಗುತ್ತಾನೆ. ಊಟಕ್ಕೆ ಆರ್ಡರ್ ಮಾಡುತ್ತಾನೆ. ಆ ಹೋಟೆಲ್ಲಿನ ಹೊರಗೆ ಒಬ್ಬ ಪುಟ್ಟ ಬಾಲಕ ತಿಂಡಿಗಳನ್ನು ಆಸೆಗಣ್ಣಿನಿಂದ ನೋಡುತ್ತಿರುವುದನ್ನು ಗಮನಿಸುತ್ತಾನೆ. ಅವನಿಗೆ ಹಸಿವಾಗಿದೆ ಎಂದು ಈ ವ್ಯಕ್ತಿಗೆ ಗೊತ್ತಾಗುತ್ತದೆ. ಅವನನ್ನು ಒಳಗೆ ಬರಲು ಹೇಳುತ್ತಾನೆ. ಅವನು ಬರುವಾಗ ತನ್ನ ಪುಟ್ಟ ತಂಗಿಯನ್ನೂ ಕರೆತರುತ್ತಾನೆ. ಈ ವ್ಯಕ್ತಿ ಅವರಿಬ್ಬರಿಗೂ ಊಟ ನೀಡಲು ಹೇಳುತ್ತಾನೆ. ಅವರಿಬ್ಬರೂ ಊಟ ಮುಗಿಸಿ ಅತೀವ ಸಂತೋಷದಿಂದ ನಮಸ್ಕರಿಸಿ ಹೊರ ಹೋಗುತ್ತಾರೆ. ಈ ವ್ಯಕ್ತಿಗೆ ಏನೋ ಸಂತೃಪ್ತಿ. ಈ ಮಧ್ಯೆ ಅವನ ಊಟ ಟೇಬಲ್ಲಿಗೆ ಬಂದಿದ್ದರೂ ಅವನಿಗೆ ಊಟ ಮಾಡಬೇಕೆನಿಸುವುದಿಲ್ಲ. ಏಕೆಂದರೆ ಅದಾಗಲೇ ಹೊಟ್ಟೆ ಭರ್ತಿಯಾದಂತಾಗಿತ್ತು. ನಂತರ ಬಿಲ್ಲು ಕೊಡಲು ಮಾಣಿಗೆ ಹೇಳುತ್ತಾನೆ. ಅದರಂತೆ ಮಾಣಿ ಬಿಲ್ಲು ತಂದು ನೀಡಿದಾಗ ಇವನಿಗೆ ಅಚ್ಚರಿ. ಏಕೆಂದರೆ ಆ ಬಿಲ್ಲಿನಲ್ಲಿ, ಬರೆದಿರುತ್ತದೆ, 'ಮಾನವೀಯತೆಗೆ ಬಿಲ್ ನೀಡಬಲ್ಲ ಯಂತ್ರ ಇಲ್ಲಿಲ್ಲ. ನಿಮಗೆ ಒಳ್ಳೆಯದಾಗಲಿ' ಎಂದು. ಎಂತಹ ರೋಚಕ ಅನುಭವವಲ್ಲವೇ? ಹೋಟೆಲ್ಲಿನವನೇ ಆ ಮಕ್ಕಳಿಗೆ ಊಟ ಹಾಕಬಹುದಾಗಿತ್ತು. ಆದರೆ ಅವನು ವ್ಯಾಪಾರಿ. ಆದರೆ ಈ ವ್ಯಕ್ತಿ ಏನನ್ನೂ ಅಪೇಕ್ಷಿಸದೆ ಮಕ್ಕಳಿಗೆ ಊಟ ಹಾಕಿಸುವುದಲ್ಲದೇ, ಆ ಮಕ್ಕಳು ಊಟ ಮಾಡುವಾಗ ಅದನ್ನು ನೋಡುತ್ತಾ ಸಂತೋಷಪಡುತ್ತಿದ್ದನಲ್ಲಾ, ಅದನ್ನು ಕಂಡು ಹೋಟೆಲ್ ಮಾಲೀಕನಿಗೆ ಹೊಸ ಲೋಕ ತೆರೆದಿಟ್ಟಂತೆ ಆಗುತ್ತದೆ. ಹಾಗಾಗಿ ಅವನು ಮಾನವೀಯತೆಗೆ ಬಿಲ್ಲು ನೀಡುವ ಯಂತ್ರ ನಮ್ಮಲ್ಲಿಲ್ಲ ಎಂದು ಹೇಳುವಂತಾಗುತ್ತದೆ. ಈ ಘಟನೆಯ ನಂತರ ಆ ವ್ಯಕ್ತಿಗೂ–ಆ ಮಕ್ಕಳಿಗೂ–ಆ ಹೋಟೆಲ್ಲಿಗೂ ಯಾವ ಸಂಬಂಧವೂ ಮುಂದುವರಿಯದಿರಬಹುದು. ಆದರೆ ಅದರ ಪರಿಣಾಮ ಮಾತ್ರ ಶಾಶ್ವತವಾಗಿ ಉಳಿದುಬಿಡುತ್ತದೆ.

ನಮಗೆ ಜೀವನ ಏನು ಎಂಬುದು ನಾವು ತೊಂದರೆಗೆ ಸಿಲುಕಿದಾಗ ಚೆನ್ನಾಗಿ ಗೊತ್ತಾಗುತ್ತದೆ. ಆಗ ಈ ಹಣ, ಈ ಆಸ್ತಿ ಎಲ್ಲವೂ ಪ್ರಯೋಜನವಿಲ್ಲದ್ದು ಎನ್ನಿಸುತ್ತದೆ. ನಾಳೆ ಜೀವ ಹೋಗುತ್ತದೆ ಎಂಬುದು ಗೊತ್ತಾದ ಮನುಷ್ಯನಿಗೆ ಯಾವ ಆಸ್ತಿ, ಹಣದ ಬಗ್ಗೆ ವ್ಯಾಮೋಹ ಇರಲು ಸಾಧ್ಯ. ಒಂದು ಕಥೆ ಈ ರೀತಿಯದ್ದು. ಒಬ್ಬಳು ನಾಯಕಿ, ಸ್ಫುರದ್ರೂಪಿ. ಹಣಕ್ಕಾಗಿ ನಿರಂತರವಾಗಿ ಕೆಲಸ ಮಾಡುತ್ತಿರುತ್ತಾಳೆ. ಒಮ್ಮೆ ಅವಳ ಆರೋಗ್ಯದಲ್ಲಿ ಏರುಪೇರಾಗುತ್ತದೆ. ವೈದ್ಯರಲ್ಲಿಗೆ ಹೋಗುತ್ತಾಳೆ. ವಿವಿಧ ಪರೀಕ್ಷೆಗಳ ನಂತರ ವರದಿಗಾಗಿ ಕಾಯುತ್ತಾಳೆ. ವರದಿ ಬರುತ್ತದೆ, ಅದನ್ನು ನೋಡಿ ಇವಳು ಕಂಗಾಲಾಗುತ್ತಾಳೆ. ಕಾರಣ ಅವಳಿಗೆ ಒಂದು ಗಂಭೀರ ಸ್ವರೂಪದ ಖಾಯಿಲೆ ಇರುವುದು, ತಾನು ಹೆಚ್ಚು ದಿನ ಬದುಕುವುದಿಲ್ಲ ಎಂಬುದು ತಿಳಿಯುತ್ತದೆ. ಮನೆಗೆ ಬಂದು ದೇವರ ಮುಂದೆ ಕುಳಿತು ದೀಪ ಹಚ್ಚಿ ಸಮಾಧಾನಪಟ್ಟುಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಹಾಗೆಯೇ ಯೋಚನೆ ಮಾಡುತ್ತಾಳೆ. ನಾನು ಏನು ಸಂಪಾದಿಸಿದೆ, ಯಾರಿಗೋಸ್ಕರ ಶ್ರಮಪಟ್ಟೆ, ಈ ಹಣ ನಾನೇ ಇಲ್ಲದ ಮೇಲೆ ಏಕೆ ಬೇಕು ಎಂದು ಯೋಚಿಸಿ, ಕಚೇರಿಗೆ ಹೋಗಿ ದೀರ್ಘ ರಜೆ ಪಡೆಯುತ್ತಾಳೆ. ನಾನು ಇನ್ನು ಹೆಚ್ಚು ದಿನ ಬದುಕುಳಿಯುವುದಿಲ್ಲ. ಹಾಗಾಗಿ ನಾನು ನನ್ನ ಹಣವನ್ನು 'ಎಂಜಾಯ್' ಮಾಡಲು ಬಳಸಬೇಕು. ಬೆಲೆಬಾಳುವ ಒಡವೆ–ವಸ್ತ್ರ ಖರೀದಿಸಬೇಕು ಇತ್ಯಾದಿ ಯೋಚನೆ ಬಂದು ಹಾಗೇ ಹಣ ಖರ್ಚು ಮಾಡುತ್ತಾಳೆ. ಏನಾದರೂ ನನ್ನ ಆಯಸ್ಸು ಮುಗಿಯುತ್ತಿದೆ, ನಂತರ ಈ ಹಣ ಏತಕ್ಕಾಗಿ ಎಂದು ಯೋಚಿಸಿ, ದೇವರು ನನಗೆ ಸ್ವಲ್ಪ ಸಮಯ ನೀಡಿದ್ದಾನೆ, ಅವನು ಒಪ್ಪುವ ಕೆಲಸ ಮಾಡಬೇಕು ಎಂದು ಧಾರಾಳವಾಗಿ ಬಡಬಗ್ಗರಿಗೆ ಹಂಚುತ್ತಾಳೆ. ಅನಾಥಾಲಯಕ್ಕೆ ದೇಣಿಗೆ ನೀಡುತ್ತಾಳೆ. ಅವಳ ಮನಸ್ಸಿಗೆ ಸಮಾಧಾನವಾಗುತ್ತದೆ. ಸಾವನ್ನು ಎದುರಿಸಲು ಸಿದ್ಧಳಾಗುತ್ತಾಳೆ. ಒಂದು ದಿನ ಆಸ್ಪತ್ರೆಯಿಂದ ಬಂದ ದೂರವಾಣಿ ಕರೆ "ನಿಮಗೆ ನೀಡಿದ್ದು ಬೇರೆಯವರ ಪರೀಕ್ಷಾ ವರದಿಯಾಗಿದ್ದು, ನಿಮಗೆ ಯಾವುದೇ ಆರೋಗ್ಯ ಸಮಸ್ಯೆ ಇಲ್ಲ" ಎಂದು ತಿಳಿಸಲಾಗುತ್ತದೆ. ಆದರೆ ಅಷ್ಟರಲ್ಲಿ ಅವಳಿಗೆ ಜೀವನದ ಸಾರ್ಥಕತೆ ಎಂದರೇನು ಎಂಬುದು ತಿಳಿದಿರುತ್ತದೆ. ಇದು ನಮ್ಮ ಜೀವನ. ಸಂಬಂಧ ಗಟ್ಟಿಗೊಳಿಸಿಕೊಳ್ಳಬೇಕಾದ ಹೊಣೆಗಾರಿಕೆ ನಮ್ಮದೇ ಆಗಿರುತ್ತದೆ.

ಫಿಫಾ ವಿಶ್ವಕಪ್: ನೆದರ್ಲ್ಯಾಂಡ್‌ನ್ನು ಮಣಿಸಿದ ಅರ್ಜೆಂಟೀನಾ ಸೆಮೀಸ್‌ಗೆ


ದೊಹಾ, ಡಿ.10– ಫಿಫಾ ವಿಶ್ವಕಪ್–2022 ರಲ್ಲಿ ಅದ್ಭುತ ಪ್ರದರ್ಶನ ನೀಡಿರುವ ಅರ್ಜೆಂಟಿನಾ ನೆದರ್ಲ್ಯಾಂಡ್ ತಂಡವನ್ನು ಮಣಿಸಿ ಸೆಮಿಫೈನಲ್‌ಗೆ ತಲುಪಿದೆ.

ಅಲ್ ದಯೆನ್‌ನ ಲೌಸನ್ನೆ ಸ್ಟೇಡಿಯಂನಲ್ಲಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸ್ಕೋರ್ 2–2 ಆಗಿ ಸಮಬಲವಾಗಿತ್ತು. ಆದರೆ ಅರ್ಜೆಂಟೀನಾ ಪೆನಾಲ್ಟಿ ಶೂಟೌಟ್‌ನಲ್ಲಿ ಗೆಲುವು ಸಾಧಿಸಿ, ನೆದರ್ಲ್ಯಾಂಡ್ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದೆ.

ಅರ್ಜೆಂಟೀನಾದ ಗೋಲ್ ಕೀಪರ್ ಎಮಿಲಿಯಾನೊ ಮಾರ್ಟಿನೆಜ್ ಶೂಟ್‌ಔಟ್‌ನಲ್ಲಿ ಹೀರೋ ಆದರು. ಪಂದ್ಯದಲ್ಲಿ ಅರ್ಜೆಂಟೀನಾ 80 ನಿಮಿಷಗಳವರೆಗೆ 2–0 ಮುನ್ನಡೆ ಸಾಧಿಸಿತ್ತು. ಆದರೆ ನೆದರ್ಲ್ಯಾಂಡ್ಸ್‌ನ ವೂಟ್ ವೆಗೋರ್ಸ್ಟ್ ಸತತ 2 ಗೋಲುಗಳನ್ನು ಗಳಿಸಿ ಸ್ಕೋರ್ ಅನ್ನು ಸಮಗೊಳಿಸಿದರು. 83ನೇ ನಿಮಿಷದಲ್ಲಿ ಮೊದಲ ಗೋಲು ಮತ್ತು ನಂತರ ಹೆಚ್ಚುವರಿ ಸಮಯದಲ್ಲಿ (90+11) ಸ್ಕೋರ್ ಅನ್ನು 2–2 ಮಾಡಿದರು. ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ ಅರ್ಜೆಂಟೀನಾ 4–3 ಅಂತರದಲ್ಲಿ ಜಯ ಸಾಧಿಸಿ ಸೆಮಿಫೈನಲ್ಸ್ ಪ್ರವೇಶಿಸಿದೆ.

ಭೂಪೇಂದ್ರ ಪಟೇಲ್ 2ನೇ ಬಾರಿ ಗುಜರಾತ್ ಸಿಎಂ ಆಗಿ ನಾಳೆ ಪ್ರಮಾಣ

ಅಹಮದಾಬಾದ್,ಡಿ.10–ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಗುಜರಾತ್‌ನ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಶನಿವಾರ ಮರು ಆಯ್ಕೆಯಾಗಿದ್ದು, ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ.



ಇಂದು ಗಾಂಧಿನಗರದಲ್ಲಿರುವ ಬಿಜೆಪಿ ರಾಜ್ಯ ಕೇಂದ್ರ ಕಚೇರಿ 'ಕಮಲಂ'ನಲ್ಲಿ ನಡೆದ ನೂತನ ಶಾಸಕರ ಸಭೆಯಲ್ಲಿ 60 ವರ್ಷದ ಪಟೇಲ್ ಅವರನ್ನು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ಮಾಡಲಾಯಿತು. ಪಕ್ಷದ ಕೇಂದ್ರ ವೀಕ್ಷಕರಾಗಿ ಬಿಜೆಪಿ ಹಿರಿಯ ನಾಯಕರಾದ ರಾಜನಾಥ್ ಸಿಂಗ್, ಬಿ.ಎಸ್.ಯಡಿಯೂರಪ್ಪ ಮತ್ತು ಅರ್ಜುನ್ ಮುಂಡಾ ಸೇರಿದಂತೆ ಹಲವರು ಸಭೆಯಲ್ಲಿ ಹಾಜರಿದ್ದರು.

ಭೂಪೇಂದ್ರ ಪಟೇಲ್ ಅವರು ಸೋಮವಾರ 2ನೇ ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ಮುಖ್ಯಮಂತ್ರಿಗಳು ಸೇರಿದಂತೆ ಹಲವು ಗಣ್ಯರು ಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ ಇದೆ. ಈಗಷ್ಟೇ ಮುಕ್ತಾಯಗೊಂಡ ವಿಧಾನಸಭೆ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ 156 ಸ್ಥಾನಗಳನ್ನು ಪಡೆಯುವ ಮೂಲಕ ಐತಿಹಾಸಿಕ ಗೆಲುವು ದಾಖಲಿಸಿದೆ.

ಮಹಾಜನ ಕಾಲೇಜಿನಲ್ಲಿ ವಿಶ್ವ ಮಾನವ ಹಕ್ಕುಗಳ ದಿನಾಚರಣೆ

ಪ್ರತಿಯೊಬ್ಬರು ತಮ್ಮ ತಮ್ಮ ಹಕ್ಕುಗಳ ರಕ್ಷಿಸಿಕೊಳ್ಳಿ

ಬೆಂಗಳೂರು ವಿವಿ ಕಾನೂನು ವಿಭಾಗದ ಪ್ರಾಧ್ಯಾಪಕ ಡಾ. ಎನ್.ಸತೀಶ್‌ಗೌಡ ಸಲಹೆ

ಮೈಸೂರು, ಡಿ.10(ಪಿಎಂ)– ಪ್ರಜಾಪ್ರಭುತ್ವದಲ್ಲಿ ಮಾನವ ಹಕ್ಕುಗಳು ಒಂದು ಮುಖ್ಯ ಅಂಗ. ಪ್ರತಿಯೊಬ್ಬ ನಾಗರಿಕರು ಮಾನವ ಹಕ್ಕುಗಳ ಬಗ್ಗೆ ಅರಿತು ತಮ್ಮ ಹಕ್ಕುಗಳ ರಕ್ಷಣೆ ಮಾಡಿಕೊಳ್ಳಬೇಕು ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ಕಾನೂನು ವಿಭಾಗದ ಪ್ರಾಧ್ಯಾಪಕ ಡಾ.ಎನ್.ಸತೀಶ್‌ಗೌಡ ಹೇಳಿದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ವಿದ್ಯಾ ಸಂಸ್ಥೆಯ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಕಾನೂನು ಕಾಲೇಜು ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಮಾನವ ಹಕ್ಕುಗಳ ದಿನಾಚರಣೆಯಲ್ಲಿ ಅವರು ಉಪನ್ಯಾಸ ನೀಡಿದರು.

ಭಾರತ ಸಂವಿಧಾನದಲ್ಲಿ ಗರಿಷ್ಠ ಪ್ರಮಾಣದಲ್ಲಿ ಮಾನವ ಹಕ್ಕುಗಳನ್ನು ಕಾನೂನಾತ್ಮಕವಾಗಿ ನೀಡಲಾಗಿದೆ. ಆದರೆ ಕನಿಷ್ಠ ಮಟ್ಟದಲ್ಲಿ ಅನುಷ್ಠಾನಗೊಳಿಸಿದ್ದು, ಇದು ನಿಜಕ್ಕೂ ದುರಂತ. ಉತ್ತಮ ಜೀವನಕ್ಕಾಗಿ ಮಾನವ ಹಕ್ಕುಗಳು ಬಹಳ ಮುಖ್ಯ. ತಮ್ಮ ಹಕ್ಕುಗಳನ್ನು ರಕ್ಷಣೆ ಮಾಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಮೇಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಮಾತನಾಡಿ, ನಮ್ಮ ಸಂಸ್ಥೆ ಶೈಕ್ಷಣಿಕವಾಗಿ ಪ್ರತಿಯೊಬ್ಬರಿಗೂ ಸಮಾನ ಸೌಲಭ್ಯಗಳನ್ನು ಕಲ್ಪಿಸಿದೆ. ಶೇ.95ಕ್ಕಿಂತ ಹೆಚ್ಚಿನ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಯೋಜನೆ ಹಮ್ಮಿಕೊಂಡಿದೆ. ಇದಲ್ಲದೆ, ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಪೋಷಕರ ಮಕ್ಕಳಿಗೆ ಪ್ರವೇಶಾತಿಯಲ್ಲಿ ರಿಯಾಯಿತಿ ಕಲ್ಪಿಸಿದೆ. ಹೀಗೆ ಹಲವಾರು ರೀತಿಯಲ್ಲಿ ನಮ್ಮ ಸಂಸ್ಥೆ ನಾಗರಿಕರಿಗೆ ನೆರವಾಗಿದೆ ಎಂದು ತಿಳಿಸಿದರು.

ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮಹಾಜನ ಕಾಲೇಜಿನ ಕಾರ್ಯ ನಿರ್ವಾಹಣಾ ಅಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಮಹಾಜನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ.ದೊಡ್ಡರಸಯ್ಯ, ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ.ಪ್ರಭುಸ್ವಾಮಿ ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಭಾನುವಾರ
11-12-2022

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

■ ಗ.ನಾ.ಭಟ್ಟ

“ ಕಾಂತಾರ ಸಿನಿಮಾದ ನಿರ್ದೇಶಕ ಮತ್ತು ನಟ ರಿಷಬ್ ಶೆಟ್ಟಿ ನಿರ್ದೇಶಕನಾಗಿ, ನಟನಾಗಿ, ಕಥಾ ಲೇಖಕರಾಗಿಯೂ ಸಮಾನ ಗೆಲುವನ್ನು ಸಾಧಿಸಿದ್ದಾರೆ. ಹಾಗೆ ಹೇಳಹೋದರೆ ಇವರ ಪ್ರತಿಭೆ, ಬುದ್ಧಿಮತ್ತೆ, ನಿರ್ದೇಶನ ಕೌಶಲ ಅಸದೃಶವಾದುದು. ಒಬ್ಬನಲ್ಲೇ ಇವೆಲ್ಲವೂ ಸಂಗಮಿಸುವುದು ಅಪರೂಪ. ಅಂತಹ ಭಾಗ್ಯಶಾಲಿಗಳ ಪಂಕ್ತಿಗೆ ಸೇರಿದವರು ರಿಷಭ್ ಶೆಟ್ಟಿ. ನಿಜಕ್ಕೂ ಅವರು ಕನ್ನಡ ನಾಡಿನ ಅದರಲ್ಲೂ ಸಿನಿಮಾ ಕ್ಷೇತ್ರದ ಒಂದು ಧ್ರುವತಾರೆಯಾಗಿ ಕಂಗೊಳಿಸಿದ್ದು ಇಡೀ ಕನ್ನಡ ನಾಡು ಹೆಮ್ಮೆ ಪಡುವಂತಾಗಿದೆ.





ಕಾಂತಾರ -ಶುದ್ಧ ದೇಶಿ ಸೊಗಡು


ರಿಷಭ್ ಶೆಟ್ಟಿ


ಎಂತಹ ಕಷ್ಟಕಾರ್ಪಣ್ಯಗಳಿರಲಿ, ಸೋಲಿರಲಿ, ಗೆಲುವಿರಲಿ, ಉಲ್ಲಾಸ-ಸಂತೋಷಗಳೇ ಇರಲಿ, ಪಶು-ಪಕ್ಷಿ-ಪ್ರಾಣಿ-ಮನುಷ್ಯಾದಿ ಸಕಲ ಜೀವಿಗಳಿಗೂ ಪ್ರೇಮ-ಕಾಮದ ಆಕರ್ಷಣೆ ಮಾತ್ರ ಸದಾ ಜೀವಂತವಾಗಿ ರುತ್ತವೆ. ತನ್ನ ಆಸೆಯನ್ನು ಪೂರೈಸಿಕೊಳ್ಳು ವುದಕ್ಕೆ ಅವು ಸದಾ ಚಿಂತಿಸುತ್ತಿರುತ್ತವೆ. ಸಣ್ಣ ಅವಕಾಶ ಸಿಕ್ಕರೂ ಸಾಕು, ಅವನ್ನು ಪೂರೈಸಿಕೊಳ್ಳುವುದಕ್ಕೆ ಅವು ಮುಂದಾಗಿ ಬಿಡುತ್ತವೆ. ಅಂತಹ ಒಂದು ಸುಮನೋಹರ ಸನ್ನಿವೇಶವನ್ನು 'ಕಾಂತಾರ' ಸಿನಿಮಾದ ನಿರ್ದೇಶಕ ಮತ್ತು ನಟ ರಿಷಭ್ ಶೆಟ್ಟಿಯವರು ವೀಕ್ಷಕರಿಗೆ ಬಹು ಹೃದ್ಯವಾಗಿ ಉಣ ಬಡಿಸಿದ್ದಾರೆ.

ಕೊಲೆ ಆಪಾದನೆ ಮೇಲೆ ಆ ಸಿನಿಮಾದ ನಾಯಕ ಶಿವ ಕೆಲವು ದಿನಗಳವರೆಗೆ ತಲೆಮರೆಸಿಕೊಂಡು ಇರಬೇಕಾಗುತ್ತದೆ. ಮಧ್ಯಂತರದಲ್ಲಿ ತನ್ನ ತಾಯಿ ಹಾಗೂ ತನ್ನ ಪ್ರಿಯತಮೆಯನ್ನು ನೋಡಬೇಕೆಂಬ ಆಸೆಯುಂಟಾಗಿ, ಹೇಗೋ ತಲೆಮರೆಸಿಕೊಂಡು ಮನೆಗೆ ಬರುತ್ತಾನೆ. ಏಕಾಂತದಲ್ಲಿ ಪ್ರೇಯಸಿಯನ್ನೂ ಸಂಧಿಸುತ್ತಾನೆ.

ಅದೊಂದು ರೋಚಕ ಸನ್ನಿವೇಶ. ಅವನ ಪ್ರೇಯಸಿ ಲೀಲಾ (ಸಪ್ತಮೀ ಗೌಡ) ಅವನಿಗೆ ಅತ್ಯಂತ ಪ್ರಿಯವಾದ ಮೀನು ಸಾರನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಮೆಟ್ಟಗತ್ತಿಮಣೆ ಮೇಲೆ ಕೂತು ಮೀನನ್ನು ಹೆಚ್ಚುತ್ತಿರುತ್ತಾಳೆ. ಆಗಲೇ ನಿರ್ದೇಶಕ ರಿಷಭ್ ಶೆಟ್ಟಿಯವರ ಪ್ರತಿಭಾ ಸಂಪತ್ತು ಮೇಲ್ಗೈ ಸಾಧಿಸಿದ್ದನ್ನು ಕಾಣಬಹುದು. ಅವಳಿಗೆ ತೊಡಿಸಿದ ಸೀರೆ ಮತ್ತು ಬ್ಲೌಸ್ ಎಲ್ಲಿಯೂ ಸಡಿಲಗೊಳ್ಳದೆ, ಅವಳ ಮೈಗೆ ಬಿಗಿಯಾಗಿ ಒಪ್ಪವಾಗಿ ಹೊಂದಿಕೊಂಡು, ಮೊಳಕಾಲು ಭಾಗ ಮಾತ್ರ ಅನಾವರಣಗೊಳ್ಳುವಂತೆ ಮಾಡಿ, ಶಿವನಿಗೆ ಮನ್ಮಥಶರ ತಾಗುವಂತೆ ಮಾಡಿದ್ದು ಮತ್ತು ಮರುಕ್ಷಣವೇ ಅವರಿಬ್ಬರಲ್ಲಿ ಸಂಭವಿಸಬಹುದಾದ ಸಮಾಗಮಕ್ಕೆ ಸೂಚನೆ ನೀಡಿದ್ದು ನಿರ್ದೇಶಕನ ಸುಶಿಕ್ಷಿತ, ಸುಸಂಸ್ಕೃತ ರಸಿಕಪ್ರಜ್ಞೆಯನ್ನು ಇನ್ನಿಲ್ಲದಂತೆ ಸಾರುತ್ತದೆ. ಆ ರಸನಿಮಿಷ ಕಳೆಯುತ್ತಿದ್ದಂತೆ ಸ್ವಲ್ಪ ಸಮಯದಲ್ಲೇ ಅವರೀರ್ವರ ಸಮಾಗಮವಾಗುತ್ತದೆ. ಸ್ವಲ್ಪವೂ ಅಶ್ಲೀಲದ ಸೋಂಕಿಲ್ಲದೆ ಅದನ್ನು ಸೆರೆಹಿಡಿದ ನಿರ್ದೇಶಕನ ಕೈಚಳಕ ಇಲ್ಲಿ ಹಿಮಾಲಯದೆತ್ತರವನ್ನು ತಲುಪುತ್ತದೆ.

ಗಂಡು-ಹೆಣ್ಣಿನ ಮಿಲನೋತ್ಸವದ ಆ ಸುಮಧುರ ಕ್ಷಣವನ್ನು ಪ್ರೇಕ್ಷಕ ಹೃದಯಕ್ಕೆ ತಲುಪಿಸುವಲ್ಲಿ ಲೀಲಾಳ ಮುಖದಲ್ಲಿ ಒಡೆದುಮೂಡಿದ ನಾಲ್ಕು ಬೆವರು ಹನಿಗಳೇ ಸಾಕು. “ಬೇಡ ಬೇಡ” ಎನ್ನುವ ಅವಳ ಉದ್ಗಾರವಂತೂ ರಸಿಕ ಮನಸ್ಸಿಗೆ ಬೆಂಕಿಯಿಡುತ್ತದೆ.

ಅದರ ಮುಂದಿನ ಭಾಗವಂತೂ ಶೃಂಗಾರದ ಪರಮೋಚ್ಚ ಸ್ಥಾನಕ್ಕೆ ಒಯ್ಯುತ್ತದೆ. ಅದು ಕೈಲಾಸದಲ್ಲಿ. ಕೈಲಾಸ ಅಂದರೆ ಅಡವಿಯಲ್ಲಿ ಮರದ ಮೇಲೆ ಕಟ್ಟಿಕೊಂಡ ಗುಡಿಲಿಸಿಲಿನಂತಹ ತಾಣ ಅದು. ಅದಕ್ಕೆ ಇಟ್ಟ ಹೆಸರು 'ಕೈಲಾಸ'. ಕೈಲಾಸವಾಸೀ ಪರಶಿವನ ಅರ್ಧನಾರೀಶ್ವರ ತತ್ತ್ವ, ಶಿವನ ತಾಂಡವ ನೃತ್ಯ, ಪಾರ್ವತಿಯ ಲಾಸ್ಯನೃತ್ಯ, ವಾಗರ್ಥದಂತೆ ಸಮ್ಮಿಲನಗೊಂಡ ಅವರ ಸರಸ ಜೀವನ ಮತ್ತು ಅಪೂರ್ವ ದಾಂಪತ್ಯ ಇವೇ ಮೊದಲಾದುವನ್ನು ರೋಚಕವಾಗಿ ಸಂಕೇತಿಸುವ ಮಂಗಳಧಾಮ ಅದು. “ಕೈಲಾಸ ಶಿಖರೇ ರಮ್ಯೇ ಶಂಕರಸ್ಯ ಶಿವಾಲಯೇ”-ಕೈಲಾಸದ ಶಿಖರದಲ್ಲಿ, ರಮಣೀಯ ತಾಣದಲ್ಲಿ ಶಂಕರನ ದೇವಾಲಯ ಇದೆ ಎಂಬ ಮಾತು ಬಂದದ್ದು ಬಹುಶಃ ಇಂಥಾದ್ದರ ಹಿನ್ನೆಲೆಯಲ್ಲೇ ಇರಬೇಕು! ಸಿನಿಮಾ ನಾಯಕನ ಜೋಪಡಿಯಂತಹ ಆ ಸ್ವರ್ಗಧಾಮದಲ್ಲಿ -ಕೈಲಾಸದಲ್ಲಿ ನಾಯಕ ಮತ್ತು ನಾಯಕಿಯ ಶೃಂಗಾರ ಲೀಲೆ ಸ್ವಲ್ಪವೂ ದೈಹಿಕವಾಗಿ ಪ್ರಕಟಗೊಳ್ಳದೇ ಅತ್ಯಂತ ಧ್ವನಿಪೂರ್ಣವಾಗಿ ಮೂಡಿಬಂದದ್ದು ಇಡೀ ಸಿನಿಮಾಕ್ಕೆ ಹೊಸ ಆಯಾಮವನ್ನು ತಂದಿದೆ. ಹೋಗುವಾಗಿನ ಲೀಲಾಳ ಉಡುಪು ಬರುವಾಗ ಅದು ಬೇರೆಯದೇ ಆಗಿರುತ್ತದೆ. ಹೋಗುವಾಗ ಸೀರೆ ಇದ್ದದ್ದು ಬರುವಾಗ ಒಂದು ಚೆಕ್ಸ್ ಶರ್ಟ್ ಮತ್ತು ಸಡಿಲವಾದ ಪೆಟ್ಟಿಕೋಟೊಂದಿಗೆ ಆಕೆ ಬರುವುದು ನಾಯಕ- ನಾಯಕಿಯರ ಸಂಗಮವನ್ನು ಅತ್ಯಂತ ಶಕ್ತವಾಗಿ ಧ್ವನಿಸುತ್ತದೆ.


ಸಪ್ತಮಿ ಗೌಡ


> **ಎಲ್ಲದಕ್ಕಿಂತ ಮಿಗಿಲಾಗಿ ಈ ಸಿನಿಮಾ ಐತಿಹಾಸಿಕ ದಾಖಲೆಯನ್ನು ಮಾಡಿದ್ದು ಯಾಕೆ ಅಂದರೆ- ಇದು ಇತರ ಸಿನಿಮಾಗಳ ಸಿದ್ಧಮಾದರಿಯನ್ನು ಅನುಸರಿಸದೇ ದೇಸೀಯ ಸೊಗಡಿಗೆ ಆದ್ಯತೆ ನೀಡಿದ್ದೇ ಅದಕ್ಕೆ ಕಾರಣ. ದೈವನೃತ್ಯದ ಸೊಗಸು, ಅದರ ಹಾಡು, ಕಂಬಳ, ಕೋಳಿ ಅಂಕ, ಕೆಸರು ಗದ್ದೆ ಓಟ, ಜಾತ್ರೆಯ ನೈಜ ವಾತಾವರಣದ ದರ್ಶನ, ಒಟ್ಟೊಟ್ಟಿಗೇ ಇರುವ ಹಾದರ-ಪ್ರೀತಿ- ಜಗಳ, ಭಂಗಿ- ಬೀಡಿ- ಸಾರಾಯಿ, ಹಡಬ್ಬೆ ನಾಯಿ, ಬೇವರ್ಸಿ, ಬೊಜ್ಜ, ನಿನ್ನ ಅಜ್ಜಿ ಪಿಂಡ, ಸಾವು ಮೊದಲಾದ ಬೈಗುಳ ಶಬ್ದಗಳ ಪುನರಾವರ್ತನೆ, ಅಲ್ಲಲ್ಲಿ ನವುರಾದ ಹಾಸ್ಯ ಇವೇ ಮೊದಲಾದವು ಈ ಸಿನಿಮಾವನ್ನು ಯಶಸ್ಸಿನ ತುಟ್ಟ ತುದಿಗೆ ಒಯ್ದವು.**

ಇದು 'ಕಾಂತಾರ' ಸಿನಿಮಾದ ನಿರ್ದೇಶಕ ಮತ್ತು ನಟನ ಪ್ರತಿಭೆ, ಬುದ್ಧಿಮತ್ತೆ, ಕೌಶಲ, ಜಾಣ್ಮೆಯನ್ನು ಎತ್ತಿಹಿಡಿಯುವ ಒಂದು ಸಂಗತಿಯಾದರೆ ಇದಕ್ಕೆ ಪೂರಕವಾಗಿ ಬರುವ ಸಂಗತಿಗಳು ಹತ್ತು-ಹಲವು. ಸಿನಿಮಾದ ಮುಖ್ಯ ಆಶಯವನ್ನು ಸಾರುವ, ದಕ್ಷಿಣ ಕನ್ನಡ ಜಿಲ್ಲೆಯ ಜೀವನ ಪದ್ಧತಿ, ಕಂಬಳ, ಕೋಳಿ ಅಂಕ, ಯಕ್ಷಗಾನ, ದೈವದ ನಂಬಿಕೆ, ಅದರ ಪೂಜಾ ವಿಧಾನ, ಸಹಜವಾಗಿ ಬರುವ ಆದರೆ ಬೇಸರವಾಗದ ಬೈಗುಳ ಶಬ್ದಗಳು, ದೈವದ ಮೇಲಿನ ಮುಗ್ಧ- ಅಪಾರ ನಂಬಿಕೆ ಮತ್ತು ಅದಕ್ಕೆ ವಿರುದ್ಧವಾದ ನಾಸ್ತಿಕ ಮನೋಧರ್ಮ- ಪ್ರಶ್ನೋತ್ಥಾಪಕ- ಆಧುನಿಕ- ವೈಜ್ಞಾನಿಕ ಮನೋದೃಷ್ಟಿ, ಜಾತ್ರೆಯ ಸೊಗಡು, ಭಾಷಾ ಸಂಸ್ಕೃತಿ, ಪ್ರಾದೇಶಿಕ ನುಡಿಗಟ್ಟು, ಮುಂತಾಗಿ ಹಲವು ಹತ್ತು ಸಂಗತಿಗಳು ಸಿನಿಮಾದಲ್ಲಿ ಹರಳುಗಟ್ಟಿ ಪ್ರೇಕ್ಷಕನನ್ನು ಒಂದು ಆತ್ಮೀಯ, ಆಪ್ತ, ಆಪ್ಯಾಯನ ಲೋಕಕ್ಕೆ ಕೊಂಡೊಯ್ಯುತ್ತದೆ.

ದೈವಾರಾಧನೆ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅನೂಹ್ಯ ಧಾರ್ಮಿಕಾಚರಣೆ. ಅದು ತನ್ನ ಗರ್ಭದಲ್ಲಿ ಅಗಾಧವಾದ ಸಾಹಿತ್ಯವನ್ನೂ, ಸಂಸ್ಕೃತಿಯನ್ನೂ ಹುದುಗಿಸಿಕೊಂಡಿದೆ. ಇದನ್ನು ಸೂಕ್ಷ್ಮವಾಗಿ ಗಮನಿಸುವವನಿಗೆ ಮಾತ್ರ ಅರ್ಥವಾಗುವಂಥಾದ್ದು. ಇದೊಂದು ಬಗೆಯ ಸತ್ಯ ಸಾಕ್ಷಾತ್ಕಾರದ ಶ್ರದ್ಧೆಯ, ನಂಬಿಕೆಯ ಆಚರಣೆ. ಹಾಗಾಗಿ ಇಲ್ಲಿ ದೈವಾರಾಧನಾ ಕೇಂದ್ರಗಳು ಹಲವು. ಇಂಥಾದ್ದರ ಹಿನ್ನೆಲೆಯಲ್ಲಿ 'ದಂತಕಥೆ'ಯೊಂದನ್ನು ಆಧರಿಸಿ ಚಿತ್ರೀಕರಣಗೊಂಡ 'ಕಾಂತಾರ' ಕನ್ನಡ ನಾಡಿಗೆ ಮಾತ್ರವಲ್ಲ. ಇಡೀ ವಿಶ್ವಕ್ಕೇ ಒಂದು ವಿಶಿಷ್ಟ ನವಿನಾನುಭೂತಿ, ಹೊಸ ಸ್ಪರ್ಶದ ಸಿನಿಮಾ ಆಗಿ ಮೈದಳೆದಿದೆ.

ಸಕಲ ಐಶ್ವರ್ಯ-ಸಂಪತ್ತುಗಳಿದ್ದೂ ಮನಸ್ಸಿಗೆ ನೆಮ್ಮದಿ-ಶಾಂತಿಯಿಲ್ಲದ ರಾಜನೊಬ್ಬ ಕಾರಣಿಕನೊಬ್ಬನ ಮಾತನ್ನು ಕೇಳಿ, ನೆಮ್ಮದಿಯನ್ನು ಹುಡುಕಿಕೊಂಡು ಕಾಂತಾರಕ್ಕೆ ಹೋಗುತ್ತಾನೆ. 'ಕಾಂತಾರ' ಎಂದರೆ ಮಹಾರಣ್ಯ. ಅಲ್ಲಿ ಒಂದಿಷ್ಟು ಜನರ ವಾಸ. ಅವರಲ್ಲಿ ಒಬ್ಬನಿಗೆ ದೈವ ಬಂದು ಅದು **“ನಿನಗೆ ನೆಮ್ಮದಿ-ಶಾಂತಿ ಕೊಡುತ್ತೇನೆ. ಆದರೆ ನೀನು ನಮಗೆ ನನ್ನ ಕೂಗಳತೆಯ ದೂರದಷ್ಟು ಜಾಗವನ್ನು ಕೊಡಬೇಕು”** ಎಂದು ಕೇಳುತ್ತದೆ. ಅದಕ್ಕೆ ರಾಜ ಒಪ್ಪಿ ದೈವವನ್ನು ಮನೆಗೆ ತರುತ್ತಾನೆ. ಅವರಿಗೆ ಜಮೀನನ್ನೂ ಕೊಡುತ್ತಾನೆ. ಅದರಿಂದ ಅವರು ಸುಖವಾಗಿರುತ್ತಾರೆ. ರಾಜನಿಗೂ ಸುಖ-ಶಾಂತಿ-ನೆಮ್ಮದಿ ದೊರೆಯುತ್ತದೆ. ಆದರೆ ರಾಜನ ನಂತರ ಅವನ ಮಗ ದೈವದ ಬಳಿ ತನ್ನ ಆಸ್ತಿಯನ್ನು ಹಿಂತಿರುಗಿಸುವಂತೆ ಕೇಳುತ್ತಾನೆ.

ಅಲ್ಲಿಂದ ಶುರುವಾಗುತ್ತದೆ. ತಲೆಮಾರಿಂದ ತಲೆಮಾರು ಘರ್ಷಣೆ. ದೈವದ ಮೇಲಿನ ನಂಬಿಕೆ ಮತ್ತು ಅದರ ಮೇಲಿನ ತಿರಸ್ಕಾರ, ಅಪನಂಬಿಕೆಯ ಮನೋವೃತ್ತಿ. ದಣಿಯ ಮಗನಿಗೆ ದೈವದ ಮೇಲೆ ನಂಬಿಕೆಯಿರುವುದಿಲ್ಲ ಅಪ್ಪನಿಂದ ದಾನ ಮಾಡಲ್ಪಟ್ಟ ಜಮೀನನ್ನು ವಾಪಸು ಕೊಡುವಂತೆ ಆತ ದೈವದ ಬಳಿ ಕೇಳುತ್ತಾನೆ. ಅದಕ್ಕೆ **“ದೈವ ನಾನು ನಿನಗೆ ಕೊಟ್ಟ ಶಾಂತಿ-ನೆಮ್ಮದಿಯನ್ನು ಹಿಂತಿರುಗಿಸುವೆಯಾ?”** ಎಂದು ಕೇಳುತ್ತದೆ. ಅದು ತೀವ್ರಸ್ವರೂಪದ ಭಿನ್ನಾಭಿಪ್ರಾಯಕ್ಕೆ ತಿರುಗಿ ದಣಿಯ ಮಗ ರಕ್ತ ಕಾರಿ ಸಾಯುತ್ತಾನೆ. ಇದೇ ಈ ಸಿನಿಮಾದ ಬೀಜ ಮತ್ತು ಬೆಳವಣಿಗೆಯ ಪ್ರಮುಖ ಅಂಶ. ಇದರ ರಚಯಿತಾ ರಿಷಭ್ ಶೆಟ್ಟಿ ಗೆಲ್ಲುವುದೇ ಇಲ್ಲಿ. ಇದನ್ನು ಹೊರತುಪಡಿಸಿ ಕೇವಲ ಧಾರ್ಮಿಕ ನಂಬಿಕೆಯನ್ನೇ ವೈಭವೀಕರಿಸಿದ್ದರೆ ಖಂಡಿತಕ್ಕೂ ಸಿನಿಮಾ ಸೋಲುತ್ತಿತ್ತು. ಸಿನಿಮಾದ ಕೊನೆಯಲ್ಲಿ ಅವರು ದೈವದ ಹಿರಿಮೆಯನ್ನು ಸ್ಥಾಪಿಸಿದರೂ ಅದಕ್ಕೆ ಕೌಂಟರ್ ಪಾರ್ಟ್‌ನ್ನು ತಂದಿದ್ದು ಸಿನಿಮಾದ ರುಚಿ ವೈವಿಧ್ಯ ಹೆಚ್ಚುವುದಕ್ಕೆ ಕಾರಣವಾಯಿತು. ಸಮಕಾಲೀನ, ಆಧುನಿಕ ಮನಸ್ಸಿಗೂ ಇಲ್ಲಿ ಆಹಾರ ದೊರೆಯಿತು. ದೇವರನ್ನು ನಂಬುವುದು ಬಿಡುವುದು ಅವರವರಿಗೆ ಬಿಟ್ಟಿದ್ದು. ರಿಷಭ್ ಶೆಟ್ಟಿ ಅದನ್ನು ಪ್ರೇಕ್ಷಕರಿಗೇ ಬಿಟ್ಟರು. ಇದೇ ಸಿನಿಮಾದ ಯಶಸ್ಸಿಗೆ ತಳಹದಿಯಾಯಿತು. ಯಾವುದೋ ಒಂದು ಕಡೆ ವಾಲದೇ ಸಮತೋಲನ ತಂದುಕೊಂಡಿದ್ದೇ ಕಥಾರಚನೆಯ ಔಚಿತ್ಯ ಪ್ರಜ್ಞೆಯೂ ಆಗಿ, ಅದರ ಹೆಗ್ಗಳಿಕೆಗೂ ಕಾರಣವಾಗಿ ಪರಿಣಮಿಸಿತು.



ಇದರ ವ್ಯಂಗ್ಯವೆಂದರೆ ರಾಜನ ಮೊಮ್ಮಗನೂ ತಂದೆಯ ಹಾದಿಯನ್ನೇ ಹಿಡಿಯುತ್ತಾನೆ. ಇವನು ಪರಮ ದುಷ್ಟ; ವಂಚಕ. ಇವನ ಹೆಸರು ದೇವೇಂದ್ರ ಸುತ್ತೂರು. ಇದನ್ನು ಮಾಡಿದವರು ನಟ ಅಚ್ಯುತ. ನಯವಂಚಕ ಪಾತ್ರದಲ್ಲಿ ಮುಂಚೂಣಿಯಲ್ಲಿರುವ ಈ ನಟನನ್ನು ಈ ಪಾತ್ರಕ್ಕೇ ಆಯ್ಕೆ ಮಾಡಿದ್ದರಲ್ಲೂ ರಿಷಭ್ ಶೆಟ್ಟಿಯವರ ಪ್ರತಿಭೆಯಿದೆ; ಜಾಣ್ಮೆಯಿದೆ. ಈತ ಬೆಣ್ಣೆಯಲ್ಲಿ ಕೂದಲೆಳೆಯುವಂತೆ ಮಾತನಾಡಿ ಆ ಅಡವಿಯ ಮುಗ್ಧರನ್ನು ಯಾಮಾರಿಸುವವ. ಅವರಿಗೆ ಸಾರಾಯಿಯ ಹೊರತಾಗಿಯೂ ಸ್ಕಾಚ್‌ನಂತಹ ಬೆಲೆಬಾಳುವ ಮದ್ಯವನ್ನೂ ಕೊಟ್ಟು ಅವರನ್ನು ತನಗೆ ಬೇಕಾದಂತೆ ಬಳಸಿಕೊಳ್ಳುವ ಸಮಯಸಾಧಕ. ಸಮಯ ಬಂದರೆ ಯಾರನ್ನೂ ಕೊಲ್ಲಲೂ ಹೇಸದವ. ಅವನು ಕೊಲೆ ಮಾಡಿದ್ದಕ್ಕೆ ಸಾಕ್ಷಿಯೂ ಇದೆ. ಅವನ ಎಲ್ಲ ಕಿಡಿಗೇಡಿತನಕ್ಕೂ ಬೆಂಬಲವಾಗಿ ನಿಂತವ ಸುಧೀರ್. (ಪ್ರಮೋದ್ ಶೆಟ್ಟಿ)


ಇಂಥಾದ್ದೇ ಇನ್ನೊಂದು ಪಾತ್ರ ಫಾರೆಸ್ಟ್ ಆಫೀಸರ್. ಅದನ್ನು ನಿರ್ವಹಿಸಿದವರು ವಿಲನ್ ಪಾತ್ರಕ್ಕೆ ತಮ್ಮದೇ ಆದ ವೈಶಿಷ್ಟ್ಯವನ್ನು ತಂದುಕೊಟ್ಟು, ಮೆರೆದು, ಇತರ ಭಾಷಾ ಸಿನಿಮಾದಲ್ಲೂ ಹೆಸರು ಮಾಡಿದ ಕಿಶೋರ್ ಅವರು. ಇವರೇನೂ ಕಡಿಮೆಯಲ್ಲ. ಯಾವ ಅಬ್ಬರ, ಆಡಂಬರವಿಲ್ಲದೆ, ತಮ್ಮ ಸಹಜ ಅಭಿನಯದಿಂದಲೇ ಪ್ರೇಕ್ಷಕರ ಹೃದಯವನ್ನು ಅನಾಯಾಸವಾಗಿ ಗೆಲ್ಲಬಲ್ಲ ಮಹಾ ಪ್ರತಿಭಾನ್ವಿತ ನಟ.

ಈ ಸಿನಿಮಾದಲ್ಲಿ ಇವರದ್ದು ಸರಕಾರಿ ಆಜ್ಞೆಗೆ ನಿಷ್ಠನಾಗಿ ನಡೆದುಕೊಳ್ಳುವ ಫಾರೆಸ್ಟ್ ಅಧಿಕಾರಿಯ ಪಾತ್ರವಾದರೂ ಹೊಟ್ಟೆಯುರಿಯಿಂದ ಧಗಧಗಿಸುವ, ಒಂದು ಬಗೆಯ ಸ್ಯಾಡಿಸ್ಟ್ ರೋಲ್. ತನಗೆ ಸಹಾಯಕ ಅಧಿಕಾರಿಯಾಗಿ ಹೊಸದಾಗಿ ನೇಮಕಗೊಂಡ ಲೀಲಾಗೆ ಕೆಟ್ಟ ಕೆಟ್ಟ ಮಾತುಗಳನ್ನಾಡುವವ. ಒಂದು ಬಗೆಯ ಹಿಂಸಾವಿಹಾರಿ. **“ಇನ್‌ಫ್ಲುಯೆನ್ಸ್‌ನಲ್ಲಿ ಕೆಲಸ ಗಿಟ್ಟಿಸಿದವರಿಗೆ ಏನು ಕೆಲಸ ಗೊತ್ತಿರುತ್ತೆ? ಸಂಬಳ ಸರಕಾರದ್ದು, ಸೇವೆ ಮಾತ್ರ ಶಿವನಿಗೆ ಮತ್ತು ದಣಿಗೆ”** ಎಂದೆಲ್ಲಾ ನಂಜಿನ ಮತ್ತು ಕ್ರೂರ ಮಾತುಗಳನ್ನಾಡುತ್ತಾ, ಅವಳ ಮನನೋಯಿಸುತ್ತಾ, ಧೃತಿಗೆಡಿಸುತ್ತಾ, ವಿಕೃತವಾಗಿ ಆನಂದಪಡುವ, ವಿಕ್ಷಿಪ್ತ ಪಾತ್ರ ಅದು. ಇಂತಹ ದುಷ್ಟ ಅಧಿಕಾರಿಯೂ ಕೊನೆಗೆ ನ್ಯಾಯಕ್ಕೆ ಬದ್ಧನಾಗಿ ನಡೆದುಕೊಳ್ಳುವುದು ಅವನ ಬಗ್ಗೆ ಗೌರವ ಹುಟ್ಟಿಸುತ್ತದೆ.

ಇನ್ನು ಶಿವನ ತಾಯಿಯಾಗಿ ಪಾತ್ರ ನಿರ್ವಹಿಸಿದವರು ಈಗಲೇ ಫೇಸ್‌ಬುಕ್ ಮೂಲಕ “ಏನೀ ಅದ್ಭುತವೇ? ಎಂಥಾ ಅದ್ಭುತವೇ” ಸಾಭಿನಯ ಹಾಡಿನ ಮೂಲಕ ಬೆಳಕಿಗೆ ಬಂದವರು ಮತ್ತು ಖ್ಯಾತ ಭರತ ನಾಟ್ಯ ಕಲಾವಿದೆ ಮಾನಸೀ ಸುಧೀರ್ ಅವರು. ಹಿರಿಯ ನಟಿ ಲಕ್ಷ್ಮೀ ಚಂದ್ರಶೇಖರ್ ಅವರನ್ನು ನೆನಪಿಸುವ ಮತ್ತು ಸ್ವಲ್ಪ ಮಟ್ಟಿಗೆ ಅವರನ್ನೇ ಹೋಲುವ ಇವರು 'ಹಡಬ್ಬೆ ನಾಯಿ', 'ಬೊಜ್ಜ' ಮುಂತಾದ ಬೈಗುಳ ಶಬ್ದಗಳ ಮೂಲಕ ಎಲ್ಲರನ್ನೂ ಡಾಮಿನೆಂಟ್ ಮಾಡುತ್ತಾ, ಅವರಿವರಿಗೆ ಬೆತ್ತದಿಂದ ಹೊಡೆಯುತ್ತಾ, ಗಯ್ಯಾಳಿಯಂತೆ ತೋರುವ ಪಾತ್ರದಲ್ಲಿ ಅದ್ಭುತವಾಗಿ ಅಭಿನಯಿಸಿದ್ದಾರೆ.

ಲೀಲಾಳ ಪಾತ್ರದಲ್ಲಂತೂ ಸಪ್ತಮೀ ಗೌಡ ಅವರು ತಮ್ಮ ಮುಗ್ಧ, ಸ್ನಿಗ್ಧ ಸೌಂದರ್ಯದಿಂದ ಎಲ್ಲರ ಗಮನವನ್ನೂ ಸೆಳೆಯುತ್ತಾರೆ. ಮನುಷ್ಯ ಸ್ವಭಾವದಲ್ಲಿ ಮುಗ್ಧತೆಗೇ ಒಂದು ಸ್ಥಾನವಿದೆ. ಅದು ಅಪೂರ್ವ ಚೆಲುವಿನಿಂದ ಕೂಡಿದ್ದು. ಮುಗ್ಧತನವೆಂದರೆ ಕಪಟವಿಲ್ಲದ್ದು, ನಿಷ್ಕಲ್ಮಷತೆಯಿಂದ ಕೂಡಿದ್ದು, ಸರಳತನ ಎಂದು ಅರ್ಥ. ಅದರ ಚೆಲುವಿಗೆ ಸಾಟಿಯೇ ಇಲ್ಲ. ಅಂತಹ ಚೆಲುವು ಸಪ್ತಮಿ ಗೌಡ ಅವರದ್ದು. ನೋಡಲು ಸ್ವಲ್ಪ ಗಡುಸಾಗಿರುವವರಂತೆ ತೋರಿದರೂ ಅದಾವುದೂ ಇಲ್ಲ ಎಂಬಂತೆ ಅವರ ಮುಖದಲ್ಲಿ ಸದಾ ನಂದಾದೀಪದಂತೆ ಬೆಳಗುವ ಅವರ ಮುಗ್ಧತನ, ಮಾರ್ದವತೆ ಅವರ ಇಡೀ ಪಾತ್ರಕ್ಕೇ ಅಪೂರ್ವ ಶೋಭೆಯನ್ನು ತಂದಿದೆ. ಕೆಲಸಕ್ಕೆ ಸೇರಿದ ಹೊಸದರಲ್ಲೇ ಊರವರಿಗೆ ವಿರುದ್ಧವಾಗಿ ನಡೆದುಕೊಳ್ಳಬೇಕಾದ ವಿಧಿಯ ವಿಪರ್ಯಾಸಕ್ಕೆ ಅವರು ತೋರಿದ ಸಂಯಮದ ಅಭಿನಯ, ಮಾತಿಲ್ಲದೆ, ಮೌನವಾಗಿ ಅಭಿವ್ಯಕ್ತಿಗೊಳಿಸಿದ ಅವರ ಮಾನಸಿಕ ತೊಳಲಾಟ, ಗಡಿಯನ್ನು ಅಳೆಯಬೇಕಾದ ಕರ್ತವ್ಯ ಕಠೋರತೆ, ಫಾರೆಸ್ಟ್ ಅಧಿಕಾರಿಯ ತೇಜೋವಧೆಯ ಮಾತುಗಳನ್ನು ಸಹಿಸಿಕೊಳ್ಳಬೇಕಾದ ಅನಿವಾರ್ಯತೆ. ಇವೇ ಮೊದಲಾದವು ಅವರ ಪಾತ್ರಕ್ಕೆ ಸವಾಲಾಗಿ ಪರಿಣಮಿಸಿದ್ದರೂ ಅದನ್ನವರು ಲೀಲಾಜಾಲವಾಗಿ ಅಭಿನಯಿಸಿ ತೋರಿಸಿದ್ದು ಅವರನ್ನು ಒಳ್ಳೆಯ ನಟಿಯರ ಸಾಲಿನಲ್ಲಿ ನಿಲ್ಲುವಂತೆ ಮಾಡಿದೆ. ಮುಖ್ಯವಾಗಿ ಆ ಪಾತ್ರದ ಸಂಯಮಶೀಲತೆಯನ್ನು ಮತ್ತು ಅದರ ಭಾವಾಂದೋಲನಗಳನ್ನು ಮುಖದ ಭಾವಾಭಿವ್ಯಕ್ತಿಯಲ್ಲೇ ತೋರ್ಪಡಿಸಿದ ಅವರ ಅಭಿನಯ ಎಂದೆಂದೂ ಮರೆಯಲಾಗದ್ದು.

ಶಿವನ ಪಾತ್ರವಾಗಿ ರಿಷಬ್ ಅವರದ್ದು ಒಂದು ರೀತಿಯ ಸ್ವೈರ, ಸ್ವಚ್ಛಂದ, ಜವಾಬ್ದಾರಿ ರಹಿತ ಆದರೆ ಸಾತ್ವಿಕ ಪಾತ್ರ ಲೀಲಾಳ ಸೊಂಟ ಚಿವುಟಿದ್ದು ತಪ್ಪಾಗಿ ಹೋಯಿತು ಎಂದು ಭಾವಿಸುವ ಮುಗ್ಧತನ, ಮರ ಕಡಿದದ್ದು ಅಪರಾಧವಾಯಿತು ಎಂಬ ಅಪರಾಧ ಪ್ರಜ್ಞೆ, ಅದಕ್ಕಾಗಿ ತಾನು ತಪ್ಪೊಪ್ಪಿಕೊಂಡು ಜೈಲಿಗೆ ಹೋಗಿಬಿಡು ತ್ತೇನೆ ಎಂದು ಹೇಳುವ ಅತ್ಯಂತ ಸರಳ, ಮುಗ್ಧ, ಪಾತ್ರ ಅದು. ಅದನ್ನವರು ಅನಾಯಾಸವಾಗಿ ನಿರ್ವಹಿಸಿದ್ದಾರೆ. ಜೈಲಲ್ಲಿರುವಾಗ ತನ್ನ ಅಕ್ಕರೆಯ ಲೀಲಾಳಿಗೆ ಐಸ್ ಕ್ರೀಮ್ ಕೊಡಿಸಿ ಎಂದು ಹೇಳುವ ಮಗುವಿನಂತಹ ನಿಷ್ಕಪಟ ಮನಸ್ಸಿನ ಪಾತ್ರ ಅವರದು. ಆದರೆ ಅದೇ ಫಾರೆಸ್ಟ್ ಅಧಿಕಾರಿಯ ಬಳಿ- ಪರಶಿವಮೂರ್ತಿಯಂತೆ ಭೈರವ ತಾಂಡವವಾಡುವ ಮನಸ್ಸು ಶಿವನದು. **“ಇದು ಅಪ್ಪನವರೆಗೂ ಬಂತು ಅಲ್ಲವಾ? ನೋಡಿಕೊಳ್ಳುತ್ತೇನೆ”** ಎಂದು ಹೇಳುವಾಗಿನ ಶಿವನ ಮಾತು ಬಿರುಸಾಗಿಯೇ ಪರಿಣಾಮಗೊಳ್ಳುತ್ತದೆ. ಅಂದರೆ ಪೌರುಷ, ಮಾರ್ದವತೆ ಎಲ್ಲದರಲ್ಲೂ ರಿಷಭ್ ಶೆಟ್ಟಿ ತಮ್ಮ ಕಲಾಸಾಮರ್ಥ್ಯವನ್ನು ಮೆರೆದಿದ್ದಾರೆ. ಜಗಳದಂತಹ ಸಂದರ್ಭದಲ್ಲೂ ಅವರು ಯಾವ ಅಬ್ಬರವೂ, ಕಿರುಚಾಟವೂ ಇಲ್ಲದೆ ಮಾತಿನ ಬಿರುಸು, ಕಾವು ತರುತ್ತಾ ಅವರೊಬ್ಬ ನಿರಾಡಂಬರ ಶೈಲಿಯ ಅದ್ಭುತ ನಟ ಅನ್ನುವುದನ್ನು ಸಾಬೀತುಪಡಿಸಿದ್ದಾರೆ.



ವಾರಭವಿಷ್ಯ
11.12.2022 ರಿಂದ 17.12.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಶ್ಚಿಕ, ಧನುಸ್ಸು, ಚಂದ್ರ-ಮಿಥುನ, ಕಟಕ, ಸಿಂಹ, ಕನ್ಯಾ, ಕುಜ-ವೃಷಭ, ಬುಧ-ಧನುಸ್ಸು, ಗುರು-ಮೀನ, ಶುಕ್ರ-ಧನುಸ್ಸು, ಶನಿ-ಮಕರ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
'ಸಮಯಕ್ಕಾದವನೇ ನೆಂಟ', ನವಗ್ರಹಗಳ ಗೋಚರ ಅಷ್ಟೊಂದು ಉತ್ತೇಜನಕಾರಿಯಾಗಿಲ್ಲ. ಹಣಕಾಸು ಮುಗ್ಗಟ್ಟುಗಳಿಂದ ಸಾಲ ಮಾಡಬೇಕಾದ ಪರಿಸ್ಥಿತಿ ಬಂದೀತು. ಸಹಾಯ ಯಾವ ಕಡೆಯಿಂದ ಬಂದರೂ ಸ್ವೀಕರಿಸಿ. ಪುಕ್ಕಟೆ ಸಲಹೆಗಳಿಂದ ಏನೂ ಆಗದು. ವಿವೇಚನಾ ಪೂರ್ವಕವಾಗಿ ನಿರ್ಧಾರ ಕೈಗೊಳ್ಳಿ. ಸರ್ಕಾರಿ ನೌಕರರು ವಾಮ ಮಾರ್ಗದ ಹಣಕ್ಕೆ ಆಸೆಪಟ್ಟರೆ ತೊಂದರೆ ಗ್ಯಾರಂಟಿ. ವಾರಾಂತ್ಯಕ್ಕೆ ಗುರುಗಳೊಬ್ಬರ ಸಹಾಯ ದೊರೆಯಲಿದೆ. ಮನೆ ದೇವರ ದರ್ಶನ ಮಾಡಿ. ಶುಭ ಸಂಖ್ಯೆ-8.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಕಾಯುವ ಹಾಗೂ ಕಾದು ಪಡೆಯುವ ವಸ್ತು ಮಧುರ ಅನುಭವ ನೀಡುತ್ತದೆ. ನಿಮ್ಮ ಕ್ರಿಯಾಶೀಲತೆ ನಿಮ್ಮನ್ನು ಉನ್ನತ ಸ್ತರಕ್ಕೆ ಕೊಂಡೊಯ್ಯುವುದು. ಆದರೆ ಕೆಲಸ ಸಣ್ಣದೆಂದು ಅಲಕ್ಷ್ಯ ಮಾಡಬೇಡಿ. ಉತ್ತಮರ ಸಹವಾಸ ಹಾಗೂ ಸಾಧು-ಸಂತರ ಭೇಟಿಯಿಂದ ಮಾನಸಿಕ ದುಗುಡತೆ ನಿವಾರಣೆ ಆಗುವುದು. ನಿಮ್ಮ ರಾಶಿಯಲ್ಲೇ ಸ್ಥಿತನಿರುವ ಕೇತು ಆರೋಗ್ಯಕ್ಕೆ ಧಕ್ಕೆ ಹಾಗೂ ಅಪಘಾತ ಸಂಭವಿಸಬಹುದು. ಶ್ರೀ ಪಾರ್ವತೀ ಸ್ತುತಿ. ಶುಭ ಸಂಖ್ಯೆ-9.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಗುರುಕೃಪೆಯ ಪ್ರಭಾವದಿಂದ ಯತ್ನ ಕಾರ್ಯಗಳು ಸಫಲವಾಗುವುದು. ಹಣಕಾಸು ಪರಿಸ್ಥಿತಿಯಲ್ಲಿ ಸುಧಾರಣೆ ಕಾಣುವುದು. ಪ್ರಯತ್ನಪಟ್ಟರೆ ಬ್ಯಾಂಕ್ ಸಾಲ ದೊರೆಯುವ ಸಾಧ್ಯತೆ. ನ್ಯಾಯಾಲಯ ವ್ಯವಹಾರಗಳು ನಿಮ್ಮ ಪರವಾಗುವುದು. ಮಗನ ನೌಕರಿ ಪ್ರಯತ್ನದಲ್ಲಿ ಹಿನ್ನಡೆ ಉಂಟಾಗುವುದು. ರಾಜಕೀಯ ರಂಗದವರಿಗೆ ತನಿಖಾ ಸಂಸ್ಥೆಗಳಿಂದ ತೊಂದರೆ ಇದೆ. ಸ್ನಾಯು ಸೆಳೆತದಿಂದ ವೈದ್ಯ ಶಾಲೆಗೆ ಭೇಟಿ. ಶ್ರೀ ದೇವೀ ಉಪಾಸನೆ. ಶುಭ ಸಂಖ್ಯೆ- 1

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಮಹತ್ವದ ವೈಯಕ್ತಿಕ ವಿಚಾರಗಳಲ್ಲಿ ಅವಸರ ಮಾಡದೆ ನಿರ್ಧಾರ ಕೈಗೊಳ್ಳಿ. ಧರ್ಮ ಕ್ಷೇತ್ರಗಳ ಭೇಟಿಯಿಂದ ಮನಸ್ಸು ಪ್ರಫುಲ್ಲಗೊಳ್ಳುವುದು. ಗುರುಕೃಪೆಯಿಂದ ನೀವು ಉನ್ನತ ಸ್ಥಾನವನ್ನು ಅಲಂಕರಿಸುವ ಸಾಧ್ಯತೆ ಇದೆ. ಹಲವರಿಗೆ ಮಧುಚಂದ್ರಕ್ಕೆ ತೆರಳುವ ಅವಕಾಶ ಒದಗಿಬರಲಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುವುದು. ರೆಡಿಮೇಡ್ ವಸ್ತ್ರ, ಫ್ಯಾಷನ್ ಡಿಸೈನ್ ವ್ಯಾಪಾರ ಭರಾಟೆಯಿಂದ ಸಾಗುವುದು. ಶ್ರೀ ಲಕ್ಷ್ಮೀನರಸಿಂಹ ದರ್ಶನ. ಶುಭ ಸಂಖ್ಯೆ-5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದಾರಂಭಕ್ಕೆ ಮಿತ್ರರ ಸಮಾಗಮ. ಸ್ನೇಹಕೂಟಗಳು ನಡೆಯುವುವು. ನೂತನ ವಸ್ತ್ರ, ಆಭರಣ ಖರೀದಿಯ ಯೋಗವಿದೆ. ಅಷ್ಟಮ ಶನಿದೇವ ಶಾರೀರಿಕವಾಗಿಯೂ, ಮಾನಸಿಕವಾಗಿಯೂ ಕಾಡಲಿದ್ದಾನೆ. ಮನೆಯಲ್ಲಿ ಪರಸ್ಪರ ಅರಿವಿನ ಕೊರತೆಯಿಂದ ಕಿರಿಕಿರಿಗಳು, ಪಾರ್ಟನರ್ ವ್ಯವಹಾರಗಳು ನಷ್ಟದಲ್ಲಿ ನಡೆಯುವುದು. ಸ್ತ್ರೀಯರು, ಕಳ್ಳ ಕಾಕರಿಂದ ನಿಮ್ಮ ಮಾಂಗಲ್ಯ ಸರ ರಕ್ಷಿಸಿಕೊಳ್ಳಿ. ವಾರಾಂತ್ಯಕ್ಕೆ ಉತ್ಸವಾದಿಗಳಲ್ಲಿ ಭಾಗಿ. ಶ್ರೀವಿಷ್ಣು ಪ್ರಾರ್ಥನೆ. ಶುಭ ಸಂಖ್ಯೆ-2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
'ಉದರ ನಿಮಿತ್ತಂ ಬಹುಕೃತ ವೇಷಂ' ಎನ್ನುವಂಥಹ ವ್ಯಕ್ತಿಗಳಿಂದ ವಂಚನೆಗೆ ಗುರಿಯಾಗುವಿರಿ. ವ್ಯಾಪಾರ ವ್ಯವಹಾರಗಳು ನಿಧಾನಗತಿಯಲ್ಲಿ ಸಾಗಿದರೂ ನಿರೀಕ್ಷಿತ ಹಣ ಕೈ ಸೇರುವುದು. ಕೈಯ್ಯಲ್ಲಿ ಹಣವಿದ್ದಾಗ ಋಣ ಮುಕ್ತರಾಗಲು ಪ್ರಯತ್ನಿಸಿ. ಅಪರಿಚಿತ ವ್ಯಕ್ತಿಗಳೊಡನೆ ಹಣಕಾಸಿನ ವ್ಯವಹಾರ ಮಾಡಿ ಕೈ ಸುಟ್ಟುಕೊಳ್ಳುವಿರಿ. ನಿಧಾನದ ವಾಹನ ಚಾಲನೆ ನಿಮಗೂ ನಿಮ್ಮ ಮನೆಯವರಿಗೂ ಒಳ್ಳೆಯದು. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ಈ ಸಪ್ತಾಹದಲ್ಲಿ ಗುರು-ಚಂದ್ರ ಸಂಚಾರ ಶುಭವಿದ್ದು, ನಿಮ್ಮಿಂದ ನೂತನ ಆವಿಷ್ಕಾರಗಳು ಆಗಲಿವೆ. ಸಮೂಹ ಮಾಧ್ಯಮ ವ್ಯಕ್ತಿಗಳಿಗೆ ಸರ್ಕಾರದ ಪುರಸ್ಕಾರ ದೊರೆಯುವುದು. ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡು ಬರುವುದು. ಮನೆಯಲ್ಲಿ ಮಂಗಳ ಕಾರ್ಯ, ದೇವತಾ ಕಾರ್ಯಗಳು ನಡೆಯುವುದು. ಬಾಳ ಸಂಗಾತಿಯ ಅನ್ವೇಷಣೆ ಸಫಲವಾಗಲಿದೆ. ಅವಕಾಶವಾದಿಗಳು ನಿಮ್ಮನ್ನು ದುರುಪಯೋಗ ಪಡಿಸಿಕೊಳ್ಳಬಹುದು. ಜಾಗೃತರಾಗಿರಿ. ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-6.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದ ಆದಿಗೆ ನಿಮ್ಮ ಕೆಲಸವೆಲ್ಲಾ ಏಕಾಂಗಿ ಹೋರಾಟ ಹಾಗೂ ಅರಣ್ಯರೋಧನ ವೆನಿಸುವುದು. ಯಾವುದನ್ನೂ ದುಡುಕಿ ತೀರ್ಮಾನಿಸಬೇಡಿ. ಹಣ ಹಾಗೂ ಅಮೂಲ್ಯ ವಸ್ತುಗಳನ್ನು ಸೂಕ್ತ ರೀತಿಯಲ್ಲಿ ಭದ್ರಪಡಿಸಿ ಪರಸ್ಥಳಕ್ಕೆ ಹೋಗಿ. ಉದ್ಯೋಗ ಸಂಬಂಧ ಹಿರಿಯ ಅಧಿಕಾರಿಗಳ ಭೇಟಿ ಹಾಗೂ ಸಕಾರಾತ್ಮಕ ಬೆಳವಣಿಗೆ. ರಾಜಕಾರಣಿಗಳಿಗೆ ಸ್ವಂತ ಜನರೇ ವಿರೋಧಿಸುವರು. ಆರೋಗ್ಯ ಅಷ್ಟಕಷ್ಟೆ. ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-3.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
'ಸಂತೃಪ್ತಿಯೇ ಸ್ವರ್ಗ' ಸದ್ಯದ ಕಾಲಕ್ಕೆ ಇದನ್ನು ಪಾಲಿಸಿಕೊಂಡು ಹೋಗಿ. ಹಣ ಕೈಗೆ ಬಂದರೂ ಹೆಚ್ಚು ಕಾಲ ನಿಲ್ಲದು, ಕೆಲವೊಮ್ಮೆ ಅಪವ್ಯಯವಾಗುವ ಸಂಭವವೇ ಹೆಚ್ಚು. ರಾಜಕಾರಣಿಗಳಿಗೆ ಗುಪ್ತ ಶತ್ರುಗಳ ಕಾಟ. ಮನೆ ಮಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಇದರಿಂದ ಮುಂದಾಗಬಹುದಾದ ಅನರ್ಥಗಳು ತಪ್ಪಲಿವೆ. ಸ್ತ್ರೀಯರಿಂದ ಮೋಸ ಹೋಗುವ ಸಾಧ್ಯತೆ ಇರುತ್ತೆ ಜಾಗೃತವಾಗಿರಿ. ಆನ್‌ಲೈನ್ ಫ್ರೆಂಡ್‌ಶಿಪ್ ಮಾರಕವಾಗುವುದು. ಶ್ರೀರವ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಈ ವಾರ ನಿಮ್ಮ ಪ್ರತಿಭೆ, ವಿದ್ವತ್ತುಗಳ ಪ್ರಚಾರಕ್ಕೆ ಬಂದು ನೀವು ಪ್ರವರ್ಧಮಾನಕ್ಕೆ ಬೃಹಸ್ಪತಿ ಎಂಬ ಬೃಹತ್ ಗ್ರಹವೇ ಕಾರಣ. ಹಣಕಾಸು ವಿಚಾರಗಳು ಸಮಯ ಸಮಯಕ್ಕೆ ಒದಗುತ್ತದೆ. ಸಾಲ ತೀರುವಳಿಗೆ ಮನಸ್ಸಾಗುವುದು. ಹೊಸ ಯೋಜನೆಗಳ ಪ್ರಾರಂಭಕ್ಕೆ ಗುರುವಿನ ಕೃಪಾಕಟಾಕ್ಷವಿದೆ. ಮನೆ ಮುಂದೆ ಚಪ್ಪರ ಹಾಕುವ ಸಂದರ್ಭ ಬರುವ ಸಾಧ್ಯತೆ. ಹೊರ ದೇಶಕ್ಕೆ ಪ್ರಯಾಣಗಳು ಸಂಭವಿಸಬಹುದು. ಶ್ರೀ ಮಾರುತಿಗೆ ಕೇಸರಿ ಸೇವೆ. ಶುಭ ಸಂಖ್ಯೆ-2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಪ್ರಾರಂಭಕ್ಕೆ ಹೊಸ ವ್ಯಾಪಾರ ವ್ಯವಹಾರಗಳು ಹುಡುಕಿಕೊಂಡು ಬರಲಿವೆ. ಪುಣ್ಯ ಕ್ಷೇತ್ರಗಳಿಗೆ ತೀರ್ಥ ಯಾತ್ರೆಯನ್ನು ಕೈಗೊಳ್ಳುವಿರಿ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ದೈವಾನುಕೂಲ ಚೆನ್ನಾಗಿದೆ. ಪ್ರಯತ್ನ ಪುರುಷಾಧೀನ ಫಲ ದೈವಾಧೀನು, ನೂತನ ವಸ್ತ್ರಭೂಷಣ, ವಾಹನ ಕೊಳ್ಳುವ ಕನಸು ನನಸಾಗುವುದು. ವಾಹನ ಡ್ರೈವಿಂಗ್ ಮೋಜಿಗಲ್ಲ ಎಂಬ ಅರಿವು ನಿಮಗಿರಲಿ. ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ-7.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಈ ವಾರ ನೀವು 'ಬಡವ ನೀ ಮಡಗಿದಂಗೆ ಇರು' ಎಂಬಂತೆ ಸಾಗಿದಲ್ಲಿ ಉತ್ತಮ. ನಿಮ್ಮ ಪೂರ್ವ ಯೋಜಿತ ಕೆಲಸಗಳು ಮುಂದೆ ಸಾಗದು. ನಿಮ್ಮ ಹಳೆಯ ಪ್ರಾಮಿಸ್‌ಗಳು ಕಾರ್ಯರೂಪಕ್ಕೆ ಬರದು. ಧೃತಿಗೆಡುವ ಅಗತ್ಯವಿಲ್ಲ. ಎಲ್ಲವೂ ಚಲಿಸುವ ಮೋಡಗಳಂತೆ ಸ್ಥಿರವಲ್ಲ. ವಾರಾಂತ್ಯಕ್ಕೆ ನಿಮ್ಮ ಹಿತೈಷಿಗಳ ಸಹಾಯ ಸಹಕಾರಗಳು ದೊರೆತು ಮುಖ್ಯ ಸಮಸ್ಯೆಯೊಂದು ಪರಿಹಾರವಾಗುವುದು. ಜೀವನ ಚೆಸ್ ಆಟ ಇದ್ದಂತೆ. ಬರೀ ಮುಂದೆಯೇ ಅಲ್ಲ, ಹಿಂದಕ್ಕೂ ಚಲಿಸಬೇಕಾಗುತ್ತದೆ. ಶ್ರೀ ದತ್ತಾತ್ರೇಯ ಉಪಾಸನೆ. ಶುಭ ಸಂಖ್ಯೆ-4.

ಕೊಡಗು ಕಾಫಿ ಮೇಳಕ್ಕೆ ಚಾಲನೆ



ಮಡಿಕೇರಿ, ಡಿ.10– ಗ್ರೇಟರ್ ರಾಜಸೀಟು ಉದ್ಯಾನವನದಲ್ಲಿ ಶನಿವಾರ 'ಕೊಡಗು ಕಾಫಿ ಮೇಳ'ಕ್ಕೆ ಗಣ್ಯರು ಚಾಲನೆ ನೀಡಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಕೊಡಗು ಕಾಫಿ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿ ಕೊಡಗು ಕಾಫಿ ಮೇಳಕ್ಕೆ ಸಾರ್ವಜನಿಕರು ಮತ್ತು ಪ್ರವಾಸಿಗರಿಂದ ಉತ್ತಮ ಸ್ಪಂದನೆ ದೊರೆತಿದೆ. ಕಾಫಿ ಬೆಳೆಯ ಮಹತ್ವವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವ ನಿಟ್ಟಿನಲ್ಲಿ ಗ್ರೇಟರ್ ರಾಜಸೀಟು ಉದ್ಯಾನವನದಲ್ಲಿ 'ಕೊಡಗು ಕಾಫಿ ಮೇಳ' ಹಮ್ಮಿಕೊಳ್ಳಲಾಗಿದೆ ಎಂದರು.

ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಮಾತನಾಡಿ, ಕೊಡಗು ಜಿಲ್ಲೆಯಲ್ಲಿನ ಕೃಷಿಕರು ಕಾಫಿ ಮತ್ತು ಕರಿಮೆಣಸು ಕೃಷಿಯಿಂದ ಬದುಕು ನಡೆಸುತ್ತಿದ್ದಾರೆ. ಆ ನಿಟ್ಟಿನಲ್ಲಿ ಕಾಫಿಯನ್ನು ಸ್ಥಳೀಯವಾಗಿ ಹೆಚ್ಚು ಉಪಯೋಗಿಸುವುದರಿಂದ ಮಾರುಕಟ್ಟೆಯಲ್ಲಿಯೂ ಒಳ್ಳೆಯ ದರ ಸಿಗುತ್ತದೆ ಎಂದು ಅವರು ಹೇಳಿದರು.

ಕಾಫಿ ಬೆಳೆಯಿಂದ ಕಾಫಿ, ಜೊತೆಗೆ ಚಾಕೋಲೇಟ್ ಹಾಗೂ ಕಾಫಿ ವೈನ್ ಹೀಗೆ ಹಲವು ಉತ್ಪನ್ನಗಳಿಗೆ ಕಾಫಿಯನ್ನು ಬಳಸುತ್ತಿರುವುದು ಶ್ಲಾಘನೀಯ ಎಂದು ಅವರು ಹೇಳಿದರು.

ಜಿಲ್ಲಾ ಪಂಚಾಯಿತಿ ಸಿಇಒ ಡಾ.ಎಸ್. ಆಕಾಶ್ ಅವರು ಕೊಡಗು ಕಾಫಿ ಮೇಳವು ಆಕರ್ಷಣೀಯವಾಗಿದ್ದು, ಪ್ರವಾಸಿಗರನ್ನು ಸೆಳೆಯುತ್ತದೆ. 18 ವರ್ಷ ಮೇಲ್ಪಟ್ಟವರೆಲ್ಲರೂ ಮತದಾನ ಮಾಡುವಂತಾಗಲು ಎಲ್ಲರೂ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಬೇಕು. ಯಾರೂ ಸಹ ಮತದಾನದಿಂದ ವಂಚಿತರಾಗಬಾರದು ಎಂದು ಕೋರಿದರು.

ಕಾಫಿ ಮಂಡಳಿ ಸದಸ್ಯ ತಳೂರು ಕಿಶೋರ್ ಕುಮಾರ್ ಮಾತನಾಡಿ, ಕೊಡಗು ಕಾಫಿ ತವರೂರಾಗಿದೆ. ಕಾಫಿ ಜೊತೆಗೆ ಕರಿಮೆಣಸು, ಗೇರು, ಕಿತ್ತಳೆ ಹೀಗೆ ಹಲವು ಉಪ ಉತ್ಪನ್ನಗಳನ್ನು ಬೆಳೆಯಲಾಗುತ್ತದೆ. ಕಾಫಿ ಸೇರಿದಂತೆ ಉಪ ಉತ್ಪನ್ನಗಳಿಗೆ ಸರ್ಕಾರದಿಂದ ಸಹಾಯಧನ ದೊರೆತಿದ್ದು, ಅದನ್ನು ಬಳಸಿಕೊಳ್ಳಬೇಕು ಎಂದರು.

ಕಾಫಿ ಮಂಡಳಿ ಮಾಜಿ ಸದಸ್ಯರಾದ ಸಣ್ಣುವಂಡ ಕಾವೇರಪ್ಪ, ಮೋಹನದಾಸ್, ಕಾಫಿ ಮಂಡಳಿ ಉಪ ನಿರ್ದೇಶಕರಾದ ಚಂದ್ರಶೇಖರ್, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಪ್ರಮೋದ್, ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ಇತರರು ಇದ್ದರು.



ವಿರಾಜಪೇಟೆಯ ಚೈತನ್ಯ ಮಠಪುರ ಶ್ರೀ ಮುತ್ತಪ್ಪ ದೇವಸ್ಥಾನದ ಅಧ್ಯಕ್ಷ, ಓಣಂ ಆಚರಣೆ ಸಮಿತಿಯ ಸ್ಥಾಪಕ ಅಧ್ಯಕ್ಷ ಇ.ಸಿ.ಜೀವನ್ ಅವರ ಪ್ರಥಮ ವರ್ಷದ ಪುಣ್ಯತಿಥಿಯ ಅಂಗವಾಗಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು-ಹಂಪಲು ವಿತರಿಸಲಾಯಿತು. ಸಮಿತಿ ಅಧ್ಯಕ್ಷ ಪಿ.ಜಿ.ಸುಮೇಶ್, ಉಪಾಧ್ಯಕ್ಷ ಸಿ.ಆರ್.ಜೀವನ್, ಕಾರ್ಯದರ್ಶಿ ಸಿ.ಆರ್. ಬಾಬು, ರಂಜು, ಪದ್ಮನಾಭ ಉಪೇಂದ್ರ ಡಾ.ಜೆ.ಶ್ರೀನಿವಾಸ್ ಇನ್ನಿತರರನ್ನು ಕಾಣಬಹುದು.





ಜನಮನ ಸೆಳೆದ ಜನಪರ ಉತ್ಸವ

ಕಲೆ-ಸಂಸ್ಕೃತಿ ಪ್ರೋತ್ಸಾಹಿಸಿ: ಗ್ರಾಪಂ ಅಧ್ಯಕ್ಷೆ ನಂದಿನಿ

ಕುಶಾಲನಗರ, ಡಿ.10– ಕಲೆ ಮತ್ತು ಸಂಸ್ಕೃತಿ ಪ್ರತಿಯೊಬ್ಬರಿಗೂ ಅರ್ಥವಾಗುವ ಮಾಧ್ಯಮವಾಗಿದ್ದು, ಆ ನಿಟ್ಟಿನಲ್ಲಿ ಹಿಂದಿನಿಂದಲೂ ಉಳಿಸಿಕೊಂಡು ಬಂದಿರುವ ಕಲಾಪ್ರಕಾರಗಳಿಗೆ ಮತ್ತಷ್ಟು ಪ್ರೋತ್ಸಾಹ ದೊರೆಯುವಂತಾಗಬೇಕು ಎಂದು ಕುಶಾಲನಗರ ತಾಲೂಕು ಗುಡ್ಡೆಹೊಸೂರು ಗ್ರಾಪಂ ಅಧ್ಯಕ್ಷೆ ಎಸ್.ಎಸ್.ನಂದಿನಿ ತಿಳಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಮಾಜ ಕಲ್ಯಾಣ ಇಲಾಖೆ ಸಹಕಾರದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಕುಶಾಲನಗರ ಬಳಿಯ ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಭಾಂಗಣದಲ್ಲಿ ಶನಿವಾರ ನಡೆದ 'ಜನಪರ ಉತ್ಸವ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೊಡವ ವಾದ್ಯ, ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ನಂದಿಧ್ವಜ, ಹುಲಿವೇಷ, ಗಾರುಡಿಗೊಂಬೆ, ಭರತನಾಟ್ಯ, ಸುಗಮ ಸಂಗೀತ ಹೀಗೆ ಹಲವು ಜಾನಪದ ಕಲಾ ಪ್ರಕಾರಗಳು ಇಂದಿಗೂ ಸಹ ಜನಮನ ಸೆಳೆಯುತ್ತವೆ. ಆದ್ದರಿಂದ ಇಂತಹ ಕಲೆಗಳನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್ ಮಾತನಾಡಿ, ಕಲೆಗಳನ್ನು ಗೌರವಿಸಬೇಕು. ನಾಡಿನ ಕಲೆ, ಸಂಸ್ಕೃತಿಯನ್ನು ಅನಾವರಣಗೊಳಿಸಿ ಪ್ರೋತ್ಸಾಹಿಸುವಲ್ಲಿ ಸರ್ಕಾರ ಮುಂದಾಗಿದೆ. ಆ ನಿಟ್ಟಿನಲ್ಲಿ ಕಲಾ ಪ್ರಕಾರಗಳನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಭಾಗಮಂಡಲ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಲೋಕೇಶ್, ಕಲಾವಿದರಾದ ರವಿಶಂಕರ್, ಸೋಮವಾರಪೇಟೆಯ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ ಪ್ರಾಂಶುಪಾಲ ಚಂದ್ರಶೇಖರ್ ರೆಡ್ಡಿ, ಕೊಡಗು ಜಿಲ್ಲಾ ವಿದ್ಯಾಸಾಗರ ಕಲಾ ವೇದಿಕೆಯ ಈ.ರಾಜು, ವೆಂಕಟೇಶ್, ಉಪನ್ಯಾಸಕರು, ಶಿಕ್ಷಕರು, ಕಲಾವಿದರು ಇತರರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಚಿನ್ನಸ್ವಾಮಿ ಸ್ವಾಗತಿಸಿದರು. ಮಣಜೂರು ಮಂಜುನಾಥ್ ನಿರೂಪಿಸಿದರು. ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿಯರು ನಾಡಗೀತೆ ಹಾಡಿದರು. ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಂಗೀತ ವಿಭಾಗದ ಶಿಕ್ಷಕರಾದ ಪುಟ್ಟರಾಜು ಪ್ರಾರ್ಥಿಸಿದರು. ಬಸವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲರಾದ ಶ್ರೀದೇವಿ ವಂದಿಸಿದರು. ಹಾಗೆಯೇ ಸಭಾ ಕಾರ್ಯಕ್ರಮದಲ್ಲಿ ಕಂಸಾಳೆ, ಡೊಳ್ಳು ಕುಣಿತ, ಭರತನಾಟ್ಯ, ಸುಗಮಸಂಗೀತ, ಕೊಡವ ವಾದ್ಯ, ನಗಾರಿ ಕುಣಿತ, ಹುಲಿ ವೇಷ, ಪೂಜಾ ಕುಣಿತ, ಗಾರುಡಿಗೊಂಬೆ, ಭರತನಾಟ್ಯ ಹೀಗೆ ಹಲವು ತಂಡಗಳು ನೃತ್ಯ ಪ್ರದರ್ಶನ ಮಾಡಿ ರಂಜಿಸಿದರು.

ಜನಮನ ಸೆಳೆದ ಮೆರವಣಿಗೆ

ಬಸವನಹಳ್ಳಿ ಮುಖ್ಯ ರಸ್ತೆಯಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಭಾಂಗಣದವರೆಗೆ ನಡೆದ ಜನಪರ ಉತ್ಸವದ ಮೆರವಣಿಗೆ ಜನಮನ ಸೆಳೆಯಿತು.

ಮೆರವಣಿಗೆಯಲ್ಲಿ ಅಮ್ಮತ್ತಿಯ ಶ್ರೀನಿವಾಸ್ ಅವರ ಕೊಡವ ವಾದ್ಯ ತಂಡ, ಮೊಣ್ಣಂಗೇರಿಯ ಮಾಧವ ಅವರ ತಾಳಮದ್ದಳೆ ತಂಡ, ಅಭಿಷೇಕ್ ತಂಡದಿಂದ ಡೊಳ್ಳು ಕುಣಿತ, ಹರಿಪ್ರಸಾದ್ ತಂಡದವರಿಂದ ಪೂಜಾಕುಣಿತ, ಮಧು ತಂಡದಿಂದ ನಂದಿ ಧ್ವಜ, ಕೆಂಪರಾಜು ತಂಡದವರಿಂದ ಹುಲಿ ವೇಷ, ದೊಡ್ಡಕರಿಯಯ್ಯ ತಂಡದವರಿಂದ ಗಾರುಡಿಗೊಂಬೆ, ರಾಮು ಮತ್ತು ತಂಡದವರಿಂದ ಚಿಟ್ಟಿಮೇಳ, ಆಂಜನೇಯ ತಂಡದಿಂದ ಸೋಮನಕುಣಿತ, ನಿವೇದಿತ ತಂಡದಿಂದ ನಗಾರಿ ನೃತ್ಯ, ಪ್ರಶಾಂತ್ ತಂಡದವರಿಂದ ಪಠ ಕುಣಿತ, ಸುನಿತ ಮತ್ತು ತಂಡದವರಿಂದ ಭರತನಾಟ್ಯ, ರವಿಶಂಕರ್ ಮತ್ತು ವೆಂಕಟೇಶ್ ತಂಡದವರಿಂದ ಸುಗಮ ಸಂಗೀತ, ಕಂಸಾಳೆ ತಂಡದವರು, ಕೊಡಗು ಜಿಲ್ಲಾ ವಿದ್ಯಾಸಾಗರ ಕಲಾವೇದಿಕೆಯ ಈ.ರಾಜು ತಂಡದವರಿಂದ ಗೀತಗಾಯನ ಹೀಗೆ ಹಲವು ತಂಡದವರು ಗಮನ ಸೆಳೆದರು.

ವಿದ್ಯಾರ್ಥಿಗಳು ಪುಸ್ತಕ ಓದುವ ಅಭ್ಯಾಸ ರೂಢಿಸಿಕೊಳ್ಳಿ

ಮೈಸೂರು ಜಿಪಂ ಸಿಇಓ ಪೂರ್ಣಿಮಾ ಸಲಹೆ

ಮಂಡ್ಯ, ಡಿ.10– ವಿದ್ಯಾರ್ಥಿಗಳು ಪಠ್ಯ ಪುಸ್ತಕದೊಂದಿಗೆ ಅಗತ್ಯ ಪುಸ್ತಕ ಓದುವ ಅಭ್ಯಾಸ ರೂಢಿಸಿಕೊಳ್ಳಬೇಕಿದೆ ಎಂದು ಮೈಸೂರು ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ ಸಲಹೆ ನೀಡಿದರು.

ನಗರದ ಮಾಂಡವ್ಯ ಕಾಲೇಜಿನಲ್ಲಿ ಅದಮ್ಯ ರಂಗ ಶಾಲೆ ಮೈಸೂರು ಹಾಗೂ ಎಸ್‌ಬಿ ಶಿಕ್ಷಣ ಸಂಸ್ಥೆ ಆಯೋಜಿಸಿದ್ದ ಕಥೆಗಾರ ಡಾ.ಬೆಸಗರಹಳ್ಳಿ ರಾಮಣ್ಣ ಸ್ಮರಣಾರ್ಥ ಪಿಯುಸಿ ಪಠ್ಯ ಆಧಾರಿತ ನಾಟಕ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದೆ ನಾವು ಓದುವಾಗ ಯಾವುದೇ ಟಿವಿ, ಮೊಬೈಲ್, ಕಂಪ್ಯೂಟರ್ ಇರಲಿಲ್ಲ. ನನ್ನ ತಂದೆ ಡಾ.ಬೆಸಗರಹಳ್ಳಿ ರಾಮಣ್ಣ ಅವರು, ವೃತ್ತಿಯಲ್ಲಿ ವೈದ್ಯರು, ಪ್ರವೃತ್ತಿಯಲ್ಲಿ ಸಾಹಿತಿಯಾಗಿದ್ದರು. ಹೊರಗಡೆ ಹೋದಾಗೆಲ್ಲ ಪುಸ್ತಕಗಳನ್ನು ತಂದು ಕೊಡುತ್ತಿದ್ದರು. ಇವತ್ತು ಆ ಪುಸ್ತಕಗಳೇ ನಮ್ಮನ್ನು ಉನ್ನತ ಮಟ್ಟಕ್ಕೆ ಕರೆತಂದಿದೆ ಎಂದರು.



ನಾವು ಯಾವುದೇ ಶಾಲಾ-ಕಾಲೇಜಿಗೆ ಹೋದರೂ, ವೇದಿಕೆಗಳಲ್ಲಿ ಮಾತನಾಡಿದರೂ ವಿದ್ಯಾರ್ಥಿಗಳು ಮತ್ತು ನಾಗರಿಕರಲ್ಲಿ ಕೇಳಿಕೊಳ್ಳುವುದು ಏನೆಂದರೆ ನಿಮ್ಮ ಭವಿಷ್ಯವನ್ನು ವಿದ್ಯೆ ಬದಲಾವಣೆ ಮಾಡುತ್ತದೆ. ಓದಿ ವಿದ್ಯಾವಂತರಾಗಿ ಕೆಲಸ ಮಾಡಿದರಷ್ಟೇ ಅಲ್ಲ. ಒಬ್ಬ ಸಂಪೂರ್ಣ ಮಾನವನನ್ನಾಗಿ ರೂಪಿಸುವ ಪುಸ್ತಕ ಓದುವುದು ಅತ್ಯವಶ್ಯಕ ಎಂದು ಸಲಹೆ ನೀಡಿದರು.

ನಮ್ಮ ತಂದೆ ಸಾಹಿತಿ ಡಾ.ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳಾದ ಪ್ರಜಾಪ್ರಭುತ್ವದ 3 ಮತಗಳು, ಗಾಂಧಿ, ಧರ್ಮ ಹೀಗೆ 4 ಕಥೆಗಳನ್ನು ನಾಟಕ ರೂಪದಲ್ಲಿ ಪ್ರದರ್ಶನ ಮಾಡಲಾಗುತ್ತಿದೆ. ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ಪ್ರದರ್ಶನ ಮಾಡಲಾಗಿದೆ. ಮಂಡ್ಯದಲ್ಲೂ ಮುಂದಿನ ದಿಗಳಲ್ಲಿ ಮಾಡುತ್ತೇವೆ ಎಂದರು.

ಎಸ್‌ಬಿ ಶಿಕ್ಷಣ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಮೀರಾ ಶಿವಲಿಂಗಯ್ಯ ಮಾತನಾಡಿ, ಡಾ.ಬೆಸಗರಹಳ್ಳಿ ರಾಮಣ್ಣ ಅವರನ್ನು ನಾವು ನೋಡಿದ್ದೇವೆ. ತುಂಬಾ ಜನ ಅವರನ್ನು ಮೆಚ್ಚಿಕೊಳ್ಳುತ್ತಿದ್ದರು. ಆದರ್ಶರಾಗಿದ್ದರು. ಅವರು ಕನ್ನಡಿ ಇದ್ದ ಹಾಗೆ. ಅವರನ್ನು ನೋಡಿ ಎಷ್ಟೋ ಜನ ತಮ್ಮ ಜೀವನವನ್ನು ಸರಿ ಮಾಡಿಕೊಂಡಿದ್ದರು. ಶ್ರೇಷ್ಠ ವ್ಯಕ್ತಿತ್ವ ಅವರದ್ದಾಗಿದೆ ಎಂದು ಸ್ಮರಿಸಿದರು.

ಇದೇ ವೇಳೆ ಕಥೆಗಾರ ಡಾ.ಬೆಸಗರಹಳ್ಳಿ ರಾಮಣ್ಣ ವಿರಚಿತ ಗಾಂಧಿ ಕಥೆಯನ್ನು ಪಿಯುಸಿ ಪಠ್ಯಾಧಾರಿತ ನಾಟಕವನ್ನಾಗಿ ಪ್ರಯೋಗ ಮಾಡಿರುವ ನಾಟಕ ಪ್ರದರ್ಶಿಸಲಾಯಿತು.

ವೇದಿಕೆಯಲ್ಲಿ ಎಸ್‌ಬಿ ಶಿಕ್ಷಣ ಸಂಸ್ಥೆ ಶೈಕ್ಷಣಿಕ ಪಾಲುದಾರ ಶ್ರೀನಿವಾಸ್, ಉಪನ್ಯಾಸಕ ಮಹೇಶ್, ಸಾಹಿತಿ ಸತೀಶ್ ಜವರೇಗೌಡ, ರಂಗಭೂಮಿ ನಿರ್ದೇಶಕ ಮಂಡ್ಯ ಚಂದ್ರು, ರಂಗಸ್ವಾಮಿ, ಭೂಮಿ ಚಂದ್ರು ಮತ್ತಿತರರಿದ್ದರು.

ಅರ್ಜಿ ಆಹ್ವಾನ

ಮಂಡ್ಯ,ಡಿ.10– ಜಿಎಡಿಜಿಟಲ್ ವೆಬ್ ವಲ್ಡ್ ಪ್ರೈಲಿ. ಬೆಂಗಳೂರು ಸಂಸ್ಥೆ ಮೂಲಕ ಕರ್ನಾಟಕ ಸರ್ಕಾರದ ಸಂಜೀವಿನಿ- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ ಅನುಷ್ಠಾನಗೊಳಿಸಲು ಜಿಪಂನ ಜಿಲ್ಲಾ ಮತ್ತು ತಾಪಂನ ತಾಲೂಕು ಅಭಿಯಾನ ನಿರ್ವಹಣಾ ಘಟಕಗಳಲ್ಲಿ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜ.9 ಕೊನೆ ದಿನ. ಹೆಚ್ಚಿನ ಮಾಹಿತಿಗೆ ಮೊ.ನಂ.: 8884398469 ಸಂಪರ್ಕಿಸಿ.

ಎಸ್‌ಟಿಜಿಯಲ್ಲಿ ಅದ್ದೂರಿ ಶಾಲಾ ವಾರ್ಷಿಕೋತ್ಸವ



ಚಿನಕುರಳಿ, ಡಿ.10– ಗ್ರಾಮದ ಎಸ್‌ಟಿಜಿ ಪಬ್ಲಿಕ್ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಅದ್ದೂರಿಯಾಗಿ ನಡೆಯಿತು.

ಕಾರ್ಯಕ್ರಮಕ್ಕೆ ಸಂಸ್ಥೆ ಅಧ್ಯಕ್ಷರೂ ಆದ ಶಾಸಕ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು. ನಂತರ ಶಾಲೆಯ ಮಕ್ಕಳಿಂದ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಈ ವೇಳೆ ಮಕ್ಕಳು ಡಾ.ಪುನೀತ್ ರಾಜ್ ಕುಮಾರ್ ಅಭಿನಯದ ಚಿತ್ರದ ಹಾಡಿಗೆ ಮಾಡಿದ ನೃತ್ಯ ಎಲ್ಲರ ಗಮನ ಸೆಳೆಯಿತು. ವೇದಿಕೆ ಮೇಲೆ ಮಕ್ಕಳು ಪುನೀತ್ ಹಾಡಿಗೆ ನೃತ್ಯ ಮಾಡುತ್ತಿದ್ದರೆ ನೆರೆದಿದ್ದವರು ಪುನೀತ್ ಭಾವಚಿತ್ರ ಪ್ರದರ್ಶಿಸಿದರು. ಈ ವೇಳೆ ಮಕ್ಕಳ ನೃತ್ಯ ವೈಭವ ಕಂಡ ಪೋಷಕರು, ಪ್ರೇಕ್ಷಕರು ಚಪ್ಪಾಳೆ, ಶಿಳ್ಳೆ ಹೊಡೆದು ಸಂಭ್ರಮಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಗ್ರಾಮೀಣ ಮಕ್ಕಳಿಗೂ ನಗರ ಪ್ರದೇಶದ ಮಕ್ಕಳಿಗೆ ಸಿಗುವ ಗುಣಮಟ್ಟದ ಶಿಕ್ಷಣ ಸಿಗಬೇಕೆಂಬ ಉದ್ದೇಶದಿಂದ ಚಿನಕುರಳಿಯಲ್ಲಿ ನಮ್ಮ ತಂದೆ ತಾಯಿ ಹೆಸರಿನಲ್ಲಿ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಆರಂಭಿಸಿ ಮಕ್ಕಳಿಗೆ ಎಲ್ಲಾ ರೀತಿ ಸೌಲಭ್ಯ ಒದಗಿಸಿಕೊಡಲಾಗಿದೆ. ಪ್ರತಿ ಮಕ್ಕಳಲ್ಲೂ ಒಂದಲ್ಲ ಒಂದು ಪ್ರತಿಭೆ ಇರುತ್ತದೆ. ಅದನ್ನು ಹೊರಹಾಕಲು ಇಂತಹ ಶಾಲಾ ವಾರ್ಷಿಕೋತ್ಸವಗಳು ನೆರವಾಗಲಿವೆ ಎಂದರು.

ಮೈಸೂರು ವಿವಿ ಕುಲಸಚಿವೆ ವಿ.ಆರ್. ಶೈಲಜಾ ಮಾತನಾಡಿ, ಮಕ್ಕಳಲ್ಲಿ ಜ್ಞಾನದಾಹ ಹೆಚ್ಚಾಗಬೇಕು. ಪರಿಶ್ರಮದಿಂದ ಎಲ್ಲಾ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಬೇಕು. ಆ ಮೂಲಕ ಜ್ಞಾನಾರ್ಜನೆ ಹೆಚ್ಚಿಸಿಕೊಳ್ಳಬೇಕು. ಮಕ್ಕಳ ವ್ಯಕ್ತಿತ್ವ ವಿಕಸನಗೊಂಡು ಸರ್ವತೋಮುಖ ಅಭಿವೃದ್ಧಿಯಾಗಬೇಕು ಎಂದು ಸಲಹೆ ನೀಡಿದರು.

ಪುಟ್ಟರಾಜು ಅವರು ಗ್ರಾಮೀಣ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಎಸ್‌ಟಿಜಿ ಎಂಬ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಆರಂಭಿಸಿ ಗ್ರಾಮೀಣ ಮಕ್ಕಳ ಭವಿಷ್ಯ ರೂಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಬಣ್ಣಿಸಿದರು.

ಇದೇ ವೇಳೆ ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ ಅವರನ್ನು ಎಸ್‌ಟಿಜಿ ಶಿಕ್ಷಣ ಸಂಸ್ಥೆಯಿಂದ ಅಭಿನಂದಿಸಲಾಯಿತು. ಈ ಸಂದರ್ಭ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು, ತನುಶ್ರೀ, ಜಿಪಂ ಮಾಜಿ ಸದಸ್ಯರಾದ ನಾಗಮ್ಮ ಪುಟ್ಟರಾಜು, ಸಿ.ಅಶೋಕ್, ಗ್ರಾಪಂ ಸದಸ್ಯ ಸಿ.ಶಿವಕುಮಾರ್, ಎಸ್‌ಟಿಜಿ ಸಂಸ್ಥೆ ಕಾರ್ಯದರ್ಶಿ ಸಿ.ಹರೀಶ್, ಪ್ರಾಂಶುಪಾಲೆ ಮಾಚಮ್ಮ, ನಿವೇದಿತ ನಾಗೇಶ್ ಸೇರಿದಂತೆ ಹಲವರಿದ್ದರು.

ಹಿಂದೂ ಕಾರ್ಯಕರ್ತನಿಗೆ ಬೆದರಿಕೆ ಹಾಕಿದ

ಪೊಲೀಸ್ ಪೇದೆ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಅಹೋರಾತ್ರಿ ಧರಣಿ

- ಎಸ್ಪಿ ಯತೀಶ್ ಭರವಸೆಗೆ ಕಿವಿಗೊಡದ ಪ್ರತಿಭಟನಾಕಾರರು
- ಜಾಮಿಯಾ ಮಸೀದಿಗೂ ಮುತ್ತಿಗೆ ಯತ್ನ



ಶ್ರೀರಂಗಪಟ್ಟಣ, ಡಿ.10– ಸಂಕೀರ್ತನಾ ಯಾತ್ರೆ ವೇಳೆ ಕಾನೂನು ಉಲ್ಲಂಘನೆ ಮಾಡಿದ್ದ ಆರೋಪದಡಿ ಬಂಧಿತ ಹಿಂದೂ ಯುವಕನಿಗೆ ಬೆದರಿಕೆ ಹಾಕಿದ ಪೊಲೀಸ್ ಸಿಬ್ಬಂದಿ ಅಮಾನತುಗೊಳಿಸಬೇಕು ಎಂದು ಆಗ್ರಹಿಸಿ ಹಿಂದೂಪರ ಸಂಘಟನೆಗಳು ಪಟ್ಟಣದ ಜಾಮಿಯಾ ಮಸೀದಿಗೆ ಮುತ್ತಿಗೆ ಹಾಕಲು ಯತ್ನಿಸಿದ ಘಟನೆ ನಡೆಯಿತು.

ಪಾಂಡವಪುರ ತಾಲೂಕಿನ 17 ವರ್ಷದ ಯುವಕನನ್ನು ಪೊಲೀಸರ ತಂಡ ಶುಕ್ರವಾರ ಮಧ್ಯ ರಾತ್ರಿ ಬಂಧಿಸಿದ್ದು, ಆತನಿಗೆ ಪೊಲೀಸರೇ ಬೆದರಿಕೆ ಹಾಕಿರುವುದಾಗಿ ಆರೋಪಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಶನಿವಾರ ಬೆಳಗ್ಗಿನಿಂದ ಅನಿರ್ದಿಷ್ಟಾವಧಿವರೆಗೆ ಪಟ್ಟಣದ ಟೌನ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಸಂಜೆ ವೇಳೆಗೆ ಸ್ಥಳಕ್ಕಾಗಮಿಸಿ, ಪ್ರತಿಭಟನೆ ಕೈ ಬಿಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಮನವಿ ಮಾಡಿದರು. ಆದರೆ ಪೊಲೀಸ್ ಪೇದೆ ವಿರುದ್ಧ ಕ್ರಮ ಕೈಗೊಳ್ಳದೇ ಪ್ರತಿಭಟನೆ ಕೈ ಬಿಡಲು ಒಪ್ಪದ ಪ್ರತಿಭಟನಾಕಾರರು, ಟೌನ್ ಪೊಲೀಸ್ ಠಾಣೆಯಿಂದ ಹೊರ ಬಂದು ಜಾಮಿಯಾ ಮಸೀದಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಮುಖ್ಯ ರಸ್ತೆಯಲ್ಲಿನ ಮೂಡಲ ಆಂಜನೇಯಸ್ವಾಮಿ ದೇವಾಲಯದ ಬಳಿ ಪೊಲೀಸರು ಇವರನ್ನು ತಡೆಯಲು ಯತ್ನಿಸಿದರಾದರೂ ಪೊಲೀಸರ ತಡೆ ಭೇದಿಸಿ, ಮುಂದೆ ನುಗ್ಗಿದ ಪ್ರತಿಭಟನಾಕಾರರು ಜಾಮಿಯಾ ಮಸೀದಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಬ್ಯಾರಿಕೇಡ್ ಹಾಕಿ, ಭಾರೀ ಬಂದೋಬಸ್ತ್ ಮೂಲಕ ಮಸೀದಿಗೆ ಮುತ್ತಿಗೆ ಹಾಕದಂತೆ ತಡೆದರು. ಈ ವೇಳೆ ಪೊಲೀಸರೊಂದಿಗೆ ಕೆಲ ಸಮಯ ಮಾತಿನ ಚಕಮಕಿಯೂ ನಡೆಯಿತು.

2 ದಿನಗಳ ಕಾಲ ಕಾಲಾವಕಾಶ ನೀಡಿ, ತಪ್ಪಿತಸ್ಥ ಪೊಲೀಸ್ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಸ್‌ಪಿ ಯತೀಶ್ ಭರವಸೆ ನೀಡಿದರೂ, ಕಿವಿಗೊಡದ ಪ್ರತಿಭಟನಾಕಾರರು ನೀವು ಕ್ರಮ ಕೈಗೊಳ್ಳುವವರೆಗೂ ನಾವು ಈ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದು ಅಹೋರಾತ್ರಿ ಮಳೆಯನ್ನು ಲೆಕ್ಕಿಸದೇ ಪ್ರತಿಭಟನೆ ಮುಂದುವರಿಸಿದ್ದಾರೆ.

ಅರ್ಜಿ ಆಹ್ವಾನ

ಕೆ.ಆರ್.ಪೇಟೆ, ಡಿ.10– ತಾಲೂಕು ಬ್ರಾಹ್ಮಣ ಮಹಾಸಭಾದಿಂದ ಡಿ.25ರಂದು ಪಟ್ಟಣದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಶೇ.70ಕ್ಕೂ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು ಡಿ.18ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಭತ್ತ ಕಟಾವು ಯಂತ್ರಕ್ಕೆ ಬಾಡಿಗೆ ದರ ನಿಗದಿ

ಜಿಲ್ಲಾಧಿಕಾರಿ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಧಾರ

ಚಾಮರಾಜನಗರ, ಡಿ.10– ಚೈನ್ ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ 2400 ರೂ, ಟೈರ್ (ಸಾಮಾನ್ಯ) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ 1500 ರೂ ನಿಗದಿಪಡಿಸಲಾಗಿದೆ.

ಜಿಲ್ಲೆಯಲ್ಲಿ 2022-23ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 12,490 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ ಬೆಳೆಯಲಾಗಿದ್ದು, ಈಗಾಗಲೇ ಕಟಾವು ಪ್ರಾರಂಭವಾಗಿದೆ. ಕಳೆದ ಸಾಲಿನಲ್ಲಿ ಜಿಲ್ಲೆಯಲ್ಲಿ ಭತ್ತ ಕಟಾವು ಯಂತ್ರದಿಂದ ಕಟಾವು ಮಾಡಲು ಪ್ರತಿ ಗಂಟೆ ಚೈನ್ ಮಾದರಿಗೆ 2,200 ರೂ. ದರ ನಿಗದಿಪಡಿಸಲಾಗಿತ್ತು. ಆದರೆ ಕಟಾವು ಯಂತ್ರದ ಸರಬರಾಜುದಾರರು ರೈತರಿಂದ ಹೆಚ್ಚಿನ ಹಣವನ್ನು ಪಡೆಯುತ್ತಿರುವುದಾಗಿ ದೂರು ಬಂದಿತ್ತು. ಇದರಿಂದ ರೈತರಿಗೆ ಸಂಕಷ್ಟದ ಸಮಯದಲ್ಲಿ ಹೆಚ್ಚಿನ ಆರ್ಥಿಕ ಹೊರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಗುರುವಾರ (ಡಿ.8) ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರ ಅಧ್ಯಕ್ಷತೆಯಲ್ಲಿ ರೈತ ಮುಖಂಡರು ಕೃಷಿ ಇಲಾಖೆ ಅಧಿಕಾರಿಗಳ ಸಭೆ ನಡೆದಿದ್ದು, ಈ ಭತ್ತ ಕಟಾವು ಯಂತ್ರದ ದರ ಸಂಬಂಧ ಚರ್ಚಿಸಲಾಯಿತು.

ಸಭೆಯಲ್ಲಿ ಭತ್ತ ಕಟಾವು ಯಂತ್ರದ ಸಂಬಂಧ ರೈತ ಮುಖಂಡರಿಂದ ಅಭಿಪ್ರಾಯ ಪಡೆಯಲಾಯಿತು. ಭತ್ತ ಕಟಾವು ಯಂತ್ರದ ಏಜೆಂಟರಿಂದಲೂ ಅಭಿಪ್ರಾಯ ಪಡೆಯಲಾಯಿತು. ಅತಿವೃಷ್ಟಿ ಸಂಕಷ್ಟದ ಸಂದರ್ಭದಲ್ಲಿ ಕಟಾವು ಯಂತ್ರದ ಮಾಲಿಕರು ಸಹಕರಿಸಬೇಕು ಎಂದು ತಿಳಿಸಲಾಗಿದೆ. ಸಭೆಯಲ್ಲಿ ರೈತ ಮುಖಂಡರಾದ ಹೊನ್ನೂರು ಪ್ರಕಾಶ್, ಡಾ. ಗುರುಪ್ರಸಾದ್, ಅಣಗಳ್ಳಿ ಬಸವರಾಜು, ದಶರಥ್, ಇನ್ನಿತರ ರೈತ ಮುಖಂಡರು, ರೈತ ಸಂಘಟನೆಗಳ ಪ್ರತಿನಿಧಿಗಳು, ಜಂಟಿ ಕೃಷಿ ನಿರ್ದೇಶಕರಾದ ಮಧುಸೂದನ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಸುಧಾಮಣಿ ಸೇರಿದಂತೆ ಕೃಷಿ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಜಿಲ್ಲಾ ಭೇಟಿ ಬದಲಾವಣೆ

ಡಿ.12ರ ಬದಲು 13ಕ್ಕೆ ಆಗಮನ, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ

ಚಾಮರಾಜನಗರ, ಡಿ.10– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಚಾಮರಾಜನಗರ ಜಿಲ್ಲೆಯ ಭೇಟಿ ಕಾರ್ಯಕ್ರಮ ಬದಲಾಗಿದೆ.

ಈ ಹಿಂದೆ ಡಿ.12ಕ್ಕೆ ನಿಗದಿಯಾಗಿದ್ದ ಮುಖ್ಯಮಂತ್ರಿಯವರ ಜಿಲ್ಲಾ ಭೇಟಿಯ ಕಾರ್ಯಕ್ರಮವನ್ನು ಮುಂದೂಡಿ ಡಿ.13ಕ್ಕೆ ನಿಗದಿಪಡಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಡಿ.13ರಂದು ಬೆಳಗ್ಗೆ 10.30 ಗಂಟೆಗೆ ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಚಾಮರಾಜನಗರ ಮತ್ತು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸುವರು.



ಡಿ.12ರಂದು ಮುಖ್ಯಮಂತ್ರಿಗಳ ಚಾಮರಾಜನಗರ ಜಿಲ್ಲಾ ಭೇಟಿ ಕಾರ್ಯಕ್ರಮ ರದ್ದಾಗಿದ್ದು, ಈ ಕಾರ್ಯಕ್ರಮ ಮರುದಿನ ಡಿ.13 ರಂದು ನಡೆಯಲಿದೆ.
–ಡಿ.ಎಸ್.ರಮೇಶ್, ಜಿಲ್ಲಾಧಿಕಾರಿ.

ಮಧ್ಯಾಹ್ನ 1 ಗಂಟೆಗೆ ಹನೂರು ಪಟ್ಟಣದ ಮಹದೇಶ್ವರ ಕ್ರೀಡಾಂಗಣದಲ್ಲಿ ಕೊಳ್ಳೇಗಾಲ ಮತ್ತು ಹನೂರು ವಿಧಾನಸಭಾ ಕ್ಷೇತ್ರಗಳ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸುವರು.

ಮಧ್ಯಾಹ್ನ 2.50 ಗಂಟೆಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡುವರು. ಮಧ್ಯಾಹ್ನ 3.15ಕ್ಕೆ ಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸುವರು. ಬಳಿಕ ಬೆಂಗಳೂರಿಗೆ ತೆರಳುವರು ಎಂದು ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ: ನಾಲ್ವರಿಗೆ ಗಾಯ



ಯಳಂದೂರು, ಡಿ.10– ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಮುಂಭಾಗದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 209ರ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ನಾಲ್ವರಿಗೆ ಗಾಯಗಳಾಗಿರುವ ಘಟನೆ ಶುಕ್ರವಾರ ಸಂಜೆ ಸಂಭವಿಸಿದೆ.

ಕೊಳ್ಳೇಗಾಲದಿಂದ ಚಾಮರಾಜನಗರಕ್ಕೆ ಹೋಗುತ್ತಿದ್ದ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಕುಡಿದು ವಾಹನ ಚಾಲನೆ ಮಾಡುತ್ತಿದ್ದದ್ದೇ ಈ ಅಚಾತುರ್ಯಕ್ಕೆ ಕಾರಣವಾಗಿದೆ. ದೊಡ್ಡ ಕವಲಂದೆ ಗ್ರಾಮದ ಪಿಡಿಓ ಪುರುಷೋತ್ತಮ್ ಕಾರು ಚಾಲನೆ ಮಾಡುತ್ತಿದ್ದರು ಎನ್ನಲಾಗಿದೆ. ಗಾಯಗೊಂಡ ಪಿಡಿಓ ಪುರುಷೋತ್ತಮ್, ದೊಡ್ಡ ಕವಲಂದೆ ಗ್ರಾಮದ ನಾಗೇಶ್, ಮಹದೇವಯ್ಯ, ಸಿದ್ದರಾಜು ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಈ ಸಂಬಂಧ ಯಳಂದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಹೊನ್ನೂರು ಆರ್.ಸಿದ್ಧರಾಜು ಪಡಿತರ ವಿತರಕರ ಸಂಘದ ಅಧ್ಯಕ್ಷ, ಎಂ.ಪಿ.ಪ್ರಭುಸ್ವಾಮಿ ಕಾರ್ಯದರ್ಶಿ



ಯಳಂದೂರು,ಡಿ.10– ತಾಲೂಕು ಪಡಿತರ ವಿತರಕರ ಸಂಘದ ಅಧ್ಯಕ್ಷರಾಗಿ ಹೊನ್ನೂರು ಆರ್.ಸಿದ್ಧರಾಜು, ಕಾರ್ಯದರ್ಶಿಯಾಗಿ ಎಂ.ಪಿ.ಪ್ರಭುಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶನಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಇವರಿಬ್ಬರನ್ನು ಸಂಘದ ಸದಸ್ಯರು ಅವಿರೋಧವಾಗಿ ಆಯ್ಕೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ನೂತನ ಅಧ್ಯಕ್ಷ ಸಿದ್ಧರಾಜು ತಾಲೂಕಿನಲ್ಲಿ ಒಟ್ಟು 44 ಪಡಿತರ ವಿತರಕರಿದ್ದು, ಸಂಘದ ಎಲ್ಲಾ ಸದಸ್ಯರು ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದು ಅತೀವ ಸಂತಸ ತಂದಿದೆ. ನಮ್ಮ ತಾಲೂಕು ಪುಟ್ಟ ತಾಲೂಕಾಗಿದ್ದು, ಪಡಿತರ ವಿತರಕರ ಸಮಸ್ಯೆಗಳನ್ನು ನಿವಾರಿಸವಲ್ಲಿ, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಒದಗಿಸುವಲ್ಲಿ ನಾನು ಶ್ರಮಮೀರಿ ದುಡಿಯುತ್ತೇನೆ ಎಂದರು. ಸಂಘದ ಇತರ ಸದಸ್ಯರು ನೂತನ ಅಧ್ಯಕ್ಷ ಹಾಗೂ ಕಾರ್ಯದರ್ಶಿಯನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಂಘದ ಚಿಕ್ಕಮಾದಯ್ಯ, ದಾಸನಹುಂಡಿ ದಿವಾಕರ್, ಮಲ್ಲಿಕಾರ್ಜುನಸ್ವಾಮಿ, ಪ್ರಭುಪ್ರಸಾದ್, ರಾಮಸ್ವಾಮಿ, ಎನ್.ಲಿಂಗರಾಜು, ಎಚ್.ಸಿ.ರಾಜಪ್ಪ, ವೈ.ಆರ್.ವೆಂಕಟರಾಮು. ಪುಟ್ಟರಾಜು, ಮಹೇಶ್, ರಮೇಶ್, ನಾರಾಯಣಸ್ವಾಮಿ ಹಾಜರಿದ್ದರು.

ಶ್ರೀ ಮಾಚಿದೇವ ಮಹಾಸಂಸ್ಥಾನ ಮಠದಲ್ಲಿ ಜ.5ರಿಂದ ಕಾಯಕ ಜನೋತ್ಸವ

ಚಾಮರಾಜನಗರ, ಡಿ.10– ಚಿತ್ರದುರ್ಗ ಜಿಲ್ಲೆಯ ಜಗದ್ಗುರು ಶ್ರೀ ಮಾಚಿದೇವ ಮಹಾಸಂಸ್ಥಾನ ಮಠದಲ್ಲಿ ಶ್ರೀಮಠದ ಶಂಕುಸ್ಥಾಪನೆ 14ನೇ ವಾರ್ಷಿಕೋತ್ಸವ, ಮಹಾಸ್ವಾಮಿಗಳವರ ಜಂಗಮದೀಕ್ಷೆಯ 24ನೇ ಹಾಗೂ 39ನೇ ಜನ್ಮದಿನ ವಾರ್ಷಿಕೋತ್ಸವ ಮತ್ತು ಜಗದ್ಗುರು ಡಾ.ಶ್ರೀ ಬಸವ ಮಾಚಿದೇವ ಮಹಾಸ್ವಾಮಿಗಳವರ 5ನೇ ಪಟ್ಟಾಧಿಕಾರಿ ಮಹೋತ್ಸವದ ಅಂಗವಾಗಿ ಜ.5 ಮತ್ತು 6 ರಂದು ಎರಡು ದಿನಗಳ ಕಾಲ ನಡೆಯುವ ಕಾಯಕ ಜನೋತ್ಸವಕ್ಕೆ ಜಿಲ್ಲೆಯಿಂದ ಸಮುದಾಯವರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿ ಮಾಡಿಕೊಡುವಂತೆ ಮಠದ ಡಾ. ಶ್ರೀಬಸವ ಮಾಚಿದೇವ ಸ್ವಾಮೀಜಿ ಮನವಿ ಮಾಡಿದರು.



ಸಮುದಾಯ ಜಾಗೃತಿಗೊಳ್ಳಲು ಸಂಘಟನೆ ಅನಿವಾರ್ಯ: ಶ್ರೀಗಳು ಶನಿವಾರ ನಗರಕ್ಕೆ ಭೇಟಿ ನೀಡಿ ಸನ್ಮಾನ ಸ್ವೀಕರಿಸಿ ಸಮುದಾಯದ ಮುಖಂಡರುಗಳಿಗೆ ಕಾರ್ಯಕ್ರಮದ ಆಹ್ವಾನ ಪತ್ರಿಕೆ ವಿತರಿಸಿ ಮಾತನಾಡಿದರು. ಕಾಯಕ ಸಮಾಜಗಳು ಶೋಚನೀಯ ಸ್ಥಿತಿಯಲ್ಲಿವೆ. ಸಮಾಜ ಜಾಗೃತಿಯಾಗುವ ವಿಚಾರದಲ್ಲಿ ಒಂದು ಹಂತವನ್ನು ನಾವು ತಲುಪಿಲ್ಲ. ಸಮುದಾಯ ಜಾಗೃತಿ ಆಗಲು ಸಂಘಟನೆ ಅನಿವಾರ್ಯವಾಗಿದೆ. ರಾಜ್ಯದಲ್ಲಿ ನಮ್ಮ ಸಮಾಜ ಕಾಯಕ ಮಾಡಿಕೊಂಡು ಬದುಕುವ ಜನರು ನಾವು ಆಗಿದ್ದೇವೆ. ಬಟ್ಟೆ ಶುಚಿಗೊಳಿಸಿಕೊಂಡು ಬಟ್ಟೆಬರಾನ್ ಮಾಡಿ, ಕೂಲಿ ಮಾಡಿಕೊಂಡು ಜೀವನ ಸಾಗಿಸಕೊಂಡು ಹೋಗುವುದನ್ನು ನಾವು ನೋಡಿದ್ದೇವೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ತಾಪಂ ಮಾಜಿ ಅಧ್ಯಕ್ಷ ಚಿಕ್ಕಮಹದೇವು, ಮಡಿವಾಳ ಸಮಾಜ ತಾಲೂಕು ಅಧ್ಯಕ್ಷ ದುಂಡು ಮಹದೇವು, ಕಾರ್ಯದರ್ಶಿ ಜೆ. ಸಿದ್ದಶೆಟ್ಟಿ, ಉಪಾಧ್ಯಕ್ಷ ರಮೇಶ್, ಖಜಾಂಚಿ ಮಹದೇವಶೆಟ್ಟಿ, ನಿರ್ದೇಶಕರಾದ ಗೋವಿಂದ ರಾಜು,ಮಹೇಂದ್ರ, ವಿಜಯಕುಮಾರ್, ಗುಂಡ್ಲು ಪೇಟೆ ತಾಲೂಕು ಅಧ್ಯಕ್ಷ ಸಿದ್ದರಾಜು ಇತರರು ಹಾಜರಿದ್ದರು.


ಉಚಿತ ವೈದ್ಯಕೀಯ ತಪಾಸಣೆ

ಗುಂಡ್ಲುಪೇಟೆ, ಡಿ.10– ಪಟ್ಟಣದ ಜೆಎಸ್‌ಎಸ್ ಕಾಲೇಜು ಒಳಾಂಗಣದಲ್ಲಿ ಪ್ರತಿ ತಿಂಗಳ ಎರಡನೇ ಭಾನುವಾರದಂದು ಉಚಿತ ವೈದ್ಯಕೀಯ ತಪಾಸಣೆ ಆಯೋಜಿಸಿದೆ.

ಜೆಎಸ್‌ಎಸ್ ಮಹಾವಿದ್ಯಾಪೀಠದ ಗೌರವ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಜೆಎಸ್‌ಎಸ್ ಸ್ವಾಮೀಜಿಯವರ ಆಶಯದಂತೆ ತಾಲೂಕಿನ ಬಡಜನತೆಗೆ ಅನುಕೂಲವಾಗುವ ರೀತಿಯಲ್ಲಿ ಶಿಬಿರವು ದಿನಾಂಕ ಡಿ.19 ರಂದು ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನ ಒಳಾಂಗಣದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ಉದ್ಘಾಟನೆಗೊಳ್ಳಲಿದೆ.

ಮೈಸೂರು ಮಿತ್ರ

ಎಡೆಬಿಡದೇ ಸುರಿಯುವ ಮಳೆ ನಡುವೆ ಬಹುರೂಪಿಗೆ ಬಹುಪರಾಕ್...


ಕಲಾಮಂದಿರದಲ್ಲಿ ಪ್ರದರ್ಶನಗೊಂಡ 'ಕರಿಮಾಯಿ' ನಾಟಕ ದೃಶ್ಯ


ಭೂಮಿಗೀತದಲ್ಲಿ ಪ್ರದರ್ಶಿತ 'ಕರ್ಣಭಾರಂ' ಸಂಸ್ಕೃತ ನಾಟಕ


ಪೂರ್ಣಚಂದ್ರ ತೇಜಸ್ವಿ ರಚಿತ 'ಚಿದಂಬರ ರಹಸ್ಯ' ನಾಟಕ ಪ್ರದರ್ಶನ



ಮೈಸೂರು,ಡಿ.10(ಎಂಕೆ)-ಸೋನೆ ಮಳೆಗೆ ಸೊರಗದ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ದಲ್ಲಿ ಕುಂತಿಸುತ ಕರ್ಣನ ಸಂಕಷ್ಟ, ಕರಿಮಾಯಿ ದೇವಿಯ ಆರಾಧನೆ ಜೊತೆಗೆ ಚಿದಂಬರ ರಹಸ್ಯ ಭೇದಿಸುವ ಬುದ್ಧಿಜೀವಿಗಳ ಪ್ರಯತ್ನಕ್ಕೆ ರಂಗಭೂಮಿಯ ಅಭಿಮಾನಿಗಳು ಶಹಭಾಷ್‌ಗಿರಿ ನೀಡಿದರು.

ರಂಗಾಯಣದಲ್ಲಿ ನಡೆಯುತ್ತಿರುವ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ದಲ್ಲಿ ಶನಿವಾರ ಜನಪ್ರಿಯ ನಾಟಕಗಳು ಪ್ರದರ್ಶನಗೊಂಡವು. ಕಲಾಮಂದಿರ, ಭೂಮಿಗೀತ ಹಾಗೂ ಸಂಪತ್ ರಂಗಮಂದಿರ(ಕಿರುರಂಗಮಂದಿರ)ದಲ್ಲಿ ಜನಪ್ರಿಯ ನಾಟಕಗಳಾದ 'ಕರಿಮಾಯಿ', 'ಕರ್ಣಭಾರಂ' ಹಾಗೂ 'ಚಿದಂಬರ ರಹಸ್ಯ' ಕಲಾಭಿಮಾನಿಗಳಿಗೆ ಮಳೆ-ಚಳಿಯ ನಡುವೆ ಮನಸ್ಸಿಗೆ ಆಹ್ಲಾದಕರ ಅನುಭವ ನೀಡಿದವು.

ಕಲಾಮಂದಿರ: ಹಿರಿಯ ರಂಗಕರ್ಮಿ, ನಟಿ ಬಿ.ಜಯಶ್ರೀ ನಿರ್ದೇಶನದಲ್ಲಿ ಬೆಂಗಳೂರಿನ ಸ್ಪಂದನಾ ತಂಡದಿಂದ 'ಕರಿಮಾಯಿ' ನಾಟಕ ಪ್ರದರ್ಶನಗೊಂಡಿತು. ಡಾ.ಚಂದ್ರಶೇಖರ ಕಂಬಾರರ ರಚನೆಯ ಕತೆ ಇದಾಗಿದ್ದು, ಹಳ್ಳಿಯೊಂದರ ಬದುಕಿನಲ್ಲಿ ಹುದುಗಿರುವ ಪುರಾಣಗಳ ನಾಶದ ಪ್ರಗತಿಯೇ ನಾಟಕದ ವಸ್ತುವಾಗಿದೆ. ಕೊಲೆ ಪ್ರಕರಣವೊಂದರ ಇತ್ಯರ್ಥಕ್ಕೆ ನ್ಯಾಯಾಲಯಕ್ಕೋ ಅಥವಾ ಕರಿಮಾಯಿ ದೇವಿಯ ಬಳಿಗೆ ಹೋಗಬೇಕೆನ್ನುವ ಗ್ರಾಮದ 2 ಬಣಗಳ ನಡುವಿನ ಉಂಟಾಗುವ ಕಂದಕ, ಬಿರುಕು ಬಿಡುವ ಸಂಬಂಧಗಳು ಹಾಗೂ ಬಯಲಾಟ ನೋಡುಗರನ್ನು ನಿಬ್ಬೆರಗಾಗಿಸಿತು.

ಭೂಮಿಗೀತ: ಕುಂತಿಸುತ ಕರ್ಣ ಎದುರಿಸುವ ಅವಮಾನಗಳು, ದುರ್ಯೋಧನನ ಸ್ನೇಹ ಹಾಗೂ ಪಾಂಡವರ ವಿರುದ್ಧ ಯುದ್ಧ ಮಾಡದಂತೆ ಹೇಳುವ ತಾಯಿಯ ಮನವಿಯನ್ನು ಸ್ವೀಕರಿಸಲೂ ಹಾಗೂ ತಿರಸ್ಕರಿಸಲೂ ಆಗದೆ ಸಂಕಷ್ಟ ಅನುಭವಿಸುವ ಚಿತ್ರಣವನ್ನು 'ಕರ್ಣಭಾರಂ' ಸಂಸ್ಕೃತ ನಾಟಕದ ನಿರ್ದೇಶಕ ಕೆ.ಎನ್.ಘಣಿಕ್ಕರ್ ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ. ಕೇರಳದ ತಿರುವನಂತಪುರಂನ ಸೋಪಾನಂ ತಂಡದ ಕಲಾವಿದರು, ಮಹಾಕವಿಭಾಸ ರಚನೆ ಕತೆಯಲ್ಲಿನ ಪ್ರತಿಯೊಂದು ಸನ್ನಿವೇಶವನ್ನು ನೋಡುಗರ ಮನಮುಟ್ಟುವಂತೆ ಅಭಿನಯಿಸಿದ್ದಾರೆ.

ಸಂಪತ್‌ರಂಗಮಂದಿರ(ಕಿರುರಂಗಮಂದಿರ): ಕನ್ನಡದ ಖ್ಯಾತ ಕವಿಗಳಲ್ಲಿ ಒಬ್ಬರಾದ ಪೂರ್ಣಚಂದ್ರ ತೇಜಸ್ವಿ ರಚಿತ 'ಚಿದಂಬರ ರಹಸ್ಯ' ನಾಟಕವನ್ನು ಮೈಸೂರಿನ ಅಭಿಯಂತರರು ತಂಡ ಕಲಾವಿದರು ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದರು. ಹೆಚ್.ಎಸ್.ಸುರೇಶ್ ಬಾಬು ನಿರ್ದೇಶನದ ನಾಟಕದಲ್ಲಿನ ಪ್ರತಿಯೊಂದು ಸಂಭಾಷಣೆಗಳು ರಂಗಪ್ರೇಕ್ಷಕರ ಮೊಗದಲ್ಲಿ ನಗುತರಿಸಿತು. ಏಲಕ್ಕಿ ಬೆಲೆಯ ಕುಸಿತಕ್ಕೆ ಕಾರಣ ತಿಳಿಯಲು ಕೆಸರೂರಿಗೆ ಬರುವ ಕೇಂದ್ರ ಸರ್ಕಾರದ ಇಂಟೆಲಿಜೆನ್ಸ್ ಆಫೀಸರ್‌ಗಳು, ನಂತರ ಕೆಸರೂರಿನಲ್ಲಾಗುವ ಬೆಳವಣಿಗೆಗಳ ಹಿಂದಿರುವ ಚಿದಂಬರ ರಹಸ್ಯವನ್ನು ಕಂಡುಹಿಡಿಯಲು ಬುದ್ಧಿಜೀವಿಗಳು ನಡೆಸುವ ಪ್ರಯತ್ನವನ್ನು ಎಲ್ಲರೂ ಮೆಚ್ಚಿಕೊಂಡರು.

ಗುಂಡಿ ಮೇಲೊಂದು ಮಳಿಗೆ...



ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿನ ಆಹಾರ ಮಳಿಗೆಗಳಿರುವ ಕಡೆ ಗುಂಡಿ ಮೇಲೆಯೇ ಮಳಿಗೆ ನಿರ್ಮಿಸಿ ನೀಡಿರುವುದು ಮಳಿಗೆದಾರರನ್ನು ಸಂಕಷ್ಟಕ್ಕೆ ಸಿಲುಕಿಸಿದಂತಾಗಿದೆ. ಆಳುದ್ದಾ ಗುಂಡಿ ಇರುವ ಸ್ಥಳದಲ್ಲಿಯೇ ಮಳಿಗೆ ನೀಡಿದ್ದಾರೆ. ಗುಂಡಿ ಮೇಲೆ ನಿಂತು ವ್ಯಾಪಾರ ಮಾಡುವುದಾದರೂ ಹೇಗೆ? ಮಣ್ಣು ಹಾಕಿ ಗುಂಡಿ ಮುಚ್ಚದೆಯೇ ನೀಡಿದ್ದಾರೆ. ಇದರಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಸದ್ಯಕ್ಕೆ ಸಣ್ಣ ಸಣ್ಣ ಸಿಮೆಂಟ್ ಇಟ್ಟಿಗೆಳಿಂದ ಗುಂಡಿ ಮುಚ್ಚಿಕೊಂಡಿದ್ದೇವೆ. ಆದರೆ ಅಲ್ಲಿ ಕುಳಿತುಕೊಳ್ಳುವುದುಕ್ಕೂ ಸಾಧ್ಯವಾಗುತ್ತಿಲ್ಲ ಎಂದು ಮಳಿಗೆದಾರರು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಮನಸ್ಸಿಗೆ ಮುದ ನೀಡಿದ ನಾದಸ್ವರ...



ಮಳೆಯ ಕಾರಣಕ್ಕೆ ವನರಂಗದ ಬದಲು ಬಿ.ವಿ.ಕಾರಂತರ ರಂಗಚಾವಡಿಯಲ್ಲಿ ಏರ್ಪಡಿಸಿದ್ದ ನಾದಸ್ವರ ಹಾಗೂ ಡೊಳ್ಳುಕುಣಿತ ನೋಡುಗರ ಮನಸ್ಸಿಗೆ ಮುದ ನೀಡಿತು. ಮೈಸೂರಿನ ಯದುಕುಮಾರ್ ನೇತೃತ್ವದಲ್ಲಿ ನಡೆದ ನಾದಸ್ವರ ಕಾರ್ಯಕ್ರಮದಲ್ಲಿ ಕಲಾವಿದರಾದ ಹೆಚ್.ಎ.ತೇಜಸ್ವಿನಿ, ಕೆ.ಎಂ.ಪೂಜಾಶ್ರೀ, ಎ.ಎಂ.ಗುರುರಾಜ್, ಕೆ.ಚೈತನ್ಯ ಹಾಗೂ ಎಂ.ಆರ್.ಪೂರ್ವಿಕಾ ಇಂಪಾದ ಸ್ವರ ನುಡಿಸಿದರೆ, ಡೋಲು ವಾದನದಲ್ಲಿ ಬಾಲಾಜಿ ಹಾಗೂ ಜಗದೀಶ್ ತಾಳದಲ್ಲಿ ಯೋಗೇಶ್ ಮತ್ತು ದೀಪಕ್ ಉತ್ತಮ ಸಹಕಾರ ನೀಡಿದರು. ಹಾಗೆಯೇ ಮೈಸೂರಿನ ಸುಂದರೇಶ್ ಮತ್ತು ತಂಡದಿಂದ ಪ್ರದರ್ಶನಗೊಂಡ ಡೊಳ್ಳುಕುಣಿತ ಎಲ್ಲರನ್ನು ಆಕರ್ಷಿಸಿತು.

ಕಣ್ಣಿಗೆ ಕಾಣಿಸದ ಬುಲೆಟಿನ್ ಅಕ್ಷರಗಳು...

ಬಹುರೂಪಿ ರಾಷ್ಟ್ರೀಯ ರಂಗೋತ್ಸವದಲ್ಲಿ ನಡೆಯುವ ಕಾರ್ಯಕ್ರಮ ಗಳ ವಿವರಗಳನ್ನು ಆಗಿಂದಾಗಲೇ ರಂಗಾಸಕ್ತರಿಗೆ ತಿಳಿಸುವ ನಿಟ್ಟಿನಲ್ಲಿ ಹೊರ ತಂದಿರುವ ಬಹುರೂಪಿ ಬುಲೆಟಿನ್ ಪತ್ರಿಕೆಯಲ್ಲಿ ಅಕ್ಷರಗಳೇ ಕಾಣುತ್ತಿಲ್ಲ.

ಕಾವಾ ಕಾಲೇಜು ವಿದ್ಯಾರ್ಥಿಗಳು ಬಹುರೂಪಿಯ ನಾನಾ ವೇದಿಕೆಗಳಲ್ಲಿ ಸುತ್ತಾಡಿ, ಸಂಗ್ರಹಿಸಿ ಬರೆಯುವ ವಿಚಾರಗಳು ಓದುಗರ ಕಣ್ಣಿಗೆ ಕಾಣದಂತಾಗಿವೆ. ಪತ್ರಿಕೆ ಮುದ್ರಣ ಕಳಪೆಯಾಗಿದ್ದು, ಯಾಕಾದರೂ ಈ ಬುಲೆಟಿನ್ ಎಂಬ ಪತ್ರಿಕೆ ಮಾಡಿದ್ದಾರೆ ಎಂದು ಪತ್ರಿಕೆ ನೋಡಿ ಓದಲಾಗದವರು ಗೊಣಗುತ್ತಿದ್ದಾರೆ.

ಹಿಮಾಚಲ ಪ್ರದೇಶ ಸಿಎಂ ಹುದ್ದೆಗೆ ಸುಖ್ವಿಂದರ್ ಸುಖು ಹೆಸರು ಘೋಷಣೆ

ಶಿಮ್ಲಾ, ಡಿ.10- ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆ 40 ಸ್ಥಾನಗಳಲ್ಲಿ ಗೆಲ್ಲುವ ಮೂಲಕ ಸರಳ ಬಹುಮತ ಪಡೆದುಕೊಂಡಿದೆ. ಆದರೆ, ಸಿಎಂ ಆಯ್ಕೆ



ವಿಚಾರದಲ್ಲಿ ದೊಡ್ಡ ಹೈಡ್ರಾಮವೇ ನಡೆದಿದೆ. ಇದರ ಮಧ್ಯೆ ಇದೀಗ ಕಾಂಗ್ರೆಸ್ ಹೈಕಮಾಂಡ್, ಅಂತಿಮವಾಗಿ ಸಿಎಂ ಹುದ್ದೆಗೆ ಸುಖ್ವಿಂದರ್ ಸುಖು ಹೆಸರು ಘೋಷಿಸಿದೆ. ಅದರಂತೆಯೇ ಇಂದು(ಡಿ.10) ಶಿಮ್ಲಾದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಸುಖ್ವಿಂದರ್ ಅವರನ್ನೇ ಆಯ್ಕೆ ಮಾಡಲಾಯಿತು. ಇನ್ನು ಉಪ ಮುಖ್ಯಮಂತ್ರಿ ಹುದ್ದಗೆ ಮಾಜಿ ಸಿಎಂ, ದಿವಂಗತ ವೀರಭದ್ರ ಸಿಂಗ್ ಅವರ ಪತ್ನಿ ಪ್ರತಿಭಾ ಸಿಂಗ್ ಅವರ ಆಪ್ತ ಮುಖೇಶ್ ಅಗ್ನಿಹೋತ್ರಿ ಅವರನ್ನ ಆಯ್ಕೆ ಮಾಡಲಾಗಿದೆ. ನಾಳೆಯೇ (ಡಿ.11) ಬೆಳಗ್ಗೆ 11ಕ್ಕೆ ಸುಖ್ವಿಂದರ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಹಿಮಾಚಲ ಪ್ರದೇಶ ಕಾಂಗ್ರೆಸ್ ಅಧ್ಯಕ್ಷೆ ಪ್ರತಿಭಾ ಸಿಂಗ್ ಮುಖ್ಯಮಂತ್ರಿ ಹುದ್ದೆಯ ಪ್ರಬಲ ಆಕಾಂಕ್ಷಿಯಾಗಿದ್ದರು. ಅಲ್ಲದೇ ನಿನ್ನೆ(ಡಿ.9) ನಡೆದ ಕಾಂಗ್ರೆಸ್ ಸಭೆಗೂ ಮುನ್ನ ಪ್ರತಿಭಾ ಸಿಂಗ್ ಮಾಧ್ಯಮಗಳ ಮೂಲಕ ತಮ್ಮ ಸಿಎಂ ಬೇಡಿಕೆಯನ್ನು ಮುಂದಿಟ್ಟಿದ್ದರು. ಆದರೆ ಇದೀಗ ಸಿಎಂ ಹುದ್ದೆಗೆ ಸುಖ್ವಿಂದರ್ ಸಿಂಗ್ ಸುಖು ಹೆಸರನ್ನು ಅಂತಿಮಗೊಳಿಸಲಾಗಿದೆ. ಪ್ರತಿಭಾ ಸಿಂಗ್ ಅವರನ್ನು ಸಮಾಧಾನಪಡಿಸಲು ಮುಖೇಶ್ ಅಗ್ನಿಹೋತ್ರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡಲಾಗಿದೆ.

ಭುಗಿಲೆದ್ದ ಅಸಮಾಧಾನ: ಅತ್ತ ಕಾಂಗ್ರೆಸ್ ಹೈಕಮಾಂಡ್ ಸಿಎಂ ಹುದ್ದಗೆ ಸುಖ್ವಿಂದರ್ ಸುಖು ಹೆಸರು ಪ್ರಕಟಿಸುತ್ತಿದ್ದಂತೆಯೇ ಇತ್ತ ಹಿಮಾಚಲ ಪ್ರದೇಶದಲ್ಲಿ ಅಸಮಾಧಾನ ಭುಗಿಲೆದ್ದಿದೆ. ಪ್ರತಿಭಾ ಸಿಂಗ್‌ಗೆ ಸಿಎಂ ಹುದ್ದೆ ಕೈತಪ್ಪಿದ್ದಕ್ಕೆ ಅವರ ಬೆಂಬಲಿಗರು ಶಿಮ್ಲಾದಲ್ಲಿ ಪ್ರತಿಭಟನೆಗಿಳಿದಿದ್ದು, ಕಾಂಗ್ರೆಸ್ ನಾಯಕರಿದ್ದ ಹೋಟೆಲ್‌ಗೆ ಮುತ್ತಿಗೆ ಹಾಕಿದ್ದಾರೆ. ಅಲ್ಲದೇ ಪ್ರತಿಭಾ ಸಿಂಗ್‌ಗೆ ಸಿಎಂ ಹುದ್ದೆ ನೀಡುವಂತೆ ಬೆಂಬಲಿಗರು ಒತ್ತಾಯಿಸಿದ್ದಾರೆ.



ಮೈಸೂರಿನ ಮಂಜುನಾಥಪುರದಲ್ಲಿ ಶ್ರೀ ವೀರಾಂಜನೇಯ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸೇವಾ ಟ್ರಸ್ಟ್ ಆಯೋಜಿಸಿದ್ದ 37ನೇ ವರ್ಷದ ಶ್ರೀ ಹನುಮ ಜಯಂತಿ ಪೂಜಾ ಮಹೋತ್ಸವದಲ್ಲಿ ಮಾಜಿ ಶಾಸಕ ವಾಸು ಭಾಗವಹಿಸಿ, ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯರಾದ ಎಸ್.ಬಿ.ಎಂ.ಮಂಜು, ಕೆ.ವಿ.ಶ್ರೀಧರ್, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.


ಚಾಮರಾಜ ವಿಧಾನಸಭಾ ಕ್ಷೇತ್ರ ವಾರ್ಡ್ ನಂ.6ರ ವ್ಯಾಪ್ತಿಯಲ್ಲಿ 1.25 ಕೋಟಿ ರೂ. ಮೊತ್ತದ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಶನಿವಾರ ಚಾಲನೆ ನೀಡಿದರು. ಈ ವೇಳೆ ಪಾಲಿಕೆ ಸದಸ್ಯರಾದ ಎಸ್.ಬಿ.ಎಂ.ಮಂಜು, ಚಿಕ್ಕವೆಂಕಟು, ಕ್ಷೇತ್ರ ಅಧ್ಯಕ್ಷ ಸೋಮಶೇಖರ್ ರಾಜು, ಉಪಾಧ್ಯಕ್ಷ ಜಯಣ್ಣ, ಕಾರ್ಯದರ್ಶಿ ಶ್ರೀನಿವಾಸ್ ಗೌಡ, ಪಾಲಿಕೆ ಮಾಜಿ ಸದಸ್ಯರಾದ, ಗಿರೀಶ್ ಪ್ರಸಾದ್, ಗುರು ವಿನಾಯಕ್, ವಾರ್ಡ್ ಅಧ್ಯಕ್ಷ ಅಶೋಕ್, ಆಶ್ರಯ ಸಮಿತಿ ಸದಸ್ಯರಾದ ಮಹೇಶ್‌ರಾಜೇ ಅರಸ್, ಮಹೇಶ್, ವಕೀಲರಾದ ಆದಿತ್ಯ, ಪಡುವಾರಹಳ್ಳಿ ಎಂ.ರಾಮಕೃಷ್ಣ ಮುಖಂಡರಾದ ಜೀವನ್, ಜನಾರ್ಧನ, ಹನುಮಂತು, ನಾಗ, ರಘು, ಭರತ್, ಫಾಲ್ಕನ್ ಪ್ರಸನ್ನ, ಇಂದ್ರೇಶ್, ಕವಿತಾ, ಹರೀಶ್, ರಾಜೇಶ್, ಜನಾರ್ದನ, ಪೇಪರ್ ಪ್ರಕಾಶ್, ಗಿರೀಶ್, ಕುಮಾರ್, ಗೋವಿಂದ, ಮಾಧವ್ ರಾವ್, ರಘು, ಗುತ್ತಿಗೆದಾರ ಚಾಯೇಶ್, ಕಾರ್ಯಪಾಲಕ ಇಂಜಿನಿಯರ್ ಆಸಿಫ್ ಇದ್ದರು.

ಮಾಂಡೌಸ್ ಅರ್ಭಟ; ಭಾರೀ ಮಳೆಗೆ ನಾಲ್ವರು ಸಾವು

ಚೆನ್ನೈ,ಡಿ.10-ಮಾಂಡೌಸ್ ಚಂಡಮಾರುತದ ಹೊಡೆತಕ್ಕೆ ಸಿಲುಕಿರುವ ತಮಿಳುನಾಡಿನಲ್ಲಿ ತೀವ್ರ ರೀತಿ ಹಾನಿಯಾಗಿದೆ. ಚೆನ್ನೈ ಮತ್ತು ಚೆಂಗಲಪಟ್ಟು ಜಿಲ್ಲೆ ಹಲವೆಡೆ ಜಲಾವೃತವಾಗಿದ್ದು, ಮರಗಳು ಧರೆಗುರುಳಿ ಬಿದ್ದಿವೆ. ಚಂಡಮಾರುತದಿಂದ ಭಾರೀ ಮಳೆಯಾಗುತ್ತಿದ್ದು,ಅನೇಕ ತಗ್ಗು ಪ್ರದೇಶಗಳು ಜಲಾವೃತವಾಗಿವೆ. ರಸ್ತೆಗಳು ನೀರಿನಿಂದ ತುಂಬಿ ವಾಹನ ಸವಾರರು ಪರದಾಡುವಂತಾಗಿದೆ. ಎಗ್ಮೋರ್‌ನಲ್ಲಿ ಬೃಹತ್ ಗಾತ್ರದ ಮರವೊಂದು ಉರುಳಿ ಬಿದ್ದ ಪರಿಣಾಮ ಸಮೀಪದಲ್ಲಿದ್ದ ಪೆಟ್ರೋಲ್ ಬಂಕ್‌ವೊಂದು ಹಾನಿಯಾಗಿರುವ ವಿಡಿಯೋ ವೈರಲ್ ಆಗಿದೆ. ಚೆನ್ನೈ ಟಿ ನಗರದಲ್ಲಿ ಗೋಡೆಯೊಂದು ಕುಸಿದು ಬಿದ್ದ ಪರಿಣಾಮ ಅಲ್ಲೇ ಪಾರ್ಕಿಂಗ್ ಮಾಡಲಾಗಿದ್ದ ಮೂರು ಕಾರುಗಳಿಗೆ ತೀವ್ರ ಹಾನಿಯಾಗಿದೆ. ಮಾಂಡೌಸ್' ಚಂಡಮಾರುತ ಪೀಡಿತ ಕಾಸಿಮೇಡು ಪ್ರದೇಶಕ್ಕೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಭೇಟಿ ನೀಡಿ, ಸಂತ್ರಸ್ತರಿಗೆ ಆಹಾರ ಸಾಮಗ್ರಿ ವಿತರಿಸಿದರು.

ಮಾನವೀಯತೆ ಅಡ್ಡ ಹೆಸರೇ ಭಾರತೀಯತೆ

ನಟ ರಮೇಶ್ ಅರವಿಂದ್ ಬಣ್ಣನೆ

ಮೈಸೂರು, ಡಿ.10(ಎಸ್‌ಬಿಡಿ)- ಮಾನವೀಯತೆಯ ಅಡ್ಡ ಹೆಸರೇ ಭಾರತೀಯತೆ ಎಂದು ನಟ, ನಿರ್ದೇಶಕ ರಮೇಶ್ ಅರವಿಂದ್ ಅಭಿಪ್ರಾಯಿಸಿದರು.

ಮನುಷ್ಯನ ರಕ್ತಕ್ಕಿಂತ ಅಮೂಲ್ಯವಾದದ್ದು ಮತ್ತೊಂದಿಲ್ಲ. ಅದನ್ನು ನಾವು ಯಾವ ಕಾರಣಕ್ಕಾದರೂ ಚೆಲ್ಲಲು ಬಿಡಬಾರದು. ಅದೇ ನಿಜವಾದ ಮಾನವೀಯತೆ. ಆ ಮಾನವೀಯತೆಯ ಅಡ್ಡ ಹೆಸರೇ ಭಾರತೀಯತೆ. ಅದನ್ನು ನಮ್ಮ ವೃತ್ತಿ, ಸಂಬಂಧ, ಜೀವನ ಎಲ್ಲಾ ರೀತಿಯಲ್ಲೂ ನಾವು ಪ್ರಕಟಿಸಬೇಕು ಎಂದು ಆಶಿಸಿದರು.

'ಯು ಆರ್ ಹಿಯರ್(ನೀವು ಇಲ್ಲಿದ್ದೀರಿ)' ಎನ್ನುವುದೇ ಭಾರತೀಯತೆ. ಪರಿಸರದಲ್ಲಿ ನಡೆಯುತ್ತಿರುವ ವಿಷಯಗಳು, ನಮ್ಮ ಪರಂಪರೆ, ಅನುಭವ, ಎಲ್ಲವೂ ಸೇರಿ ಹುಟ್ಟುವ ಭಾವನೆಯೇ ಭಾತೀಯತೆ. ಯಾವುದೇ ರಾಜ್ಯದ ವ್ಯಕ್ತಿಗೆ ಕೈ ಮುಗಿದು ನಮಸ್ಕಾರ ಎಂದರೆ ನೀವು ಅವನೊಳಗಿರುವ ದಿವ್ಯಶಕ್ತಿಯನ್ನು ಗೌರವಿಸುವುದು ತಿಳಿಯುತ್ತದೆ. ನಾವೆಲ್ಲಾ ಗೊತ್ತಿಲ್ಲದೆ ಒಬ್ಬರನ್ನೊಬ್ಬರ ಕೈ ಹಿಡಿದಿದ್ದೀವಿ. ಈ ಅದ್ಭುತ ಬಂಧನವೇ ಭಾರತೀಯತೆ. ನಾವೆಲ್ಲಾ ಬೇರೆ ಬೇರೆ ದಾರಗಳಾದರೂ ನಾವೆಲ್ಲಾ ಸೇರಿ ರಾಷ್ಟ್ರಧ್ವಜ ಆಗುತ್ತೇವೆಂಬ ಭಾವನೆಯೇ ಭಾರತೀಯತೆ. ಹೀಗೆ ಹಲವು ರೀತಿಯಲ್ಲಿ ಭಾರತೀಯತೆಯನ್ನು ವಿಶ್ಲೇಷಿಸಿದರು.

ಒಬ್ಬ ನಟನ ಜೀವನವನ್ನು 'ಒಂದೇ ಜೀವಿತಾವಧಿಯಲ್ಲಿ ನೂರು ಜೀವನ' ಎನ್ನುತ್ತಾರೆ. ನಿಮ್ಮೆಲ್ಲರ ಆಶೀರ್ವಾದದಿಂದ ನನಗೂ ಆ ವೃತ್ತಿ ದಕ್ಕಿದೆ. ಬಹುರೂಪಿಯಲ್ಲಿ ವಿವಿಧ ರಾಜ್ಯಗಳ ನಾಟಕಗಳ ಪ್ರದರ್ಶನದ ಮೂಲಕ ಜ್ಞಾನ ವಿನಿಮಯ ಸಾಧ್ಯವಾಗಿದೆ. ಒಂದು ತಲೆಗಿಂತ 2 ತಲೆ ಸೇರಿ ಮಾಡುವ ಕೆಲಸ ಪರಿಣಾಮಕಾರಿಯಾಗಿರುತ್ತದೆ. ಎರಡೂ ತಲೆಗಳೂ ಶ್ರೇಷ್ಠವಾಗಿದ್ದರೆ 1+1=2 ಅಲ್ಲ ವಂಡರ್(ಅದ್ಭುತ) ಆಗುತ್ತದೆ. ಅಂತಹ ಸಾಧ್ಯತೆಗಳು ಬಹುರೂಪಿಯಲ್ಲಿ ಆಗುವ ಸಾಧ್ಯತೆಗಳಿವೆ. ರಂಗಾಯಣ ರಂಗ ಚಳುವಳಿ ಕೇಂದ್ರವಾಗಿ ಇನ್ನಷ್ಟು ಪ್ರತಿಭಾನ್ವಿತರನ್ನು ಸಮಾಜಕ್ಕೆ ನೀಡುವಂತಾಗಲಿ ಎಂದು ನುಡಿದರು.

ರಂಗಾಯಣದಲ್ಲಿ ರಾಷ್ಟ್ರೀಯತೆ ಕಟ್ಟುವ ಕೆಲಸವನ್ನು ಅಡ್ಡಿ-ಆತಂಕದ ನಡುವೆಯೂ ಮಾಡಿದ್ದೇನೆ

● ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಭಾವೋದ್ವೇಗದ ಮಾತು

● ಅಧಿಕಾರ ವಹಿಸಿಕೊಂಡಂದಿನಿಂದ ಎದುರಾದ ಸವಾಲುಗಳ ಸಿಎಂ ಮುಂದೆ ಅನಾವರಣ


ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಹಲವು ಗಣ್ಯರು.

ಮೈಸೂರು, ಡಿ.10(ಎಸ್‌ಬಿಡಿ)-ರಂಗಾಯಣದಲ್ಲಿ ರಾಷ್ಟ್ರೀಯತೆ ಕಟ್ಟುವ ಆಶಯದೊಂದಿಗೆ ಕೆಲಸ ಮಾಡಿದ್ದೇನೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

ಕಲಾಮಂದಿರದಲ್ಲಿ ನಡೆದ ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಬಹುರೂಪಿಗೆ ಹಿಂದೆ ಮುಖ್ಯಮಂತ್ರಿಯಾಗಿದ್ದ ಎಸ್.ಆರ್.ಬೊಮ್ಮಾಯಿ ಅವರು ಬಂದಿದ್ದರು. ಈಗ ಅವರ ಪುತ್ರ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಬಂದಿದ್ದಾರೆ. ನಾಡಿನ ದೊರೆ ಸಾಂಸ್ಕೃತಿಕ ಸಂಸ್ಥೆಗೆ ಭೇಟಿ ನೀಡಬೇಕೆನ್ನುವ ಆಸೆ ಇಂದು ತೀರಿತು. ಇಂದೇ ನನ್ನನ್ನು ಮನೆಗೆ ಕಳುಹಿಸಿದರೂ ತೊಂದರೆಯಿಲ್ಲ ಎಂದರು.

1989ರ ಮಕರ ಸಂಕ್ರಾಂತಿಯ ದಿನ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ, ರಂಗಕರ್ಮಿ ಎಂ.ಪಿ.ಪ್ರಕಾಶ್ ಸಚಿವರಾಗಿದ್ದರು. ಆಗ ರಂಗಭೀಷ್ಮ ಬಿ.ವಿ.ಕಾರಂತರಿಗಾಗಿ ರಂಗಾಯಣ ರೂಪಗೊಂಡಿತು. 24 ಕಲಾವಿದರ ತಂಡದೊಂದಿಗೆ 6 ವರ್ಷ ಅವರು ಕನಸು ಕಟ್ಟಿದರು. ನಂತರ ಕಾಂಗ್ರೆಸ್ ಅಧಿಪತ್ಯದಿಂದಾಗಿ ರಂಗಾಯಣ ಎಡಪಂಥೀಯರ ತೆಕ್ಕೆಗೆ ಬಿತ್ತು. ಕಾರಂತರ ನಂತರ ರಾಜಾರಾಮ್ ಹೊರತುಪಡಿಸಿ ಎಡಪಂಥೀಯ ಚಿಂತಕರೇ ನಿರ್ದೇಶಕರಾದರು. ಸರ್ಕಾರದ ಅನುದಾನ ಪಡೆದು ಸರ್ಕಾರವನ್ನೇ ತೆಗಳುವುದು, ರಾಷ್ಟ್ರೀಯತೆ ಅವಹೇಳನ ಸಾಗಿತು. ಒಂದೇ ಸಿದ್ಧಾಂತವಾದಿಗಳ ಕೇಂದ್ರವಾಯಿತು. ಪಾರದರ್ಶಕತೆ ಮಾಯವಾಗಿತ್ತು. ಆದರೆ ಯಾರೂ ಪ್ರತಿಭಟನೆ ನಡೆಸಲಿಲ್ಲ. ಏಕೆಂದರೆ ಪ್ರತಿಭಟಿಸುವ ಹಕ್ಕು ಆ ಒಂದು ಪಂಥಕ್ಕೆ ಮಾತ್ರ ಇತ್ತು ಎಂದು ಹೇಳಿದರು.

ಸರ್ಕಾರ ನನ್ನನ್ನು 2019ರ ಡಿ.31ಕ್ಕೆ ರಂಗಾಯಣ ನಿರ್ದೇಶಕನಾಗಿ ನೇಮಕ ಮಾಡಿತು. ಅಂದಿನಿಂದಲೇ ನನ್ನನ್ನು ಬಗ್ಗಿಸಲು ಪ್ರಯತ್ನಿಸಿದರು. 4ನೇ ದಿನವೇ ಪ್ರತಿಭಟನೆ ಆರಂಭಿಸಿ ನನ್ನನ್ನು ಚಡ್ಡಿ, ಕೋಮುವಾದಿ ಎಂದು ಜರಿದರು. ಯಾರನ್ನೇ ಅತಿಥಿಯಾಗಿ ಆಹ್ವಾನಿಸಿದರೂ, ಯಾವ ಕಾರ್ಯಕ್ರಮ ಆಯೋಜಿಸಿದರೂ ವಿರೋಧಿಸಿ ಕಾರ್ಯಪ್ಪನನ್ನು ವಜಾಗೊಳಿಸಿ ಎಂದು ಕೂಗಿದರು. ಒಳಗೂ ಕಿರುಕುಳ, ಹೊರಗೂ ಪ್ರತಿಭಟನೆ ಎದುರಿಸಿದೆ. ಅವರು ಹೇಳಿದಂತೆ ಕೇಳಿಕೊಂಡು, ನಾನು ತೆಪ್ಪಗಿರಬೇಕೆಂದು ನಿರೀಕ್ಷಿಸಿದ್ದರು. ಆದರೆ ನಾನು ಮಾರ್ಷಲ್ ಕುಟುಂಬದಿಂದ ಬಂದವನು, ಇಬ್ಬರು ಸಹೋದರರು ಸೈನ್ಯದಲ್ಲಿದ್ದಾರೆ. ನನ್ನ ಪತ್ನಿಯ ತಂದೆಯೂ ಸೇನಾಧಿಕಾರಿ ಎಂದು ಅವರಿಗೆ ಗೊತ್ತಿರಲಿಲ್ಲ ಎಂದರು.

ನಾನು ಸ್ವಯಂ ಸೇವಕನಾಗಿ ಕೆಲಸ ಮಾಡಿದೆ. ಅಡ್ಡಿಗಳಿಗೆ ಸೆಡ್ಡು ಹೊಡೆದು ಚಕ್ರವ್ಯೂಹದಲ್ಲಿ ಸಿಕ್ಕ ಅಭಿಮನ್ಯುವಿನಂತೆ ಹೋರಾಡಿದೆ. ಕೊರೊನಾ ಮಾರ್ಗಸೂಚಿ ಅನುಸರಿಸಿ ನಿರಂತರ ಕಾರ್ಯಕ್ರಮ, 'ಪರ್ವ' ನಾಟಕ ಮಹಾಪ್ರಯೋಗದಲ್ಲಿ ಯಶಸ್ವಿಯಾದೆ. ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಚಿವರಾಗಿದ್ದ ಸಿ.ಟಿ.ರವಿ ಬೆಂಬಲದ ಶ್ರೀರಕ್ಷೆಯಿಂದ ಬಗ್ಗದೆ-ಕುಗ್ಗದೆ ಕೆಲಸ ಮಾಡಿದೆ. ಹೊಸ ಜನ ರಂಗಾಯಣಕ್ಕೆ ಬಂದರು. ಹಸಿರು, ಸ್ವಚ್ಛ ರಂಗಾಯಣ ಮಾಡಿದೆ. ಮನೆ ಮರೆತು ಸರ್ಕಾರಿ ಸಂಬಳ, ಭತ್ಯೆ, ಕಾರು ಬಿಟ್ಟು ಬೆಳಗ್ಗೆಯಿಂದ ರಾತ್ರಿವರೆಗೆ ಕೆಲಸ ಮಾಡಿದೆ. ನನ್ನ ಚಿಂತನೆ ರಂಗಾಯಣದಲ್ಲಿ ರಾಷ್ಟ್ರೀಯತೆ ಕಟ್ಟುವುದು. ಇದಕ್ಕೆ ಬದ್ಧನಾಗಿ ಆರ್ಥಿಕತೆ ಭದ್ರಗೊಳಿಸಿ, ಪಾರದರ್ಶಕವಾಗಿ ದುಡಿದೆ. ನಾನೂ ತಿಂದಿಲ್ಲ, ಸಾಧ್ಯವಾದಷ್ಟು ಇತರರನ್ನೂ ತಿನ್ನಲು ಬಿಟ್ಟಿಲ್ಲ. ಭಾರತವೆಂದರೆ ಕೇವಲ ನೆಲವಲ್ಲ, ಅದು ನಮ್ಮ ಮಾತೆ. ಅನೇಕ ಭಾಷೆ, ಧರ್ಮ, ಜಾತಿ ಜನಾಂಗಗಳ ಏಕ ಸಮೂಹ. ವಿವಿಧತೆಯಲ್ಲಿ ಏಕತೆಯೇ ನಮ್ಮ ಶಕ್ತಿ. ಈ ನೆಲದ ಮಹಾನ್ ಪುರುಷರನ್ನು, ದಿವ್ಯ ಪರಂಪರೆಯನ್ನು ಜನ ನಿರಾಕರಿಸುವಂತಹವರ ನಡುವೆ ರಾಷ್ಟ್ರೀಯತೆ ಗಟ್ಟಿಗೊಳಿಸುವುದು ಅನಿವಾರ್ಯ ಎಂದು ಅಭಿಪ್ರಾಯಿಸಿದರು.

ಅಡ್ಡಂಡ ಸಿ.ಕಾರ್ಯಪ್ಪನವರು ಮಾತನಾಡುವಾಗ ಒಮ್ಮೆ ಸಿಎಂ ಅದೇನೋ ಕಣ್ಸನ್ನೆ ಮಾಡಿದರು. ಆದರೆ ಅದನ್ನು ಗಮನಿಸದೆ ಮಾತು ಮುಂದುವರೆಸಿದ ಕಾರ್ಯಪ್ಪ, ಕೆಲ ಹೊತ್ತಿನ ನಂತರ 'ಮುಖ್ಯಮಂತ್ರಿಗಳೇ ನಿಷ್ಠೂರವಾಗಿ ಮಾತನಾಡುವುದು ನನ್ನ ಸ್ವಭಾವ ದಯವಿಟ್ಟು ಕ್ಷಮಿಸಿ...' ಎಂದರು. ಮುಖ್ಯಮಂತ್ರಿಗಳು ಭಾಷಣ ಮುಗಿಸಿದ ವೇಳೆ ಅಡ್ಡಂಡ ಕಾರ್ಯಪ್ಪನವರನ್ನು ನಿರ್ದೇಶಕರಾಗಿ ಮುಂದುವರೆಸುವಂತೆ ನೆರೆದಿದ್ದವರಲ್ಲಿ ಕೆಲವರು ಮನವಿ ಮಾಡಿದರು.

ಮೆಕಾಲೆ ಶಿಕ್ಷಣ ನೀತಿಯಿಂದ ನಮ್ಮತನ ಕಳೆದುಕೊಳ್ಳುವ ಆತಂಕವಿದೆ

ಬಹುರೂಪಿಯ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಚಿಂತಕಿ ಡಾ.ವಿ.ಬಿ.ಆರತಿ ಅಭಿಮತ



ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಚಿಂತಕಿ ಡಾ.ಎಸ್.ಆರ್.ಲೀಲಾ ಉದ್ಘಾಟಿಸಿದರು. ಚಿತ್ರದಲ್ಲಿ ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯಅತಿಥಿಯಾಗಿ ನಾಟಕಕಾರ ಎಸ್.ಎನ್.ಸೇತುರಾಂ, ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ, ವಿಚಾರ ಸಂಕಿರಣದ ಸಂಚಾಲಕ ಎಸ್.ರಾಮನಾಥ್ ಇದ್ದಾರೆ.

ಮೈಸೂರು,ಡಿ.10(ಎಂಟಿವೈ)-ಬ್ರಿಟಿಷರ ಕಾಲದಲ್ಲಿ ಜಾರಿಗೆ ತಂದ ಶಿಕ್ಷಣ ತಜ್ಞ ಮೆಕಾಲೆ ಅವರ ಶಿಕ್ಷಣ ನೀತಿಯಿಂದಾಗಿ ಇಂದು ನಾವು ನಮ್ಮತನವನ್ನು ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದೇವೆ ಎಂದು ಚಿಂತಕಿ ಡಾ.ವಿ.ಬಿ.ಆರತಿ ಅಭಿಪ್ರಾಯಪಟ್ಟಿದ್ದಾರೆ.

ರಂಗಾಯಣದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಶನಿವಾರ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಪ್ರಾಚೀನ ಸಂಸ್ಕೃತಿ ಮತ್ತು ಭಾರತೀಯತೆ' ವಿಷಯ ಕುರಿತು ಮಾತನಾಡಿದ ಅವರು, ಮೆಕಾಲೆ ಶಿಕ್ಷಣದಿಂದ ನಮ್ಮ ದೇಶವನ್ನು ನಾವೇ ದ್ವೇಷಿಸುವ ವಾತಾವರಣ ನಿರ್ಮಾಣ ಮಾಡಿದೆ. ಈ ಶಿಕ್ಷಣ ನೀತಿಯಿಂದ ನಮ್ಮತನವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ತಾಯಿ ಬೇರು ಗಟ್ಟಿಯಾಗಿದ್ದರೆ ಮಾತ್ರ ಮರ ಸದೃಢವಾಗಿ ಬೆಳೆಯಲು ಸಾಧ್ಯ. ನಮ್ಮ ಪ್ರಾಚೀನ ಭಾರತದ ಬೇರನ್ನು ಮರೆಯಬಾರದು. ನಮ್ಮ ಬೇರು ಗಟ್ಟಿಯಾಗಿದ್ದರೆ, ಇನ್ನಷ್ಟು ಎತ್ತರಕ್ಕೆ ಬೆಳೆಯುತ್ತೇವೆ. ಬೇರನ್ನು ಮರೆತರೆ ಟೊಳ್ಳಾಗಿ ಬಿದ್ದು ಹೋಗುತ್ತೇವೆ ಎಂದು ವಿಷಾದಿಸಿದರು.

ಪರಕೀಯರು ದೇವಸ್ಥಾನ, ಮಠಗಳನ್ನು ನಾಶ ಮಾಡಿದ ನಂತರ ನಮ್ಮ ವ್ಯವಸ್ಥೆಯನ್ನು ನಾಶ ಮಾಡಿದರು. ಇಂತಹ ದಾಳಿಯ ನಡುವೆಯೂ ನಮ್ಮ ಸಂಸ್ಕೃತಿ ಉಳಿದಿದೆ. ನಮ್ಮ ಸಂಸ್ಕೃತಿ ಹಲವು ಬೇರುಗಳಿಂದ ಕೂಡಿದ್ದು, ಒಂದು ಬೇರು ನಾಶವಾದರೂ ಮತ್ತೊಂದು ಬೇರಿನ ಮೂಲಕ ಸಂಸ್ಕೃತಿ ಚಿಗುರುತ್ತದೆ. ಭಾರತೀಯ ಸಂಸ್ಕೃತಿಯನ್ನು ಹಂಗಿಸಲು ಸಹ ಫಂಡಿಂಗ್ ಬರುತ್ತಿದೆ. ಆದರೂ ಭಾರತೀಯ ಸಂಸ್ಕೃತಿ ಉಳಿದು, ಬೆಳೆಯಲು ಕಾರಣ ಭಾರತೀಯ ಸಂಸ್ಕೃತಿಯಲ್ಲಿರುವ ಮೌಲ್ಯವೇ ಕಾರಣ. ನಮ್ಮ ಸಂಸ್ಕೃತಿ ಖಡ್ಗದಿಂದ ಅರಳಿಲ್ಲ, ತನ್ನದೇ ಆದ ಸತ್ವದಿಂದ ಅರಳಿದೆ. ದೇಶಕ್ಕೆ ಲೂಟಿ ಮಾಡಲು ಬಂದವರಿಗೆ ದೇಶದ ಸಂಸ್ಕೃತಿಯ ಮೌಲ್ಯ ಅರ್ಥವಾಗುವುದಿಲ್ಲ ಎಂದರು.

ಮಹಾಭಾರತ ಜೀವನ ದರ್ಶನ ಮಾಡಿಸುತ್ತದೆ. ಹಾಗಾಗಿ ಮಹಾಭಾರತ ವನ್ನು ಓದಬೇಕು. ಮೌಲ್ಯವಿಲ್ಲದ ಪರಕೀಯರಿಗೆ ನಾವು ಸ್ಥಾನಮಾನ ನೀಡಿದ ಪರಿಣಾಮ ದೇಶದ ಜನರು ಸಮಸ್ಯೆಗೆ ಸಿಲುಕಿದರು. ಹಾಗಾಗಿ ನಮ್ಮ ಮೌಲ್ಯವನ್ನು ಸರಿಯಾದ ಸಮಯಕ್ಕೆ ಸರಿಯಾಗಿ ಬಳಕೆ ಮಾಡುವುದನ್ನು ಕಲಿಯಬೇಕು. ದೇಶವನ್ನು ಹಾಗೂ ದೇಶದ ಜನರನ್ನು ಉಳಿಸಿ ಬೆಳೆಸುವ ಕಾರ್ಯ ಆಗಬೇಕು. ಜಪಾನಿಯರು ಹೊರ ದೇಶದ ವಸ್ತುಗಳನ್ನು ಖರೀದಿಸುವುದು ಕಡಿಮೆ. ಅದೇ ರೀತಿ ನಾವು ಮಾಲ್ ಸಂಸ್ಕೃತಿಯಿಂದ ಹೊರಬಂದು ಸ್ಥಳೀಯ ವ್ಯಾಪಾರಸ್ಥರಿಂದ ಖರೀದಿಸುವ ಮನಸ್ಸು ಮಾಡಬೇಕು ಎಂದು ಹೇಳಿದರು.

ಇದಕ್ಕೂ ಮುನ್ನ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಚಿಂತಕಿ ಡಾ. ಎಸ್.ಆರ್.ಲೀಲಾ ಉದ್ಘಾಟಿಸಿ ಮಾತನಾಡಿ, ಭಾರತೀಯ ಶೀರ್ಷಿಕೆಯಲ್ಲಿ ದೇಶದ ಸಂಸ್ಕೃತಿ ಹಾಗೂ ದೇಶಭಕ್ತಿಯನ್ನು ಬಿಂಬಿಸುವಲ್ಲಿ ಈ ಬಾರಿಯ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಹೆಜ್ಜೆ ಹಾಕುತ್ತಿರುವುದು ಶ್ಲಾಘನೀಯ. ವೈವಿಧ್ಯಮಯ ಕಾರ್ಯಕ್ರಮದ ಮೂಲಕ ಜನರ ಗಮನ ಸೆಳೆಯುತ್ತಿದೆ. ವಿಚಾರ ಸಂಕಿರಣದಲ್ಲಿ ಭಾರತೀಯತೆ, ಭಾರತದ ವೈವಿಧ್ಯತೆ ಬಗ್ಗೆ ಮಹತ್ತರ ಮಾಹಿತಿ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯಲ್ಲಿ ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ವಹಿಸಿದ್ದರು. ಮುಖ್ಯ ಅತಿಥಿಯಾಗಿ ನಾಟಕಕಾರ ಎಸ್.ಎನ್.ಸೇತುರಾಂ, ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ, ವಿಚಾರ ಸಂಕಿರಣದ ಸಂಚಾಲಕ ಎಸ್.ರಾಮನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಇನ್ನೂ ನಿರ್ಮಾಣವಾಗಲಿಲ್ಲ...

ಮಾರ್ಗದಲ್ಲಿ ನಾವು ನಡೆಯುತ್ತಿದ್ದೇವೆಯಾ, ಅವರ ಆಶಯಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆಯೇ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಎಂದರು.

ಕಾಯಕ ಸಂಸ್ಕೃತಿಯನ್ನು ತಿಳಿಸಿಕೊಟ್ಟ ಬಸವಣ್ಣನವರು ದಾಸೋಹ ಪರಂಪರೆಯನ್ನೂ ಹುಟ್ಟು ಹಾಕಿಕೊಟ್ಟರು. ಕಾಯಕ ಮಾಡು, ಅದರಿಂದ ಬಂದಂತಹ ಫಲವನ್ನು ಎಲ್ಲರೊಂದಿಗೂ ಹಂಚಿಕೊಳ್ಳುವಂತೆ ತಿಳಿಸಿಕೊಟ್ಟಿದ್ದರು. ಸಮಾನತೆಯ ಉತ್ತಮ ಸಮಾಜ ನಿರ್ಮಾಣ ಮಾಡಬೇಕಾದ ಅಗತ್ಯತೆಯನ್ನು ಪ್ರತಿಪಾದಿಸಿಕೊಂಡು ಬಂದಿದ್ದರು. ಆದರೆ ಅವರು ಕಂಡಂತಹ ಸಮಾಜ ಇನ್ನೂ ನಿರ್ಮಾಣವಾಗಿಲ್ಲ. ಸಮಾಜದಲ್ಲಿ ಇನ್ನೂ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹೀಗೆ ಅನೇಕ ಕ್ಷೇತ್ರಗಳಲ್ಲಿ ಅಸಮಾನತೆಗಳು ಇನ್ನೂ ಜೀವಂತವಾಗಿ ಉಳಿದುಕೊಂಡಿವೆ. ಎಲ್ಲರ ಆರ್ಥಿಕ ಅಭಿವೃದ್ಧಿಯಾಗದೆ ಸಮಾನತೆ ಸಮಾಜ ನಿರ್ಮಾಣ ಸಾಧ್ಯವಿಲ್ಲ, ಎಲ್ಲರ ಸಮಗ್ರ ಅಭಿವೃದ್ಧಿಯಾಗುವುದಿಲ್ಲ. ಹಾಗಾಗಿ ಕಾಯಕದಲ್ಲಿ ಬಂದಂತಹ ಫಲವನ್ನು ಎಲ್ಲರೂ ಹಂಚಿಕೊಂಡಾಗ ಮಾತ್ರ ಎಲ್ಲರ ಅಭಿವೃದ್ಧಿ ಸಾಧ್ಯವಾಗುತ್ತದೆ. ಅದಕ್ಕಾಗಿ ಕಾಯಕ, ದಾಸೋಹ ಸಮಾಜ ನಿರ್ಮಾಣವಾಗಬೇಕಾಗಿದೆ. ದಾಸೋಹ ಸಂಸ್ಕೃತಿ ಮುಂದುವರಿಯಬೇಕು, ಎಲ್ಲವನ್ನು ಇದ್ದವರು ನೀಡಬೇಕು, ಹಂಚಿಕೊಂಡು ಎಲ್ಲರೂ ಬದುಕುವಂತಾಗಬೇಕು ಎಂದು ತಿಳಿಸಿದರು. ಕನ್ನಡ ಸಾಹಿತ್ಯಕ್ಕೆ ವಚನಕಾರರು, ದಾಸರು ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಆ ಮೂಲಕ ಕನ್ನಡ ಭಾಷೆ, ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ವಚನಸಾಹಿತ್ಯ, ದಾಸರ ಸಾಹಿತ್ಯಗಳು ಕನ್ನಡ ಭಾಷೆಗೆ, ಎಲ್ಲರ ಬದುಕಿಗೆ ಕೊಡುಗೆ ನೀಡಿವೆ. ಮೌಲಿಕವಾದ ಜೀವನದ ಮಾರ್ಗಗಳನ್ನು ಬಹಳ ಸುಲಭವಾಗಿ ನೀಡಿವೆ. ಪ್ರಸ್ತುತ ಎಲ್ಲರೂ ಎದುರಿಸುತ್ತಿರುವ ಸಮಸ್ಯೆಗಳಿಗೆ ವಚನಗಳಲ್ಲಿ ಪರಿಹಾರವಿದೆ, ಉತ್ತರವಿದೆ. ಅದನ್ನು ಅರ್ಥೈಸಿಕೊಂಡು, ಅಳವಡಿಸಿಕೊಳ್ಳಬೇಕು. ಸಕಲ ಜೀವಾತ್ಮಗಳಿಗೆ ಲೇಸನ್ನು ಬಯಸಬೇಕು ಎಂದು ಸಲಹೆ ನೀಡಿದರು.

ಮಹಿಳೆಯರಿಗೆ ಸಮಾನತೆಯನ್ನು ನೀಡಬೇಕು. ಅಕ್ಕ ಮಹಾದೇವಿ ಕೂಡ ಇದನ್ನೇ ಪ್ರತಿಪಾದಿಸಿದ್ದರು. ಕಟು ಸತ್ಯಗಳನ್ನು ಹೇಳಿದ್ದರು. ಲಿಂಗಪೂಜೆ ಮಾಡುವುದರಿಂದ ಭಗವಂತನೊಂದಿಗೆ ನೇರ ಸಂಬಂಧವನ್ನು ಬೆಳೆಸಬಹುದು. ಅಂತಹದೊಂದು ಪರಂಪರೆಯನ್ನು ಬಸವಾದಿ ಶರಣರು ಹಾಕಿಕೊಟ್ಟಿದ್ದಾರೆ. ಅಂತಹ ಶ್ರೇಷ್ಠ ಪರಂಪರೆಯನ್ನು ಸರಿಯಾದ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು. ಎಲ್ಲರೊಂದಿಗೆ ಕೂಡಿ, ಪ್ರೀತಿ, ವಿಶ್ವಾಸದಿಂದ ಬದುಕು ಮಾಡಿದರೆ ಸಮಾಜ ನೆಮ್ಮದಿಯಾಗಿರುತ್ತದೆ. ಗುಣ, ಧರ್ಮ, ಆದರ್ಶಗಳಿಂದ ಶ್ರೀಮಂತರಾಗಬೇಕೇ ವಿನಃ ಹಣದಿಂದ ಅಲ್ಲ. ಪರೋಪಕಾರಿ ಕೆಲಸಗಳನ್ನು ಮಾಡಿದ್ದರಿಂದಲೇ ನಾವು ಈಗಲೂ ಮೈಸೂರು ಮಹಾರಾಜರನ್ನು ಸ್ಮರಿಸಿಕೊಳ್ಳುತ್ತಿದ್ದೇವೆ. ಹಾಗಾಗಿ ಎಲ್ಲರೂ ಬಸವ ಪಥದಲ್ಲಿ, ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವ ಮೂಲಕ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು. ಇದೇ ವೇಳೆ ಸ್ಮರಣ ಸಂಚಿಕೆಯನ್ನು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಬಿಡುಗಡೆ ಮಾಡಿದರು. ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮಿ ವಹಿಸಿದ್ದರು. ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ, ಪ್ರಾದೇಶಿಕ ಆಯುಕ್ತ ಪ್ರಕಾಶ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ರಮೇಶ್, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಲ್.ಎಸ್. ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಡಿ.ಎ.ಮಹದೇವಸ್ವಾಮಿ, ಖಜಾಂಚಿ ಕೆ.ಕೆ.ಖಂಡೇಶ್, ಹಿನಕಲ್ ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಸೋಲುವುದು ಖಚಿತ

ಪರಿಣಾಮಕಾರಿಯಾಗಿ ಮಾಡಬೇಕಿದೆ. ಸಂಘಟನೆ ದೃಷ್ಟಿಯಿಂದ ಎಲ್ಲ ತಯಾರಿ ನಡೆಸುತ್ತಿದ್ದೇವೆ. ಈ ಬಾರಿ ಹಳೇ ಮೈಸೂರು ಭಾಗಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಈ ಭಾಗದಲ್ಲಿ ಅತಿ ಹೆಚ್ಚಿನ ಸ್ಥಾನಗಳನ್ನು ನಾವು ಗೆಲ್ಲುತ್ತೇವೆ. ಅದಕ್ಕಾಗಿ ಎಲ್ಲ ತಯಾರಿ ಸಹ ಮಾಡಲಾಗುತ್ತಿದೆ ಎಂದರು. ಅವಧಿಗೆ ಮುನ್ನವೇ ವಿಧಾನಸಭಾ ಚುನಾವಣೆ ನಡೆಯಲಿದೆಯೇ ಎಂಬ ಪ್ರಶ್ನೆಗೆ ಸಿಡಿಮಿಡಿಗೊಂಡ ಸಿಎಂ, ಇಂತಹವೆಲ್ಲ ನಿಮಗೆ ಯಾರು ಹೇಳುತ್ತಾರೆ ಎಂದು ತೀಕ್ಷ್ಣವಾಗಿ ಉತ್ತರಿಸಿ ನಿರ್ಗಮಿಸಿದರು.

ರಂಗೋತ್ಸವಕ್ಕೆ ಸಿಎಂ ವಿದ್ಯುಕ್ತ ಚಾಲನೆ

ಹುಡುಕಾಟ, ತರಬೇತಿ, ಕಲಾ ಪ್ರದರ್ಶನ, ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಹೊಸ ವಿಚಾರ ಗಳನ್ನು ಬಿತ್ತರಿಸುವ ಕಾರ್ಯವೂ ಆಗಬೇಕು. ಈ ರಂಗಾಯಣ, ನಾಟಕ ಎಲ್ಲವೂ ಪ್ರಾಚೀನ ಕಾಲದಿಂದ ವಿಚಾರಗಳನ್ನು ಅಭಿನಯದ ಮೂಲಕ ಸುಲಭವಾಗಿ ಜನರಿಗೆ ತಿಳಿಸು ವಂತಹ ಮಾಧ್ಯಮ. ಪ್ರತಿಯೊಂದು ಪಾತ್ರಕ್ಕೂ ವೈಶಿಷ್ಟ್ಯತೆ ಇರುತ್ತದೆ. ಆದರೆ ಯಾವು ದನ್ನು ಉದ್ವೇಗದಿಂದ ಹಾಗೂ ಯಾವು ದನ್ನು ಸೂಕ್ಷ್ಮತೆಯಿಂದ ಪರಿಣಾಮಕಾರಿ ಯಾಗಿ ಹೇಳಬೇಕು ಎನ್ನುವುದು ಮುಖ್ಯ ವಾಗುತ್ತದೆ ಎಂದರು.

ಸಹಜ ಜೀವನ ಕಷ್ಟ: ಬದುಕಿನಲ್ಲಿ ಸಹಜ ವಾಗಿರುವುದು ತುಂಬಾ ಕಷ್ಟ, ಯಾವಾಗಲೂ ಜಾಗೃತವಾಗಿರುತ್ತೇವೆ. ನಾನು ಮುಖ್ಯ ಮಂತ್ರಿ ಏನು ಮಾತನಾಡಬೇಕು, ಮಾತನಾಡಬಾರದು, ವೇಷಭೂಷಣ, ಹಾವ ಭಾವ ಹೇಗಿರಬೇಕು.

ಹೀಗೆ ನಾವೇ ಕಟ್ಟುಪಾಡುಗಳನ್ನು ವಿಧಿಸಿಕೊಂಡು ನಿರ್ಬಂಧಿತವಾದ ಬದುಕು ನಡೆಸುತ್ತಿದ್ದೇವೆ. ಮುಕ್ತವಾಗಿ ಬದುಕಲು ಸಾಧ್ಯವಾಗುತ್ತಿಲ್ಲ. ಹಾಗೆಯೇ ಜೀವನದಲ್ಲಿ ಮುಗ್ಧತೆಯನ್ನು ಉಳಿಸಿಕೊಳ್ಳುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಮುಗ್ಧತೆಯ ಜಗತ್ತಿನಲ್ಲಿ ನಮಗಾಗಿ, ಜನರಿಗಾಗಿ ಹಾಗೂ ಸಮಾಜಕ್ಕಾಗಿ ಬಹಳಷ್ಟು ಕೃತಕ ಭಾವನೆಗಳನ್ನು ತುಂಬಿದ್ದೇವೆ. ಹೀಗೆ ನೈಜತೆ ಬಿಟ್ಟು ಕೃತಕವಾದ ಪರಿಣಾಮ ಮುಗ್ಧತೆ, ನೈಜ ಕಳೆ, ಜೀವಂತಿಕೆ ಮರೆಯಾಗುತ್ತಿದೆ. ಮುಗ್ಧತೆಯನ್ನು ಕೊನೆವರೆಗೂ ಕಾಪಾಡಿಕೊಳ್ಳುವ ಸಾಧಕರು ಎಂದೂ ಸಂತೋಷವಾಗಿರುತ್ತಾರೆ. ಇನ್ನು ಆತ್ಮಸಾಕ್ಷಿಯಂತೆ ನಡೆದುಕೊಳ್ಳುವುದು ಸುಲಭವಲ್ಲ. ಅದರಲ್ಲೂ ರಾಜಕಾರಣಿಗಳಿಗೆ ಇನ್ನೂ ಕಷ್ಟ, ಕೆಲವೊಮ್ಮೆ ಆಗದ ಕೆಲಸವನ್ನೂ ನೋಡೋಣ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ ಎಂದರು.

ಮಾನವೀಯತೆಯಡಿ ಪ್ರಯೋಗ: ಇಂತಹ ಸತ್ಯವಾದ ವಿಚಾರಗಳನ್ನಿಟ್ಟುಕೊಂಡು ಮಾನವೀಯತೆಯಡಿಯಲ್ಲಿ ರಂಗಾಯಣದಲ್ಲಿ ಪ್ರಯೋಗಗಳಾಗಬೇಕು. ವಾಸ್ತವಾಂಶ ಬಿಟ್ಟು ಇಂದಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಸಮಾಜದ ಲೋಪದೋಷಗಳು, ಅಂಕುಡೊಂಕುಗಳನ್ನು ಎತ್ತಿಹಿಡಿದು ಅವುಗಳನ್ನು ವಾಸ್ತವಾಂಶದ ಹಿನ್ನೆಲೆಯಲ್ಲಿ ಸರಿಪಡಿಸುವಂತಹ ನಾಟಕಗಳು ಆಗಬೇಕು. ಅದು ಸರಿ, ಇದೂ ಸರಿ ಎನ್ನುವ ಗೊಂದಲದಿಂದ ಸ್ಪಷ್ಟತೆ, ನಿಷ್ಠೂರತೆ ಕ್ಷೀಣಿಸಿದೆ. ಪ್ರಸ್ತುತ ನಮ್ಮ ಹತ್ತಿರ ಏನಿದೆಯೋ ಅದು ನಾಗರೀಕತೆ ಹಾಗೂ ನಾವು ಏನಾಗಿದ್ದೇವೆಯೋ ಅದು ಸಂಸ್ಕೃತಿ. ಆದರೆ ನಾಗರೀಕತೆ ಹಾಗೂ ಸಂಸ್ಕೃತಿಯನ್ನು ಬೆರೆಸಿ ಒಂದೇ ಅರ್ಥ ಎಂದು ಭಾವಿಸಿದ್ದೇವೆ. ಹಿಂದೆ ಬೀಸುಕಲ್ಲಿನ ಮುಂದೆ ಕುಳಿತು ಮಹಿಳೆಯರು ತವರನ್ನು ನೆನೆಸಿಕೊಂಡು ಬಾವುಕವಾಗಿ ಹಾಡುತ್ತಿದ್ದರು. ಆದರೆ ಈಗ ಬೀಸುಕಲ್ಲು, ಒನಕೆ, ಒಳಲು ಎಲ್ಲವೂ ಮರೆಯಾಗುವುದರ ಜೊತೆಗೆ ಜೀವನದ ಹಾಡುಗಳೂ ಇಲ್ಲವಾಗಿವೆ. ಆದ್ದರಿಂದ ಆಧುನಿಕತೆಯ ಜೊತೆಗೆ ನಮ್ಮ ಭಾರತೀಯ ಸಂಸ್ಕೃತಿಯನ್ನು ತಿಳಿಸುವಂತಹ ಪ್ರಯತ್ನಗಳು ಹೆಚ್ಚಾಗಬೇಕೆಂದು ಮುಖ್ಯಮಂತ್ರಿಗಳು ಕಿವಿಮಾತು ಹೇಳಿದರು.

ನಟ ರಮೇಶ್ ಬಣ್ಣನೆ: ವೇದಿಕೆಯಲ್ಲಿದ್ದ ನಟ, ನಿರ್ದೇಶಕ ರಮೇಶ್ ಅರವಿಂದ್ ಕಲಾಸಾಧನೆಯನ್ನು ಬಣ್ಣಿಸಿದ ಸಿಎಂ ಬೊಮ್ಮಾಯಿ, ನೈಜ ನಟನೆಯೊಂದಿಗೆ ಭಾವನೆಯನ್ನು ಅಭಿವ್ಯಕ್ತಿಸುವಲ್ಲಿ ರಮೇಶ್ ಪ್ರವೀಣರು. ಇವರು ಎಂತಹ ಕ್ಲಿಷ್ಟ ಪಾತ್ರಗಳಾದರೂ ಸುಲಲಿತವಾಗಿ ನೈಜವಾಗಿ ನಟಿಸುತ್ತಾರೆ. ಹಾಗೆಯೇ ರಮೇಶ್ ಅರವಿಂದ್ ಮುಖದಲ್ಲಿ ಆ ಮುಗ್ಧತೆ ಹಾಗೇ ಉಳಿದುಬಂದಿದೆ. ಇದು ಅವರಿಗೆ ದೇವರು ಕೊಟ್ಟವರ. ಮನಸ್ಸು ಪರಿಶುದ್ಧವಿದ್ದರೆ ಅದು ಕಣ್ಣಿನಲ್ಲಿ ಅಭಿವ್ಯಕ್ತವಾಗುತ್ತದೆ ಎನ್ನುವುದಕ್ಕೆ ಇವರೆ ಸಾಕ್ಷಿ ಎಂದರು.

ರಂಗಾಯಣಕ್ಕೆ ಸರ್ಕಾರದಿಂದ ಸಕಲ ನೆರವು

ಮೈಸೂರು:ಮೈಸೂರು ರಂಗಾಯಣಕ್ಕೆ ಅಗತ್ಯವಾದ ಎಲ್ಲಾ ರೀತಿಯ ನೆರವು ನೀಡಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು. ರಂಗಾಯಣಕ್ಕೆ ಸ್ಥಳದ ಅಭಾವವಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸೇರಿದ 2 ಎಕರೆ ಜಾಗವನ್ನು ಕಬಳಿಸುವ ಯತ್ನ ನಡೆದಿತ್ತು. ಹಾಗಾಗದಂತೆ ತಡೆದು ಕಾಂಪೌಂಡ್ ಹಾಕಿ ಭದ್ರ ಮಾಡಿದ್ದೇವೆ. ದಯವಿಟ್ಟು ಆ ಜಾಗವನ್ನು ರಂಗಾಯಣಕ್ಕೆ ನೀಡಬೇಕು. ಹಾಗೆಯೇ 'ಟಿಪ್ಪು ನಿಜಕನಸುಗಳು' ನಾಟಕದ ಕನಿಷ್ಟ 50 ಪ್ರದರ್ಶನಕ್ಕೆ ಅವಕಾಶವಾಗುವಂತೆ ನೆರವು ನೀಡಬೇಕು. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರಾಸ್ತಾವಿಕ ಭಾಷಣದಲ್ಲಿ ಮನವಿ ಮಾಡಿದ್ದಕ್ಕೆ ಪ್ರತಿಕ್ರಿಯಿಸಿದ ಸಿಎಂ, ರಂಗಾಯಣಕ್ಕೆ ಬೇಕಾದ ಎಲ್ಲಾ ರೀತಿಯ ನೆರವು ನೀಡಲು ಸರ್ಕಾರ ಸಿದ್ಧವಿದೆ. ನಿಮ್ಮ ಕಾಲದಲ್ಲಿ ಧೈರ್ಯವಾಗಿ ಮುಂದೆ ಹೋಗಿ. ಜನರ ಭಾವನೆ, ಸದ್ವಿಚಾರ, ಸಮಸ್ಯೆಗಳು, ಸಮುದಾಯ, ಸಮಾಜ, ದೇಶದ ಆಧಾರದಲ್ಲಿ ಒಳ್ಳೆ ಕೆಲಸಗಳನ್ನು ಮಾಡಿ. ವಿಭಿನ್ನ ಪ್ರಯೋಗಗಳನ್ನು ಮಾಡಿ. ಮೈಸೂರಿನಲ್ಲಿ ಹೊಸತನವಿದೆ. ಇಲ್ಲಿಂದ ನಾನೂ ಸ್ಫೂರ್ತಿ ಪಡೆದುಕೊಂಡು ಹೋಗುತ್ತಿದ್ದೇನೆ ಎಂದರು.

ಜನವರಿ ಮೊದಲ ವಾರ ಟೆಂಡರ್

ಸೌಲಭ್ಯಗಳ ಕಲ್ಪಿಸುವಂತೆ ಅಗತ್ಯ ಮಾಹಿತಿಗಳೊಂದಿಗೆ ಪ್ರಸ್ತಾವನೆ ಸಿದ್ಧಪಡಿಸಿದ ನಂತರ ಡಿಪಿಆರ್ ತಯಾರಿಸಲು ಗ್ಲೋಬಲ್ ಟೆಂಡರ್ ಕರೆಯಿರಿ ಎಂದು ಅವರು ತಿಳಿಸಿದರು. ಶ್ರೀಧರ್ ಅವರ ಸಲಹೆ, ಮಾರ್ಗದರ್ಶನದಂತೆ ಭೂ ಸ್ವಾಧೀನ, ರಸ್ತೆ ನಿರ್ಮಾಣ, ಟೌನ್‌ಶಿಪ್ ಸೇರಿದಂತೆ ಯೋಜನೆಯ ಸಮಗ್ರ ಮಾಹಿತಿಯೊಂದಿಗೆ ತಯಾರಿಸಿದ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಪಡೆದು ಡಿಸೆಂಬರ್ ಅಂತ್ಯದಲ್ಲಿ ಅಥವಾ 2023ರ ಜನವರಿ ಮೊದಲ ವಾರ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲು ಟೆಂಡರ್ ಕರೆಯುತ್ತೇವೆ ಎಂದು ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ತಿಳಿಸಿದರು. ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಚೆನ್ನಕೇಶವ, ನಗರ ಯೋಜಕ ಸದಸ್ಯ ಶೇಷ, ಸಹಾಯಕ ನಿರ್ದೇಶಕ ಯಜ್ಞೇಂದ್ರ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಿರಣ್ ಕುಮಾರ್ ಹಾಗೂ ಇತರರು ಸಭೆಯಲ್ಲಿ ಹಾಜರಿದ್ದರು.

ನಿಮ್ಮ ನಿಮ್ಮ ಭಿನ್ನಾಭಿಪ್ರಾಯದಿಂದ ಪಕ್ಷಕ್ಕೆ ಡ್ಯಾಮೇಜ್ ಮಾಡಬೇಡಿ

ಬಿಜೆಪಿ ಕಾರ್ಯಕರ್ತರು, ಪದಾಧಿಕಾರಿಗಳಿಗೆ ವಿಧಾನಪರಿಷತ್ ಮಾಜಿ ಸದಸ್ಯ ಗಣೇಶ್ ಕಾರ್ಣಿಕ್ ಸಲಹೆ

ಮೈಸೂರು,ಡಿ.10(ಎಂಟಿವೈ)– ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಿ ಬೂತ್‌ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಗಣೇಶ್ ಕಾರ್ಣಿಕ್ ಸಲಹೆ ನೀಡಿದ್ದಾರೆ.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಮಾಧ್ಯಮ–ಮಂಥನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಯ ಹಿನ್ನೆಲೆಯಲ್ಲಿ ಕಾರ್ಯಕರ್ತರು ಮತ್ತು ಮಾಧ್ಯಮ ವಕ್ತಾರರು ತಮ್ಮ ಕರ್ತವ್ಯವನ್ನು ಯಶಸ್ವಿಯಾಗಿ ನಿಭಾಯಿಸಬೇಕು. ಬೂತ್ ಮಟ್ಟದಲ್ಲಿನ ಪದಾಧಿಕಾರಿಗಳು ಜನತೆಯ ಸಮಸ್ಯೆ ಅರಿತುಕೊಳ್ಳಬೇಕು. ಅದೇ ವೇಳೆ ಇತರೆ ಪಕ್ಷಗಳ ಬಗ್ಗೆ ಜನರಲ್ಲಿರುವ ಅಭಿಪ್ರಾಯವನ್ನು ಅರಿತುಕೊಂಡು ಕೆಲಸ ಮಾಡಬೇಕು. ಜನರ ಸಮಸ್ಯೆಗಳನ್ನು ಸ್ಥಳೀಯ ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಡಬೇಕು. ಶಾಸಕರೊಂದಿಗೆ ಮನಸ್ತಾಪವಿದ್ದರೆ ಅದನ್ನು ವರಿಷ್ಠರು, ಜಿಲ್ಲಾ ಹಾಗೂ ನಗರಾಧ್ಯಕ್ಷರ ಗಮನಕ್ಕೆ ತಂದು ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು. ಯಾವುದೇ ಕಾರಣಕ್ಕೂ ಸಣ್ಣಮಟ್ಟ ಸಮಸ್ಯೆ ಹಾಗೂ ಭಿನ್ನಾಭಿಪ್ರಾಯವನ್ನು ದೊಡ್ಡದು ಮಾಡಿ ಪಕ್ಷಕ್ಕೆ ಡ್ಯಾಮೇಜ್ ಮಾಡಬಾರದು. ಮೈಸೂರು ಮತ್ತು ಮಂಡ್ಯ ಭಾಗದಲ್ಲಿ ಬಿಜೆಪಿಗೆ ನೆಲೆ ಇಲ್ಲ ಎಂದು ವಿರೋಧ ಪಕ್ಷದ ನಾಯಕರು ಹೇಳುತ್ತಾರೆ. ಜಗದ ನಿಯಮದಂತೆ ಪರಿವರ್ತನೆ ಆರಂಭವಾಗಿದೆ. ಎಲ್ಲೆಡೆ ದೊಡ್ಡ ಮಟ್ಟದಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಮೂಡುತ್ತಿದೆ. ಅದನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾ ಸಾಗಬೇಕು. ಪ್ರತಿಪಕ್ಷಗಳು ಅನುಸರಿಸುತ್ತಿರುವ ಹಿಂದು ವಿರೋಧಿ ನೀತಿಯನ್ನು ಜನತೆಗೆ ಮನಮುಟ್ಟಿಸಬೇಕು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ಜನತೆಗೆ ಪ್ರಾಮಾಣಿಕವಾಗಿ ತಿಳಿಸಿ, ಪ್ರತಿ ಪಕ್ಷಗಳ ಹುಳುಕುಗಳನ್ನು ಜನತೆಗೆ ಮುಟ್ಟಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು. ಈ ನಿಟ್ಟಿನಲ್ಲಿ ಈಗಾಗಲೇ ಸ್ಥಳೀಯ ನಾಯಕರು, ಜನಪ್ರತಿನಿಧಿಗಳಲ್ಲಿ ಸೂಚನೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರದ ಜನಪರ ಯೋಜನೆಗಳ ಪ್ರಚಾರಕ್ಕೆ ಹೆಚ್ಚಿನ ಆದ್ಯತೆ ನೀಡಿ, ವಿರೋಧ ಪಕ್ಷಗಳ ಅಸಹಾಯಕ ಮನಸ್ಥಿತಿಯ ಅಪಪ್ರಚಾರಕ್ಕೆ ತಕ್ಕ ಕಡಿವಾಣ ಹಾಕುವ ನಿಟ್ಟಿನಲ್ಲಿ ಪರಿಣಾಮಕಾರಿ ಮಾಧ್ಯಮ ನಿರ್ವಹಣೆ ಮಾಡುವ ಮೂಲಕ ಸದೃಢ ಪಕ್ಷ ಸಂಘಟನೆಗೆ ಪೂರಕ ಶಕ್ತಿಯಾಗಬೇಕು ಎಂದು ಸಲಹೆ ನೀಡಿದರು.

ಶಾಸಕ ಎಲ್.ನಾಗೇಂದ್ರ ಮಾತನಾಡಿ, ರಾಜ್ಯದಲ್ಲಿ ಮೂರು ವರ್ಷಗಳಿಂದ ನಿರಂತರವಾಗಿ ನಡೆದಿರುವ ಅಭಿವೃದ್ಧಿಯ ಕಾರ್ಯಗಳ ಬಗ್ಗೆ ಜನತೆಗೆ ತಿಳಿಸಬೇಕು. ಸರ್ಕಾರ ಈಗ ಮಾಡಿರುವ ಅಭಿವೃದ್ಧಿ ಕಾರ್ಯವನ್ನು ಮುಂದಿನ ಆರು ತಿಂಗಳವರೆಗೆ ಜನರಿಗೆ ಮುಟ್ಟಿಸುವ ಕೆಲಸವಾಗಬೇಕು. ಇದರಿಂದ ಪಕ್ಷಕ್ಕೆ ಬಹಳ ಅನುಕೂಲವಾಗಲಿದೆ. ಪಕ್ಷ ಕಾರ್ಯಕರ್ತರಿಗೆ ನೀಡಿರುವ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕು. ಬೇರೆ ಯಾವ ಪಕ್ಷವೂ ಕಾರ್ಯಕರ್ತರಿಗೆ ಇಂತಹ ಅವಕಾಶ ಹಾಗೂ ಜವಾಬ್ದಾರಿ ನೀಡುವುದಿಲ್ಲ. ಬಿಜೆಪಿಯಲ್ಲಿ ಮಾತ್ರ ಕಾರ್ಯಕರ್ತರಿಗೆ ಮನ್ನಣೆ ನೀಡಲಾಗುತ್ತದೆ. ಇದನ್ನು ಸದುಪಯೋಗಪಡಿಸಿಕೊಂಡು ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದು ಹೇಳಿದರು.

ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ರಾಜ್ಯ ಮುಖ್ಯ ವಕ್ತಾರ ಎಂ.ಜಿ.ಮಹೇಶ್, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮುಖಂಡ ವಸಂತ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಜಿಲ್ಲಾ ಮಟ್ಟದ ಸ್ಪರ್ಧಾಕೂಟ

● ಕ್ರೀಡಾ ಭಾರತಿ ವತಿಯಿಂದ ಆಯೋಜನೆ ● ಜಿಲ್ಲೆಯ 21 ಶಾಲಾ ಮಕ್ಕಳು ಭಾಗಿ



ಮೈಸೂರು, ಡಿ.10(ಪಿಎಂ)– ಕ್ರೀಡಾ ಭಾರತಿ ಮೈಸೂರು ಜಿಲ್ಲಾ ಘಟಕ, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಜಂಟಿ ಆಶ್ರಯದಲ್ಲಿ ಡಿ.12ರಂದು 'ಜಿಲ್ಲಾ ಮಟ್ಟದ ಸ್ಪರ್ಧಾಕೂಟ–2022' ಹಾಗೂ ರಾಜ್ಯ ಮಟ್ಟದ ಯೋಗವ್ಯೂಹ ರಚನಾ ಸ್ಪರ್ಧೆಯ ವಿಜೇತ ತಂಡಗಳಿಗೆ ಬಹುಮಾನ ವಿತರಣಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕ್ರೀಡಾ ಭಾರತಿ ಪ್ರಾಂತ ಕಾರ್ಯದರ್ಶಿ ಮಹೇಂದ್ರ ಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲಾ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದ ಸ್ಪರ್ಧಾಕೂಟ ಏರ್ಪಡಿಸಿದ್ದು, ಮಹಾರಾಜ ಕಾಲೇಜು ಮೈದಾನದಲ್ಲಿ ಈ ಕ್ರೀಡಾಕೂಟ ನಡೆಯಲಿದೆ. ಕೂಟಕ್ಕೆ ಎಲ್ಲಾ ತಯಾರಿಗಳು ನಡೆದಿದ್ದು, ಮೈಸೂರು ಜಿಲ್ಲೆಯ 21 ಶಾಲೆಗಳ 900 ವಿದ್ಯಾರ್ಥಿಗಳು ಈಗಾಗಲೇ ನೋಂದಾಯಿಸಿದ್ದಾರೆ ಎಂದರು.

ಮಾರ್ಚ್–ಫಾಸ್ಟ್, ಸ್ಕೂಲ್ ಬ್ಯಾಂಡ್, ದೇಸಿ ಕ್ರೀಡೆಗಳಾದ ಲಗೋರಿ ಹಾಗೂ ಹಗ್ಗ–ಜಗ್ಗಾಟ ಸ್ಪರ್ಧಾಕೂಟದಲ್ಲಿರಲಿವೆ. ಜೊತೆಗೆ ಮಕ್ಕಳ ಪ್ರತಿಯೊಂದು ಚಲನ ವಲನ ಗಮನಿಸಿ ಶಿಸ್ತು ವಿಭಾಗದಲ್ಲಿ ಟ್ರೋಫಿ ನೀಡಲಾಗುವುದು. ಅಂದು ಬೆಳಗ್ಗೆ 8.30ಕ್ಕೆ ಕ್ರೀಡಾ ಭಾರತೀಯ ದಕ್ಷಿಣ ಭಾರತದ ಸಂಯೋಜಕ ಚಂದ್ರಶೇಖರ್ ಜಾಗಿರ್ದಾರ್ ಉದ್ಘಾಟಿಸಲಿದ್ದಾರೆ. ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ರಾಜಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. 2022ರ ದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಎನ್‌ಸಿಸಿ ತಂಡ ಮುನ್ನಡೆಸಿದ ಮೈಸೂರಿನ ಪ್ರಮೀಳಾ ಕುಂವರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಈ ಹಿಂದೆ ಕ್ರೀಡಾ ಭಾರತಿ ವತಿಯಿಂದ ನಡೆಸಿದ್ದ ಸಾಮೂಹಿಕ ಯೋಗವ್ಯೂಹ ರಚನಾ ಸ್ಪರ್ಧೆಯ ನಗದು ಬಹುಮಾನ ವಿತರಣಾ ಸಮಾರಂಭವೂ ಅಂದು ಬೆಳಗ್ಗೆ 10ಕ್ಕೆ ನಡೆಯಲಿದೆ. ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ ಚೆಕ್ ಅನ್ನು ವಿಜೇತ ತಂಡಗಳಿಗೆ ವಿತರಿಸಲಿದ್ದಾರೆ. ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್, ಪೊಲೀಸ್ ಪಬ್ಲಿಕ್ ಸ್ಕೂಲ್ ಮತ್ತು ಶ್ರೀ ಹರಿ ವಿದ್ಯಾಲಯ ಶಿಕ್ಷಣ ಸಂಸ್ಥೆಗಳು ಈ ಸ್ಪರ್ಧೆಯಲ್ಲಿ ಕ್ರಮವಾಗಿ ಪ್ರಥಮ (ಲಕ್ಷ ರೂ.), ದ್ವಿತೀಯ (50 ಸಾವಿರ ರೂ.) ಹಾಗೂ ತೃತೀಯ (25 ಸಾವಿರ ರೂ.) ಸ್ಥಾನ ಗಳಿಸಿವೆ ಎಂದರು.

ಕ್ರೀಡಾ ಜ್ಞಾನ ಪರೀಕ್ಷೆ: ಕ್ರೀಡೆ ಹಾಗೂ ಕ್ರೀಡಾ ನಿಯಮಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಕ್ರೀಡಾ ಭಾರತಿ ವತಿಯಿಂದ ಕ್ರೀಡಾ ಜ್ಞಾನ ಪರೀಕ್ಷೆಯನ್ನು ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ನಡೆಸಿಕೊಂಡು ಬರುತ್ತಿದ್ದು, ಈ ಬಾರಿಯ ಪರೀಕ್ಷೆಯು ಫೆಬ್ರವರಿ ಮೊದಲ ವಾರದಲ್ಲಿ ನಡೆಯಲಿದ್ದು, ಮಾರ್ಚ್‌ನಲ್ಲಿ ಫಲಿತಾಂಶ ಪ್ರಕಟಗೊಳ್ಳಲಿದೆ ಎಂದು ತಿಳಿಸಿದರು.

ಕ್ರೀಡಾ ಜ್ಞಾನ ಪರೀಕ್ಷೆಯ ನೋಂದಣಿ ಪ್ರಕ್ರಿಯೆಗೆ ಇದೇ ಕಾರ್ಯಕ್ರಮದಲ್ಲಿ ಚಾಲನೆ ನೀಡಲಾಗುವುದು. 2023ರ ಜ.15ರವರೆಗೆ ನೋಂದಣಿಗೆ ಅವಕಾಶ ಇದೆ. 5ನೇ ತರಗತಿ ಮೇಲ್ಪಟ್ಟು ಪದವಿ ವಿದ್ಯಾರ್ಥಿಗಳವರೆಗೆ ಪರೀಕ್ಷೆ ಬರೆಯಲು ಅವಕಾಶವಿದೆ. ಹೆಚ್ಚಿನ ವಿವರಗಳಿಗೆ ಮೊ.ಸಂ. 81474 72333 ಅನ್ನು ಸಂಪರ್ಕಿಸಬಹುದು ಎಂದರು.

ಅಂದು ಮಧ್ಯಾಹ್ನ 1.30ಕ್ಕೆ ಸ್ಪರ್ಧಾ ಕೂಟದ ಸಮಾರೋಪ ಸಮಾರಂಭ ನಡೆಯಲಿದ್ದು, ಜೋಧ್‌ಪುರ ಸಂತ ಸಮಾಜದ ಅಧ್ಯಕ್ಷ ಶ್ರೀ 1008 ಚೇತನ್‌ಗಿರಿ ಮಹಾರಾಜ್ ಸಾನಿಧ್ಯ ವಹಿಸಲಿದ್ದಾರೆ. ಆರ್‌ಎಸ್‌ಎಸ್‌ನ ವಿಭಾಗ ಸಹ ಕಾರ್ಯವಾಹಕ ತಿಲಕ್ ಸಮಾರೋಪ ಭಾಷಣ ಮಾಡಲಿದ್ದಾರೆ. ಪದ್ಮಶ್ರೀ ಪುರಸ್ಕೃತರೂ ಆದ ಪ್ಯಾರಾ ಅಥ್ಲೀಟ್ ಹಾಗೂ ಕ್ರೀಡಾಭಾರತಿ ರಾಜ್ಯ ಉಪಾಧ್ಯಕ್ಷ ಕೆ.ವೈ.ವೆಂಕಟೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಕ್ರೀಡಾ ಭಾರತಿ ವಿಭಾಗ ಸಂಯೋಜಕರಾದ ಆರ್. ರಂಗನಾಥ್, ಪರಮೇಶ್, ಜಿಲ್ಲಾಧ್ಯಕ್ಷ ಪೈಅಮೃತ್ ಪುರೋಹಿತ್, ಕ್ರೀಡಾಪಟು ರಶ್ಮಿ ಗೋಷ್ಠಿಯಲ್ಲಿದ್ದರು.

ಉಚಿತ ಮಾನಸಿಕ ಆರೋಗ್ಯ ಸೇವೆ



ಮೈಸೂರು,ಡಿ.10(ಪಿಎಂ)– ವಿವೇಕ ಆಸ್ಪತ್ರೆಯ 3ನೇ ವರ್ಷದ ಸಂಸ್ಥಾಪನಾ ದಿನದ ಅಂಗವಾಗಿ ಆಸ್ಪತ್ರೆಯಿಂದ ಗರ್ಭಧಾರಣೆ ಮತ್ತು ಮಾನಸಿಕ ಆರೋಗ್ಯ ಕುರಿತಂತೆ ವರ್ಷಕಾಲ ಉಚಿತ ಮಾನಸಿಕ ಆರೋಗ್ಯ ಮೌಲ್ಯಮಾಪನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಆಸ್ಪತ್ರೆ ನಿರ್ದೇಶಕ ಡಾ.ಮುರಳೀಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮದಡಿ ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ವಿವೇಕ ಕ್ಲಿನಿಕ್‌ನಲ್ಲಿ ಗರ್ಭಿಣಿಯರು, ಬಾಣಂತಿಯರು ಉಚಿತ ಮಾನಸಿಕ ಆರೋಗ್ಯ ಮೌಲ್ಯಮಾಪನ ಸೇವೆ ಪಡೆಯಬಹುದು. ಜೊತೆಗೆ ಗರ್ಭಿಣಿಯರು, ಬಾಣಂತಿಯರಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳ ಗುರುತಿಸುವಿಕೆ ಕುರಿತು ವೃತ್ತಿಪರರಿಗೂ ತರಬೇತಿ ನೀಡಲಾಗುವುದು. ವಿವರಗಳಿಗೆ 63641 11004 ಅನ್ನು ಸಂಪರ್ಕಿಸಬಹುದು ಎಂದರು. ವೈದ್ಯೆ ಡಾ.ರಶ್ಮಿ ಕಿಶೋರ್, ಮನೋವೈದ್ಯರಾದ ಡಾ.ಸುಧಾರಾಣಿ, ಡಾ.ನರೇಂದ್ರಕುಮಾರ್ ಗೋಷ್ಠಿಯಲ್ಲಿದ್ದರು.

ಪ್ಲಾಸ್ಟಿಕ್ ತ್ಯಜಿಸುವಂತೆ ಸೈಕಲ್‌ನಲ್ಲಿ ಜಾಗೃತಿ ಜಾಥಾ

ಮೈಸೂರು,ಡಿ.10(ಪಿಎಂ)– ಪರಿಸರ ಸಂರಕ್ಷಣೆ ಹಾಗೂ ಪ್ಲಾಸ್ಟಿಕ್ ಬಳಕೆ ತ್ಯಜಿಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪರಿಸರವಾದಿ ಮಂಜುನಾಥ್ ಈರಪ್ಪನ ಕೊಪ್ಪಲು ಅವರು ಡಿ.11ರಂದು ಮೈಸೂರಿನಿಂದ ಮಲೈ ಮಹದೇಶ್ವರ ಬೆಟ್ಟಕ್ಕೆ ಸೈಕಲ್ ಜಾಥಾ ನಡೆಸಲಿದ್ದಾರೆ ಎಂದು ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷೆ ಭಾನು ಮೋಹನ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾ



ಗೋಷ್ಠಿಯಲ್ಲಿ ಮಾತನಾಡಿದ ಅವರು, ಸೈಕಲ್ ಜಾಥಾದ ಮಾರ್ಗ ಮಧ್ಯೆ ಜಾಗೃತಿ ಮೂಡಿಸಲಿದ್ದಾರೆ ಎಂದರು. ಮಂಜುನಾಥ್ ಈರಪ್ಪನಕೊಪ್ಪಲು ಮಾತನಾಡಿ, ಸೈಕಲ್‌ಗೆ ಪೋಸ್ಟರ್, ಬ್ಯಾನರ್ ಅಳವಡಿಸಿ ಜಾಥಾ ನಡೆಸುವ ಮೂಲಕ ಅರಿವು ಮೂಡಿಸಲಿದ್ದೇನೆ. ಮುಂದಿನ ಹಂತದಲ್ಲಿ ಇಡೀ ರಾಷ್ಟ್ರದಲ್ಲಿ ಸೈಕಲ್ ಜಾಥಾ ನಡೆಸುವ ಉದ್ದೇಶ ಹೊಂದಿದ್ದೇನೆ ಎಂದು ಅವರು ತಿಳಿಸಿದರು.

ಪಿಂಚಣಿ ಸಮಸ್ಯೆ ನಿವಾರಣೆಗೆ ಮುಖ್ಯಮಂತ್ರಿಗೆ ಮನವಿ


ಮೈಸೂರು, ಡಿ.10 (ಎಸ್‌ಪಿಎನ್)–ಅನುದಾನಿತ ಶಾಲಾ ಕಾಲೇಜು ಪಿಂಚಣಿ ವಂಚಿತ ನೌಕರರಿಗೆ ಎನ್‌ಪಿಎಸ್ ಸಮಸ್ಯೆ ಸರಿಪಡಿಸುವ ಕುರಿತು ಸರ್ಕಾರದ ಮೇಲೆ ಒತ್ತಡ ತರುವಂತೆ ಆಗ್ರಹಿಸಿ ಪಿಂಚಣಿ ವಂಚಿತ ನೌಕರರ ಸಂಘದ ಪದಾಧಿಕಾರಿಗಳು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ಪ್ರತಾಪಸಿಂಹ ಹಾಗೂ ಶಾಸಕ ಎಲ್.ನಾಗೇಂದ್ರ ಅವರಿಗೆ ಶನಿವಾರ ಸುತ್ತೂರು ಮಠದಲ್ಲಿ ಮನವಿ ಸಲ್ಲಿಸಿದರು.



ಪಿಂಚಣಿ ವಂಚಿತ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಶರತ್‌ಕುಮಾರ್ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಆರ್. ಶಿವಕುಮಾರ್ ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಸೇರಿದಂತೆ ಶಾಸಕರು, ಸಂಸದರು ಸುತ್ತೂರು ಮಠಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮನವಿ ಸಲ್ಲಿಸಿದರು. ಈ ವೇಳೆ ಸಂಘದ ಪದಾಧಿಕಾರಿಗಳಾದ ಚಂದನ್‌ಕುಮಾರ್ ಸೇರಿದಂತೆ ಇತರರಿದ್ದರು.

ಟಿಬೆಟಿಯನ್ನರಿಂದ ಶಾಂತಿಯುತ ಪ್ರತಿಭಟನಾ ಮೆರವಣಿಗೆ

ಮೈಸೂರು,ಡಿ.10(ಪಿಎಂ)– ಟಿಬೆಟಿಯನ್ನರ ಮೇಲಿನ ಚೀನಾ ಪ್ರಭುತ್ವದ ದಬ್ಬಾಳಿಕೆ ಕೊನೆಗಾಣಿಸಬೇಕು ಹಾಗೂ ಚೀನಾ, ಟಿಬೆಟ್‌ನಲ್ಲಿ ವಿಧಿಸಿರುವ ಅವೈಜ್ಞಾನಿಕ ಲಾಕ್‌ಡೌನ್ ತೆರವುಗೊಳಿಸಬೇಕೆಂದು ಒತ್ತಾಯಿಸಿ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಪ್ರಯುಕ್ತ ಬೈಲುಕುಪ್ಪೆಯ ಟಿಬೆಟ್ ಯುವ ಕಾಂಗ್ರೆಸ್, ಪ್ರಾಂತೀಯ ಟಿಬೆಟಿಯನ್ ಮಹಿಳಾ ಸಂಘಟನೆ, ಹುಣಸೂರು, ಕೊಳ್ಳೇಗಾಲ, ಮೈಸೂರು ಟಿಬೆಟಿಯನ್ ವಿದ್ಯಾರ್ಥಿ ಸಂಘಟನೆ ವತಿಯಿಂದ ಶನಿವಾರ ಮೈಸೂರಲ್ಲಿ ಶಾಂತಿಯುತ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.



ಮೈಸೂರು ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರಿನಿಂದ ದೇವರಾಜ ಅರಸು ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿವರೆಗೆ ಶಾಂತಿಯುತ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಟಿಬೆಟ್‌ನಲ್ಲಿ ಟಿಬೆಟಿಯನ್ನರ ಮನಸ್ಥಿತಿ ಅರಿತು ಅವರ ಬೇಡಿಕೆಗಳನ್ನು ಈಡೇರಿಸಬೇಕು. ಪಂಚೆನ್ ಲಾಮಾ ಅವರು ಸೇರಿದಂತೆ ಎಲ್ಲಾ ಟಿಬೆಟಿಯನ್ ರಾಜಕೀಯ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು. ಅಲ್ಲದೆ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಹಾರಾಜ ಕಾಲೇಜಿನಲ್ಲಿ ಉದ್ಯೋಗ ಮೇಳ

724 ಮಂದಿ ನೇಮಕ



ಮೈಸೂರು, ಡಿ.10(ಆರ್‌ಕೆ)–ಮೈಸೂರು ಮಹಾರಾಜ ಪದವಿ ಕಾಲೇಜಿನಲ್ಲಿ ಇಂದು ನಡೆದ ಬೃಹತ್ ಉದ್ಯೋಗ ಮೇಳದಲ್ಲಿ 724 ಮಂದಿಗೆ ಉದ್ಯೋಗ ದೊರೆತಿದೆ.

76 ವಿವಿಧ ಕಂಪನಿಗಳು ಪಾಲ್ಗೊಂಡಿದ್ದ ಈ ಉದ್ಯೋಗ ಮೇಳದಲ್ಲಿ 956 ಮಹಿಳಾ ಅಭ್ಯರ್ಥಿಗಳು ಸೇರಿ 1356 ಮಂದಿ ಸಂದರ್ಶನಕ್ಕೆ ಹಾಜರಾಗಿದ್ದರು. ಆ ಪೈಕಿ 237 ಮಂದಿಗೆ ಸ್ಥಳದಲ್ಲೇ ನೇಮಕಾತಿ ಪತ್ರ ವಿತರಿಸುವುದರೊಂದಿಗೆ ಒಟ್ಟು 724 ಮಂದಿಗೆ ಉದ್ಯೋಗ ದೊರೆಯುವುದು ದೃಢಪಟ್ಟಿದೆ ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಅಭಿಯಾನ ವ್ಯವಸ್ಥಾಪಕ ಕೃಷ್ಣಮೂರ್ತಿ ತಿಳಿಸಿದ್ದಾರೆ.

ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಏರ್ಪಡಿಸಿದ್ದ ಉದ್ಯೋಗ ಮೇಳವನ್ನು ಶಾಸಕ ಎಲ್. ನಾಗೇಂದ್ರ ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ. ರಾಜಶೇಖರ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕೌಶಲ್ಯಾಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ, ಮಹಾರಾಜ ಕಾಲೇಜು ಪ್ರಾಂಶುಪಾಲ ಸಿ.ಎ.ಶ್ರೀಧರ್, ಸಂಪನ್ಮೂಲ ವ್ಯಕ್ತಿ ಧನಂಜಯ ಈ ಸಂದರ್ಭ ಉಪಸ್ಥಿತರಿದ್ದರು.

ಏಷಿಯನ್ ಪೇಂಟ್ಸ್, ರಾಣಿ ಮದ್ರಾಸ್ ಲಿ., ಬ್ರೇಕ್ಸ್ ಇಂಡಿಯಾ ಪ್ರೈ.ಲಿ., ಎಲ್‌ಐಸಿ, ಏರ್‌ಟೆಲ್, ವಿಪ್ರೋ ಜಿಇ, ಕೇನ್ಸ್ ಟೆಕ್ನಾಲಜಿ ಇಂಡಿಯಾ ಲಿ., ಎಂಎಸ್‌ಎಂಇ ಕೌನ್ಸಿಲ್, ಬಜಾಜ್ ಆಟೋ ಎಂಟರ್‌ಪ್ರೈಸಸ್ ಪ್ರೈ.ಲಿ., ಇನ್‌ಸ್ಪೈರ್ ಹೋಂಡಾ, ಪ್ಯಾಲೇಸ್, ಟೊಯೋಟೋ, ಮಾಂಡವಿ ಮೋಟಾರ್ಸ್, ಜಿಟಿಟಿಸಿ, ಗ್ರಾಮೀಣ ಕೂಟ, ಶ್ರೀಸಾಯಿ ಎಂಟರ್ ಪ್ರೈಸಸ್, ಐಸಿಐಸಿಐ ಬ್ಯಾಂಕ್, ಎಸ್‌ಬಿಐ ಲೈಫ್ ಇನ್ಶೂರೆನ್ಸ್, ಸಹಾರಾ, ಬಿಪಿಎಲ್ ಮೆಡಿಕಲ್ ಟೆಕ್, ರಿಲಯನ್ಸ್ ಜಿಯೋ, ಕ್ರಿಸ್ಟಲ್ ಸಾಫ್ಟ್‌ವೇರ್ ಸೇರಿದಂತೆ ಒಟ್ಟು 76 ಕಂಪನಿಗಳು ಪಾಲ್ಗೊಂಡು ತಮಗೆ ಅಗತ್ಯವಿರುವ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಂಡರು.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ಇಂಜಿನಿಯರಿಂಗ್ ಪದವಿ ಸೇರಿದಂತೆ ವಿವಿಧ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳ ಬಯೋಡೇಟಾ ನೋಡಿ ಅವರ ಬುದ್ಧಿವಂತಿಕೆ, ಕೌಶಲ್ಯ ಹಾಗೂ ವಿದ್ಯಾರ್ಹತೆಗನುಗುಣವಾಗಿ ಕಂಪನಿಗಳ ಪ್ರತಿನಿಧಿಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡಿದ್ದು, ಸ್ಥಳದಲ್ಲೇ ನೇಮಕಾತಿ ಪತ್ರ ನೀಡಿದರೆ, ಕೆಲವು ಅಭ್ಯರ್ಥಿಗಳನ್ನು ತಾತ್ಕಾಲಿಕ ಆಯ್ಕೆ ಮಾಡಿಕೊಂಡು ಪರಿಶೀಲಿಸಿ ನೇಮಕಾತಿ ಪತ್ರ ನೀಡುವ ಭರವಸೆ ನೀಡಲಾಯಿತು.

ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಅಭ್ಯರ್ಥಿಗಳು ಹಾಗೂ ವಿವಿಧ ಕಂಪನಿಗಳ ಪ್ರತಿನಿಧಿಗಳಿಗೆ ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿತ್ತು

ಹಳೇ ಪಿಂಚಣಿ ಯೋಜನೆ ಜಾರಿಗೆ ಒತ್ತಾಯಿಸಿ ಪಾದಯಾತ್ರೆ



ಮೈಸೂರು,ಡಿ.10(ಪಿಎಂ)– ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಗೊಳಿಸಿ, ಹಳೇ ಪಿಂಚಣಿ ಯೋಜನೆ (ಓಪಿಎಸ್) ಜಾರಿಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ಶನಿವಾರ ಮೈಸೂರಿನಲ್ಲಿ ಪಾದಯಾತ್ರೆ ನಡೆಸಲಾಯಿತು.

2006ರ ಏ.1ರಿಂದ ರಾಜ್ಯ ಸರ್ಕಾರಿ ಸೇವೆಗೆ ಸೇರಿದ ನೌಕರರಿಗೆ ಈ ಎನ್‌ಪಿಎಸ್ ಜಾರಿಗೊಳಿಸಲಾಗಿದೆ. ಇದು ನೌಕರರ ಸಂಧ್ಯಾ ಕಾಲದ ಮರಣ ಶಾಸನವೇ ಆಗಿದೆ. ಕಳೆದ 16 ವರ್ಷಗಳಲ್ಲಿ ನಿವೃತ್ತರಾದ ನೌಕರರಿಗೆ ಕೇವಲ 900ರಿಂದ 2 ಸಾವಿರ ರೂ.ಗಳವರೆಗೆ ಪಿಂಚಣಿ ದೊರೆಯುತ್ತಿದ್ದು, ಮರಣ ಹೊಂದಿದ ನೌಕರರ ಕುಟುಂಬಸ್ಥರಿಗೆ ಸೂಕ್ತ ಕುಟುಂಬ ಪಿಂಚಣಿ ಇಲ್ಲದೆ, ತೀರಾ ಸಂಕಷ್ಟ ಅನುಭವಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರಿನಿಂದ ಆರಂಭವಾದ ಪಾದಯಾತ್ರೆಯು, ಚಾಮರಾಜ ಒಡೆಯರ್ ವೃತ್ತ, ದೊಡ್ಡ ಗಡಿಯಾರ ವೃತ್ತ, ಗಾಂಧಿಚೌಕ, ಚಿಕ್ಕಗಡಿಯಾರ ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಹುಣಸೂರು ರಸ್ತೆ, ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ ಸಂಚರಿಸಿ, ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದ ಎದುರು ಅಂತ್ಯಗೊಂಡಿತು.

ಬಳಿಕ ಇಲ್ಲಿನ ಶತಮಾನೋತ್ಸವ ಭವನದಲ್ಲಿ ಸಭೆ ನಡೆಸಿ, ಡಿ.19ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುವ ಸಂಬಂಧ ಚರ್ಚಿಸಲಾಯಿತು. ಸಂಘದ ರಾಜ್ಯಾಧ್ಯಕ್ಷ ಶಾಂತರಾಮ್, ಜಿಲ್ಲಾಧ್ಯಕ್ಷ ಎಸ್.ಆರ್.ಮಂಜುನಾಥ್, ಪದಾಧಿಕಾರಿಗಳಾದ ಕೇಶವ್, ಗುರುಸ್ವಾಮಿ, ಮಹದೇವ್ ಸೇರಿದಂತೆ ನೂರಾರು ನೌಕರರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ವರುಣಾ ಕ್ಷೇತ್ರದ ಬಿಜೆಪಿ ಆತ್ಮಾವಲೋಕನ ಸಭೆ

ಯಾರೇ ಅಭ್ಯರ್ಥಿಯಾದರೂ ಒಗ್ಗಟ್ಟು ಪ್ರದರ್ಶಿಸಲು ನಿರ್ಧಾರ

ತಿ.ನರಸೀಪುರ, ಡಿ.10– ಮುಂಬರುವ ಚುನಾವಣೆಯಲ್ಲಿ ವರುಣಾದಿಂದ ಯಾರೇ ಅಭ್ಯರ್ಥಿಯಾದರೂ, ಕಾರ್ಯಕರ್ತರು ಹಾಗೂ ಉಳಿದ ಟಿಕೆಟ್ ಆಕಾಂಕ್ಷಿಗಳು ಅವರ ಗೆಲುವಿಗೆ ಶ್ರಮಿಸಬೇಕೆಂದು ಬಿಜೆಪಿ ಆತ್ಮಾವಲೋಕನ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹದಿನಾರು ಗ್ರಾಮದ ಬಿಳಿಕೆರೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ನಡೆದ ಆತ್ಮಾವಲೋಕನ ಸಭೆಯಲ್ಲಿ ಹೈಕಮಾಂಡ್ ಯಾರನ್ನೇ ಅಭ್ಯರ್ಥಿ ಮಾಡಿದರೂ, ಪಕ್ಷ ಸಂಘಟನೆಯಲ್ಲಿ ತೊಡಗುವ ಮೂಲಕ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕೆಂದು ನೂರಾರು ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ತೀರ್ಮಾನ ಕೈಗೊಂಡರು.

ವರುಣಾದಿಂದ ಈ ಬಾರಿ ಮಾಜಿ ಸಿಎಂ ಸಿದ್ದರಾಮಯ್ಯ ಅಥವಾ ಅವರ ಪುತ್ರ ಶಾಸಕ ಡಾ.ಯತೀಂದ್ರ ಅಭ್ಯರ್ಥಿಯಾಗಬಹುದು. ಮಾಜಿ ಮುಖ್ಯಮಂತ್ರಿಗಳು ಅಭ್ಯರ್ಥಿಯಾದರೆ ಅವರ ವಿರುದ್ಧ ಸ್ಪರ್ಧಿಸುವುದು ಸುಲಭದ ಮಾತಲ್ಲ. ಹಾಗಾಗಿ ಅವರಿಗೆ ಫೈಟ್ ಕೊಡುವಂತಹ ಬಲಿಷ್ಠ ವ್ಯಕ್ತಿಯನ್ನೇ ಬಿಜೆಪಿ ಅಭ್ಯರ್ಥಿಯನ್ನಾಗಿಸಬೇಕು. ಯಾರನ್ನೇ ಅಭ್ಯರ್ಥಿ ಮಾಡಿದರೂ ಕಾರ್ಯಕರ್ತರು ಎದೆಗುಂದದೇ ಹೋರಾಟ ಮಾಡಬೇಕು. ಆಗ ಮಾತ್ರವೇ ಜಯ ಸಾಧಿಸಲು ಸಾಧ್ಯ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸುವ ಅಭ್ಯರ್ಥಿಯನ್ನು ಈಗಲೇ ಘೋಷಿಸಬೇಕು. ಮಾಜಿ ಸಿಎಂ ಯಡಿಯೂರಪ್ಪ ಈ ನಿಟ್ಟಿನಲ್ಲಿ ಮನಸ್ಸು ಮಾಡಬೇಕು ಎನ್ನುವ ಮೂಲಕ ವಿಜಯೇಂದ್ರ ಅವರೇ ಸಿದ್ದರಾಮಯ್ಯ ವಿರುದ್ಧ ನಿಲ್ಲಲು ಸೂಕ್ತ ಅಭ್ಯರ್ಥಿ ಎಂಬ ಮಾತುಗಳು ಸಭೆಯಲ್ಲಿ ಕೇಳಿ ಬಂದವು.

ವರುಣಾದಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ. ಇವರ ಪೈಕಿ ಯಾರೇ ಅಭ್ಯರ್ಥಿಯಾದರೂ ಉಳಿದ ಆಕಾಂಕ್ಷಿಗಳು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗದೇ ಹೈಕಮಾಂಡ್ ಸೂಚಿಸಿದ ಅಭ್ಯರ್ಥಿ ಪರ ಕೆಲಸ ಮಾಡಬೇಕು. ಜೊತೆಗೆ ಕ್ಷೇತ್ರದ ಅಭ್ಯರ್ಥಿ ಆಯ್ಕೆಯನ್ನು ಯಡಿಯೂರಪ್ಪ ಅವರಿಗೆ ಬಿಡಲು ಸಭೆಯಲ್ಲಿ



ಒಮ್ಮತದ ಅಭಿಪ್ರಾಯ ಮೂಡಿಬಂತು.

ವರುಣಾ ಸೋಲುವ ಕ್ಷೇತ್ರವೇನಲ್ಲ. ಇಲ್ಲಿ ಬಿಜೆಪಿಯ 60 ಸಾವಿರ ಖಚಿತ ಮತಗಳಿವೆ. ಆದರೆ ಸಮರ್ಥ ಅಭ್ಯರ್ಥಿ ಹಾಕುವ ಕೆಲಸವನ್ನು ಹೈಕಮಾಂಡ್ ಮಾಡಬೇಕು. ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಎಂಬಂತೆ ಚುನಾವಣೆ ಹತ್ತಿರ ಬಂದಾಗ ಅಭ್ಯರ್ಥಿ ಹೆಸರು ಘೋಷಿಸದೇ ಈಗಲೇ ಘೋಷಣೆ ಮಾಡಿದರೆ ಸಿದ್ದರಾಮಯ್ಯ ಅವರನ್ನು ಸೋಲಿಸಲು ಸಾಧ್ಯವಾಗುತ್ತದೆ. ಹಾಗಾಗಿ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಯಡಿಯೂರಪ್ಪ ಬಳಿಗೆ ನಿಯೋಗ ಹೋಗಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಯಾರೇ ಅಭ್ಯರ್ಥಿಯಾದರೂ ವಿಜಯೇಂದ್ರ ಅವರೇ ಅಭ್ಯರ್ಥಿ ಎಂದು ಭಾವಿಸಿ ಅವರ ಗೆಲುವಿಗೆ ಕಾರ್ಯತಂತ್ರ ರೂಪಿಸಬೇಕು. 15 ಆಕಾಂಕ್ಷಿಗಳ ಪೈಕಿ ಸಿದ್ದರಾಮಯ್ಯನವರ ವಿರುದ್ಧ ಹೋರಾಟ ಮಾಡಿ ಗೆಲ್ಲುತ್ತೇವೆ ಎಂಬ ಆತ್ಮಸ್ಥೈರ್ಯ ಇರುವವರು ಮಾತ್ರ ಚುನಾವಣಾ ಅಖಾಡಕ್ಕೆ ಇಳಿಯಿರಿ, ಸುಮ್ಮನೆ ಎಲ್ಲರೂ ನಾನೇ ಅಭ್ಯರ್ಥಿ ಆಗಬೇಕು ಎಂಬುದನ್ನು ಬಿಡಿ ಎಂದು ಕೆಲ ಮುಖಂಡರು ಸಲಹೆ ನೀಡಿದರು.

ಜಿಪಂ ಮಾಜಿ ಸದಸ್ಯ, ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರೂ ಆದ ಟಿಕೆಟ್ ಆಕಾಂಕ್ಷಿ ಬಿ.ಎನ್.ಸದಾನಂದ ಮಾತನಾಡಿ, 2018 ರಲ್ಲಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ಸೋತಿದ್ದು ನಿಜ. ಅಂದು ನಮ್ಮಲ್ಲಿ ಅಭ್ಯರ್ಥಿಗಳ ಕೊರತೆ ಇತ್ತು. ಆದರೆ ಅದಕ್ಕೂ ಮೊದಲು 2013ರಲ್ಲಿ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿದ್ದರು. ಅಲ್ಲದೇ ಮುಂದಿನ ಮುಖ್ಯಮಂತ್ರಿ ಎಂದು ಘೋಷಣೆ ಸಹ ಮಾಡಿಕೊಂಡಿದ್ದರು. ಅಂತಹ ಸನ್ನಿವೇಶದಲ್ಲಿ ಕಾಪು ಸಿದ್ದಲಿಂಗಸ್ವಾಮಿ 57 ಸಾವಿರ ಮತ ಪಡೆದು ಪಕ್ಷದ ಶಕ್ತಿ ತೋರಿಸಿದ್ದರು. ನಂತರ ಸಿದ್ದರಾಮಯ್ಯ ಮಗನಿಗಾಗಿ ಕ್ಷೇತ್ರ ಬಿಟ್ಟು ಹೋದರು. ಈಗ ಅವರು ವಿರೋಧ ಪಕ್ಷದ ನಾಯಕರಾಗಿದ್ದರೂ ಇನ್ನೂ ಕ್ಷೇತ್ರ ಹುಡುಕಾಟದಲ್ಲೇ ಇದ್ದಾರೆ. ಬಹುಶಃ ವರುಣಾ ಕ್ಷೇತ್ರದಿಂದಲೇ ಸ್ಪರ್ಧಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೂ ಇಂದಿನ ಸಭೆಗೆ ಅವರ ವಿರುದ್ಧ ಹೆಚ್ಚಿನ ಕಾರ್ಯಕರ್ತರು ಸೇರಿರುವುದನ್ನು ನೋಡಿದರೆ ಪಕ್ಷ ಸದೃಢವಾಗಿರುವುದು ಗೊತ್ತಾಗುತ್ತದೆ. ನಮಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಾಯಕರಿದ್ದಾರೆ. ಆದರೆ ಕ್ಷೇತ್ರದಲ್ಲಿ ನಾಯಕತ್ವದ ಕೊರತೆ ಇದೆ. ಪಕ್ಷ ಪ್ರಬಲವಾಗಿದೆ. ಕ್ಷೇತ್ರದಲ್ಲಿ ಎದುರಾಳಿಗೆ ಪ್ರಬಲ ಸ್ಪರ್ಧೆ ನೀಡಲು ಸಿದ್ಧತೆ ನಡೆದಿದೆ. ವ್ಯಕ್ತಿಯನ್ನು ಶಕ್ತಿಯಾಗಿಸುವ ಹುಮ್ಮಸ್ಸು ಮತ್ತು ಶಕ್ತಿ ಕಾರ್ಯಕರ್ತರಿಗಿದ್ದು ಅವರು ಮನಸ್ಸು ಮಾಡಿದರೆ ಯಾರೇ ಅಭ್ಯರ್ಥಿಯಾದರೂ ಗೆಲ್ಲಿಸಬಲ್ಲವರಾಗಿದ್ದಾರೆ. ಕ್ಷೇತ್ರದಲ್ಲಿ ನಾನೂ ಸಹ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಟಿಕೆಟ್ ದೊರಕದಿದ್ದಲ್ಲಿ ಹೈಕಮಾಂಡ್ ಯಾರಿಗೆ ಟಿಕೆಟ್ ನೀಡುತ್ತದೋ ಅವರ ಪರ ಪ್ರಾಮಾಣಿಕವಾಗಿ ಕೆಲಸ ಮಾಡಿ ಪಕ್ಷದ

> ಗುಜರಾತ್ ಚುನಾವಣಾ ಫಲಿತಾಂಶ ಕರ್ನಾಟಕ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದೆ. ಅಲ್ಲಿ 14 ಮಂದಿ ಮಹಿಳಾ ಅಭ್ಯರ್ಥಿಗಳಿಗೆ ಶಾಸಕರಾಗುವ ಅವಕಾಶವನ್ನು ಪ್ರಧಾನಿಯವರು ಕಲ್ಪಿಸಿಕೊಟ್ಟಿದ್ದಾರೆ. ಬುಡಕಟ್ಟು ಮಹಿಳೆಗೆ ರಾಷ್ಟ್ರಪತಿಯಾಗುವ ಅವಕಾಶ ಕಲ್ಪಿಸಿಕೊಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಲಾಗಿದೆ. ಹಾಗಾಗಿ ಇಲ್ಲಿ ಸ್ಥಳೀಯವಾಗಿ ಆಕಾಂಕ್ಷಿಗಳಾಗಿರುವ ಒಬ್ಬರನ್ನು ಅಭ್ಯರ್ಥಿಯನ್ನಾಗಿಸಲು ಹೈಕಮಾಂಡ್‌ಗೆ ಮನವಿ ಮಾಡೋಣ. ನಾನು ಸಹ ಆಕಾಂಕ್ಷಿಯಾಗಿರುವುದರಿಂದ ಮಹಿಳೆಗೆ ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡುತ್ತೇನೆ.
> - **ಮಮತಾ ಶಿವಪ್ರಸಾದ್**, ಜಿಪಂ ಮಾಜಿ ಸದಸ್ಯೆ ಹಾಗೂ ಟಿಕೆಟ್ ಆಕಾಂಕ್ಷಿ.

ಗೆಲುವಿಗೆ ಶ್ರಮಿಸುತ್ತೇನೆ ಎಂದು ತಿಳಿಸಿದರು.

ಸಭೆಯಲ್ಲಿ ಟಿಕೆಟ್ ಆಕಾಂಕ್ಷಿಗಳಾದ ಶರತ್ ಪುಟ್ಟಬುದ್ಧಿ, ಸುತ್ತೂರು ಚಿಕ್ಕಮಾದಪ್ಪ, ಕುಪ್ಪರವಳ್ಳಿ ಶಿವಣ್ಣ ತಮ್ಮ ಅಭಿಪ್ರಾಯ ಮಂಡಿಸಿದರು. ಕೆಲ ಕಾರ್ಯಕರ್ತರು ಸದಾನಂದ ಅವರೇ ಅಭ್ಯರ್ಥಿಯಾಗಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಪಿಎಸಿಸಿ ಅಧ್ಯಕ್ಷ ಬಿ.ವೀರಭದ್ರಪ್ಪ, ಕ್ಷೇತ್ರ ಬಿಜೆಪಿ ಮಾಜಿ ಅಧ್ಯಕ್ಷ ಎ.ಎನ್.ಶಿವಯ್ಯ, ಚೋರನಹಳ್ಳಿ ಗುರುಮೂರ್ತಿ, ಕೆಡಿಪಿ ಸಮಿತಿ ಸದಸ್ಯ ಮಿಥುನ್, ಪುರಸಭಾ ಸದಸ್ಯ ಗಣೇಶ್, ಬಾಲು, ತಾಪಂ ಸದಸ್ಯೆ ವೀಣಾ ಗುರುಮೂರ್ತಿ, ಗ್ರಾಪಂ ಸದಸ್ಯರಾದ ಕಾಹಳ್ಳಿ ರಾಜು, ಕಿರಗಸೂರು ಮಹದೇವಸ್ವಾಮಿ, ಹುಣಸೂರು ಶಿವರಾಜ್, ಎಡದೊರೆ ಭಗವಾನ್, ಡಿ.ಎಲ್.ಮಹದೇವಪ್ಪ, ಹದಿನಾರು ನಂಜುಂಡಸ್ವಾಮಿ, ಬಿದರಗೂಡು ಕುಮಾರ್, ತೋರಳ್ಳಿ ನಾಗೇಂದ್ರ, ಮಲ್ಲಿಪುರ ಮಹೇಶ್, ಅಳಗಂಚಿ ಗಿರೀಶ್, ತಾಂಡವಪುರ ಸಂದೀಪ್, ಮಹದೇವಪ್ಪ, ಗಿರೀಶ್, ಬಿಳಿಗೆರೆ ಸೋಮಣ್ಣ, ಕಾರ್ಯ ಕುಮಾರ್, ಮಾದಪ್ಪ, ಸಿ.ಎನ್.ಚಂದ್ರು, ರುದ್ರ, ರೇಣುಕಾಪ್ರಸಾದ್ ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ತ್ರಿಬಲ್ ರೈಡಿಂಗ್ (ಕ): ಬೆ.10.30ಕ್ಕೆ, ಸಲಾಂ ವೆಂಕಿ (ಹಿಂ): ಮ.1.30ಕ್ಕೆ, ರಾ.7.10ಕ್ಕೆ, ರಾ.9.55ಕ್ಕೆ, ಬಾಂಡ್ ರವಿ (ಕ): ಸಂ.4.10ಕ್ಕೆ.
ಸ್ಕ್ರೀನ್ 2	ಮೈಸೂರು ಡೈರಿಸ್ (ಕ): ಬೆ.11ಕ್ಕೆ, ರಾ.7.15ಕ್ಕೆ, ವರಲಾರು ಮುಕ್ಕಿಯಂ (ತ): ಮ.1.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಸಂ.4.15ಕ್ಕೆ, ಗುರುತುಂದ ಸೀತಾಕಾಲಂ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಿಜಯಾನಂದ (ಕ): ಬೆ.10.35ಕ್ಕೆ, ಸಂ.4ಕ್ಕೆ, ರಾ. 7ಕ್ಕೆ, ರಾ.10.10ಕ್ಕೆ, ಡಾ.56 (ಕ): ಮ.1.45ಕ್ಕೆ.
ಸ್ಕ್ರೀನ್ 4	ಗಂಧದ ಗುಡಿ (ಕ): ಬೆ.10.50ಕ್ಕೆ, ತ್ರಿಬಲ್ ರೈಡಿಂಗ್ (ಕ): ಮ.1ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.4ಕ್ಕೆ, ಕಾಂತಾರ (ಕ): ರಾ.7.05ಕ್ಕೆ, ಸೌದಿವೆಲ್ಲಕ್ಕ (ಮ): ರಾ.10ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಹಿಟ್: ದಿ ಸೆಕೆಂಡ್ ಕೇಸ್ (ತೆ): ಬೆ.11.10ಕ್ಕೆ, ಸಂ.4.50ಕ್ಕೆ, ಬಾಂಡ್ ರವಿ (ಕ): ಮ.1.45ಕ್ಕೆ, ಕಾಂತಾರ (ಕ): ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ವಿಜಯಾನಂದ (ಕ): ಬೆ.10.15ಕ್ಕೆ, ಮ.1.20ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಂಧದ ಗುಡಿ (ಕ): ಸಂ.4.35ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.11.10ಕ್ಕೆ, ಡಾ.56 (ಕ): ಮ.2.05ಕ್ಕೆ, ವಿಜಯಾನಂದ (ಕ): ಸಂ.4.25ಕ್ಕೆ, ಮೈಸೂರು ಡೈರಿಸ್ (ಕ): ರಾ.7.40ಕ್ಕೆ, ಪಂಚತಾರಂ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಗುರುತುಂದ ಸೀತಾಕಾಲಂ (ತೆ): ಬೆ.10.25ಕ್ಕೆ, ರಾ.7.20ಕ್ಕೆ, ನೈ ಸೇಕರ್ ರಿಟರ್ನ್ಸ್ (ತ): ಮ.1.15ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ವರಲಾಕು ಮುಕ್ಕಿಯಂ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ):

ಪಿವಿಆರ್ ಸಿನಿಮಾಸ್

ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ನಾನೇ ನರರಾಕ್ಷಸ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಿಹೈಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸುನಾಮಿ 143 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನೈ ಸೇಕರ್ ರಿಟರ್ನ್ಸ್ (ತ)	4 ಪ್ರದರ್ಶನಗಳು
ಸಂಗಂ	
ಡಾ.56 (ಕ)	4 ಪ್ರದರ್ಶನಗಳು
ಲಿಡೋ	
ವಿಜಯಾನಂದ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಂತಾರ (ಕ)	4 ಪ್ರದರ್ಶನಗಳು
ಪ್ರಭಾ	
ಮೈಸೂರು ಡೈರಿಸ್ (ಕ)	4 ಪ್ರದರ್ಶನಗಳು

ನಾಗರಹೊಳೆಯಲ್ಲಿ ಆನೆ ಸಾವು

ಹೆಚ್.ಡಿ.ಕೋಟೆ, ಡಿ.10– ಆನೆಗಳ ಕಾದಾಟದಲ್ಲಿ ತೀವ್ರ ಗಾಯಗೊಂಡಿದ್ದ ಆನೆ ಸಾವನ್ನಪ್ಪಿರುವ ಘಟನೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಡಿ.ಬಿ.ಕುಪ್ಪೆ ವನ್ಯಜೀವಿ ವಲಯದಲ್ಲಿ ನಡೆದಿದೆ.

ತಾಲೂಕಿನ ಡಿ.ಬಿ.ಕುಪ್ಪೆ ವನ್ಯಜೀವಿ ವಲಯದ ಸಿಬ್ಬಂದಿ ಗಸ್ತು ತಿರುಗುವ ವೇಳೆ ಕಾಡಾನೆ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಕೂಡಲೇ ಸಿಬ್ಬಂದಿಗಳು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದ್ದು, ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಪರಿಶೀಲಿಸಿದ ವೇಳೆ ಆನೆ ಕಳೇಬರದ ಮೇಲೆ ಗಾಯದ ಗುರುತು ಪತ್ತೆಯಾಗಿದೆ. ಅಲ್ಲದೇ ಮತ್ತೊಂದು ಆನೆಯೊಂದಿಗೆ ಕಾದಾಡಿ ತೀವ್ರ ಗಾಯಗೊಂಡು ಸಾವನ್ನಪ್ಪಿದೆ ಎಂದು ತಿಳಿದು ಬಂದಿದೆ.

ನಾಗರಹೊಳೆ ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ ಅವರ ಮಾರ್ಗದರ್ಶನದಲ್ಲಿ ಆನೆ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿ ಬೇರೆ ಪ್ರಾಣಿಗಳಿಗೆ ಆಹಾರವಾಗಲೆಂದು ಹಾಗೆಯೇ ಬಿಡಲಾಯಿತು.

ಸ್ಥಳದಲ್ಲಿ ಎಸಿಎಫ್ ರಂಗಸ್ವಾಮಿ, ಪಶುವೈದ್ಯ ಡಾ.ಬಿ.ಬಿ.ಪ್ರಸನ್ನ, ವಲಯ ಅರಣ್ಯಾಧಿಕಾರಿ ಕೆ.ಎಲ್.ಮಧು ಹಾಗೂ ಸಿಬ್ಬಂದಿ ಹಾಜರಿದ್ದರು.

ಸರಗೂರು ಅಭಿವೃದ್ಧಿಗೆ ಸರ್ಕಾರಕ್ಕೆ 500 ಕೋಟಿ ಪ್ರಸ್ತಾವನೆ ಸಲ್ಲಿಕೆ

ತಾಲೂಕು ಅಭಿವೃದ್ಧಿಗೆ ಹೆಚ್ಚಿನ ಒತ್ತು: ಶಾಸಕ ಅನಿಲ್ ಚಿಕ್ಕಮಾದು

ಸರಗೂರು, ಡಿ.10– ತಾಲೂಕಿನ ಅಭಿವೃದ್ಧಿಗೆ ಸರ್ಕಾರಕ್ಕೆ 500 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಿದ್ದೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಒಂದನೇ ಮುಖ್ಯರಸ್ತೆ ಹಾಗೂ 1ರಿಂದ 12 ವಾರ್ಡ್ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಪಟ್ಟಣದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಇಂದು ಅಮೃತ ನಗರೋತ್ಥಾನ ಯೋಜನೆಯಡಿ 4.25 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು, ಜನವರಿ ಅಂತ್ಯದೊಳಗೆ ಕಾಮಗಾರಿ ಮುಗಿಸುವಂತೆ ಗುತ್ತಿಗೆದಾರರು ಹಾಗೂ ಇಂಜಿನಿಯರ್‌ಗಳಿಗೆ ಸೂಚಿಸಿದರು.

ಪಟ್ಟಣದ ಅಭಿವೃದ್ಧಿಗೆ ಸರ್ಕಾರದಿಂದ ಪ್ರತಿ ವರ್ಷ 5 ಕೋಟಿ ರೂ. ಬರಬೇಕಿತ್ತು. ಆದರೆ ಕಳೆದ 3 ವರ್ಷಗಳಿಂದ ಬಂದಿಲ್ಲ. ಇದರಿಂದ ಪಟ್ಟಣದ ಅಭಿವೃದ್ಧಿ ಕುಂಠಿತವಾಗಿದೆ. ಸರ್ಕಾರದಿಂದ ಹಣ ಬಂದಿದ್ದರೇ ಪಟ್ಟಣ ಸಾಕಷ್ಟು ಅಭಿವೃದ್ಧಿಯಾಗುತ್ತಿತ್ತು.



ಕೋವಿಡ್ ಕಾರಣದಿಂದಾಗಿ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ ಎಂದರು.

ಪಟ್ಟಣದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ನೀರಾವರಿ ಇಲಾಖೆಗೆ ಸೇರಿದ 2.20 ಎಕರೆ ಜಮೀನು ನೀಡಲಾಗಿದ್ದು, 19 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಇದೇ ವೇಳೆ ದೇವರಾಜ ಬಡಾವಣೆ, ಪೌರ ಕಾರ್ಮಿಕರ ಕಾಲೋನಿ, ಡಾ.ಬಿ.ಆರ್.ಅಂಬೇಡ್ಕರ್ ಬೀದಿ, ಚಿಕ್ಕದೇವಮ್ಮ ವೃತ್ತ, ಚೌಡೇಶ್ವರಿ ಸಮುದಾಯ ಭವನ ರಸ್ತೆ, 1 ರಿಂದ 12ನೇ ವಾರ್ಡ್‌ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕರು ಭೂಮಿ ಪೂಜೆ ಮಾಡಿದರು.

ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್ ಮಾತನಾಡಿ, ಪಟ್ಟಣದ ಅಭಿವೃದ್ಧಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 5 ಕೋಟಿ ರೂ. ಅನುದಾನ ನೀಡಿದ್ದಾರೆ. ಹೀಗಾಗಿ ಪಟ್ಟಣದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕರು ಚಾಲನೆ ನೀಡಿದ್ದಾರೆ ಎಂದರು.

ಪಂಚಾಯಿತಿ ಸದಸ್ಯ ಶ್ರೀನಿವಾಸ್ ಮಾತನಾಡಿದರು. ಈ ವೇಳೆ ಪಡುವಲ ವಿರಕ್ತ ಮಠದ ಮಹದೇವಸ್ವಾಮಿ, ಭರತೇಶ್, ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯರಾದ ಹೇಮಾವತಿ, ಚೈತ್ರಾ, ಎಸ್.ಎಲ್.ರಾಜಣ್ಣ, ಸಣ್ಣತಾಯಮ್ಮ, ನೂರಾಳಸ್ವಾಮಿ, ಶಿವಕುಮಾರ್, ಶ್ರೀನಿವಾಸ್, ದಿವ್ಯಾ, ಚಲುವಕೃಷ್ಣ, ಎನ್.ಎಸ್.ಪ್ರತಾಪ್, ಎಸ್.ನಾರಾಯಣ್, ಎಸ್.ಆರ್.ರಂಗಸ್ವಾಮಿ, ಮುಖ್ಯಾಧಿಕಾರಿ ವಸಂತಕುಮಾರಿ, ಜಿಪಂ ಮಾಜಿ ಪಿ.ರವಿ, ಚಿಕ್ಕವೀರನಾಯಕ, ಭಾಗ್ಯಲಕ್ಷ್ಮೀ, ನವೀನ್, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ವಿನಯ್ ಗುರೂಜಿ, ಪಪಂ ಮಾಜಿ ಸದಸ್ಯರಾದ ರಮೇಶ್, ರಂಗನಾಥ್, ಎಸ್.ಎನ್.ನಾಗರಾಜು, ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಚಿಕ್ಕಣ್ಣ, ಬಸವರಾಜು, ಸುಬಾನ್, ಜಾವೇದ್, ಜಲೀಲ್ ಇತರರಿದ್ದರು.

ಹುಣಸೂರಿನ 277 ವಸತಿ ಪ್ರದೇಶಕ್ಕೆ ಕುಡಿಯುವ ನೀರು ಯೋಜನೆಗೆ ಸಂಪುಟ ಅಸ್ತು



ಹುಣಸೂರು ತಾಲೂಕಿನ ಬಹುಗ್ರಾಮಗಳಿಗೆ ಕುಡಿಯುವ ನೀರು ಕಲ್ಪಿಸುವ ಯೋಜನೆಗೆ ಸಂಪುಟದ ಅನುಮೋದನೆ ಕಲ್ಪಿಸಿಕೊಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಂಸದ ಪ್ರತಾಪ್‌ಸಿಂಹ ನವೆಂಬರ್ 18ರಂದು ಮನವಿ ಸಲ್ಲಿಸಿದ್ದರು.



> ನನ್ನ ಬಹುದಿನಗಳ ಕನಸು ಇಂದು ನನಸಾಗಿದೆ. ಜಲ ಜೀವನ್ ಯೋಜನೆಯಡಿ ತಾಲೂಕಿನ ಪ್ರತಿ ಗ್ರಾಮದ ಮನೆ ಮನೆಗೂ ಕುಡಿಯಲು ನೀರು ಪೂರೈಕೆ ಮಾಡಲಾಗುವುದು. ಈ ಯೋಜನೆ ಯಶಸ್ವಿಗೆ ಸಹಕರಿಸಿದ ಸಂಸದ ಪ್ರತಾಪ್ ಸಿಂಹ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ತಾಲೂಕಿನ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.
> -ಹೆಚ್.ಪಿ.ಮಂಜುನಾಥ್, ಶಾಸಕ.

ಹುಣಸೂರು, ಡಿ.10– ತಾಲೂಕಿನ ಬಾಚಹಳ್ಳಿ ಸೇರಿದಂತೆ 164 ಗ್ರಾಮಗಳ 277 ಜನವಸತಿ ಪ್ರದೇಶಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಶುದ್ಧ ನೀರು ಪೂರೈಸುವ 282 ಕೋಟಿ ರೂ. ವೆಚ್ಚದ ಕಾಮಗಾರಿಗೆ ಸಂಪುಟ ಅನುಮೋದನೆ ನೀಡಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಹುಣಸೂರು ತಾಲೂಕಿನಲ್ಲಿ 184 ಗ್ರಾಮಗಳಿದ್ದು, ಒಟ್ಟಾರೆ 310 ಜನವಸತಿ ಪ್ರದೇಶಗಳಿವೆ. ಇವುಗಳಿಗೆ ಜಲಜೀವನ್ ಮಿಷನ್ ಯೋಜನೆಯಡಿ ಪ್ರತಿ ಮನೆಗೆ ನಲ್ಲಿ ನೀರು ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ತಾಲೂಕಿನ 277 ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ ಕಾರ್ಯಗತಗೊಳಿಸಲು ಜಲಜೀವನ್ ಮಿಷನ್ ಯೋಜನೆಯಡಿ 282 ಕೋಟಿ ರೂ.ಗಳ ಅಂದಾಜು ಪಟ್ಟಿ ಸಿದ್ಧಪಡಿಸಲಾಗಿತ್ತು. ಸದರಿ ಯೋಜನೆಯನ್ನು 2024ನೇ ಸಾಲಿನ ಅಂತ್ಯದೊಳಗೆ ಪೂರ್ಣಗೊಳಿಸ ಬೇಕಾಗಿರುವುದರಿಂದ ಕ್ಯಾಬಿನೆಟ್‌ನಲ್ಲಿ ಮಂಡಿಸಿ ಅನುಮೋದನೆ ನೀಡುವಂತೆ ನಾನು ಹಲವು ಬಾರಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೆ.

ನನ್ನ ಮನವಿಯನ್ನು ಪುರಸ್ಕರಿಸಿ, ಕಳೆದ ಕ್ಯಾಬಿನೆಟ್ ಸಭೆಯಲ್ಲಿ ಮೈಸೂರು ತಾಲೂಕಿನ ಹಳೆ ಉಂಡವಾಡಿಯ ಕಾವೇರಿ ಮೂಲದಿಂದ ಹುಣಸೂರು ತಾಲೂಕಿನ ಬಾಚಹಳ್ಳಿ ಸೇರಿದಂತೆ 164 ಗ್ರಾಮಗಳ 277 ಜನವಸತಿ ಪ್ರದೇಶಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ನೀರು ಪೂರೈಸುವ 282 ಕೋಟಿ ವೆಚ್ಚದ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. ಇದಕ್ಕಾಗಿ ಹುಣಸೂರು ಜನತೆ ಪರವಾಗಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್‌ಗೆ ಅವರನ್ನು ಅಭಿನಂದಿಸುವುದಾಗಿ ಪ್ರತಾಪ್ ಸಿಂಹ ತಿಳಿಸಿದ್ದಾರೆ





ತಿ.ನರಸೀಪುರ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ನೀಡುವಂತೆ ಮನವಿ

ತಿ.ನರಸೀಪುರ, ಡಿ.10– ತಿ.ನರಸೀಪುರ ಮೀಸಲು ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಲ್ಲಿ ಒಬ್ಬಳಾಗಿರುವ ನನಗೆ ವರಿಷ್ಠರು ಟಿಕೆಟ್ ನೀಡಿ ಜನಸೇವೆ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಯಶೋಧ ಮನವಿ ಮಾಡಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 17 ವರ್ಷಗಳಿಂದ ಬಿಜೆಪಿ ಸಕ್ರಿಯ ಕಾರ್ಯಕರ್ತೆಯಾಗಿರುವ ನಾನು, ಮೈಸೂರು ನಗರ ಪಾಲಿಕೆ ಸದಸ್ಯೆಯಾಗಿ ಜನಸೇವೆ ಮಾಡಿದ್ದೇನೆ. ಈ ಹಿಂದೆ ಕ್ಷೇತ್ರ ಪುನರ್‌ವಿಂಗಡಣೆ ಪೂರ್ವದಲ್ಲಿ ವಿ.ಸುನೀತಾ ವೀರಪ್ಪಗೌಡರು ಮಾತ್ರ ಕ್ಷೇತ್ರ ಪ್ರತಿನಿಧಿಸಿದ ಏಕೈಕ ಮಹಿಳೆಯಾಗಿದ್ದು, ಈಗ ಮಹಿಳೆಯಾದ ನನಗೆ ಟಿಕೆಟ್ ನೀಡಿ ಮತ್ತೊಮ್ಮೆ ಮಹಿಳೆ ಕ್ಷೇತ್ರ ಪ್ರತಿನಿಧಿಸುವಂತೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು.



ನಾನು ಮೂಲತಃ ಕೈಯಂಬಳ್ಳಿ ಗ್ರಾಮದವಳಾಗಿದ್ದು, ತಿ.ನರಸೀಪುರ ನನ್ನ ತವರು ಮನೆ ಇದ್ದಂತೆ. ಬಿಜೆಪಿ ವರಿಷ್ಠರು ನನ್ನ ಸಂಪರ್ಕದಲ್ಲಿದ್ದು, ವಾಟಾಳು ಶ್ರೀಗಳ ಆಶೀರ್ವಾದ ಪಡೆದು ಕ್ಷೇತ್ರದ ಜನತೆ ಮನೆ ಬಾಗಿಲಿಗೆ ತೆರಳಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಲಾಗುವುದು ಎಂದರು.

ಸಾಮಾಜಿಕ ನ್ಯಾಯದಡಿ ಪ್ರಧಾನಿ ಮೋದಿ ಸೇರಿದಂತೆ ಮಾಜಿ ಸಿಎಂ ಯಡಿಯೂರಪ್ಪ, ಸಿಎಂ ಬೊಮ್ಮಾಯಿ ಮಹಿಳಾ ಕೋಟಾದಡಿ ನನಗೆ ಅವಕಾಶ ಕಲ್ಪಿಸುತ್ತಾರೆಂಬ ವಿಶ್ವಾಸವಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಹೇಶ್ವರಿ, ಶಾಂತಮ್ಮ, ಮಂಗಳಮ್ಮ, ಮಹದೇವಮ್ಮ, ರಾಣಿ, ಪ್ರಭುಸ್ವಾಮಿ, ಪ್ರಕಾಶ್, ಲಿಂಗಯ್ಯ ಮತ್ತಿತರರಿದ್ದರು.

ನನ್ನ ಅವಧಿಯಲ್ಲಿ ಶಾಶ್ವತ ಯೋಜನೆಗಳು ಜಾರಿ

ಹಾಲಿ ಶಾಸಕರ ಸಾಧನೆ ಶೂನ್ಯ: ಮಾಜಿ ಶಾಸಕ ಕೆ.ವೆಂಕಟೇಶ್

ಬೆಟ್ಟದಪುರ, ಡಿ.10– ಹಾಲಿ ಶಾಸಕರು ತಾಲೂಕಿನಲ್ಲಿ ಯಾವುದೇ ಶಾಶ್ವತ ಯೋಜನೆ ಮಾಡಿಲ್ಲ. ನನ್ನ ಅಧಿಕಾರವಧಿಯಲ್ಲಿ ಹೆಚ್ಚು ಶಾಶ್ವತ ಯೋಜನೆಗಳನ್ನು ಮಾಡಲಾಗಿದೆ ಎಂದು ಮಾಜಿ ಶಾಸಕ ಕೆ.ವೆಂಕಟೇಶ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಅಂಬಲಾರೆ ಗ್ರಾಮದಲ್ಲಿ ಆಯೋಜಿಸಿದ್ದ ನೂತನ ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್ ಅವರ ಅಭಿನಂದನಾ ಸಮಾರಂಭ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿ ಮಾಡುವುದೇ ದೊಡ್ಡ ಸಾಧನೆ ಅಲ್ಲ. ಹಾಲಿ ಶಾಸಕರ ಸಾಧನೆ ಶೂನ್ಯ. ತಾಲೂಕಿನ ಜನರ ಮನಸ್ಸಲ್ಲಿ ಉಳಿಯುವಂತಹ ಶಾಶ್ವತ ಯೋಜನೆ ಜಾರಿಗೆ ತರಬೇಕು. ನನ್ನ ಅವಧಿಯಲ್ಲಿ ಕರಡಿಲಕ್ಕನಕೆರೆ ಏತ ನೀರಾವರಿ ಯೋಜನೆ, ಪಿರಿಯಾಪಟ್ಟಣಕ್ಕೆ ಕಾವೇರಿ ನದಿಯಿಂದ ಶುದ್ಧ ಕುಡಿಯುವ ನೀರಿನ ಯೋಜನೆ, ಬಸ್ ಡಿಪೋ, ಕನಕ ಭವನ, ವಾಲ್ಮೀಕಿ ಭವನ, ಅಂಬೇಡ್ಕರ್ ಭವನ, ಅಗ್ನಿಶಾಮಕ ಠಾಣೆ ಹಾಗೂ ಬೆಟ್ಟದಪುರ ಭಾಗಕ್ಕೆ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ನಾನಾ ಯೋಜನೆಗಳನ್ನು



ತಂದು ತಾಲೂಕನ್ನು ಅಭಿವೃದ್ಧಿಪಡಿಸಿದ್ದೇನೆ. ಆದರೆ ಹಾಲಿ ಶಾಸಕರು ಈ ಎಲ್ಲಾ ಯೋಜನೆಗಳನ್ನು ನಾನು ಮಾಡಿರುವುದು ಎಂದು ಸುಳ್ಳು ಹೇಳಿಕೊಂಡು ಕ್ಷೇತ್ರದಲ್ಲಿ ಓಡಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ. ನಾನು ಚುನಾವಣೆಯಲ್ಲಿ ಗೆದ್ದು ಮಂತ್ರಿ ಆಗುತ್ತೇನೆ. ತಾಲೂಕಿಗೆ ಏನೇನು ಶಾಶ್ವತ ಯೋಜನೆಗಳನ್ನು ತರಬೇಕು ಅಂತ ಯೋಚಿಸಿದ್ದೇನೆ. ಇವೆಲ್ಲ ಆಗಬೇಕು ಎಂದರೆ ತಾಲೂಕಿನ ಎಲ್ಲಾ ಸಮಾಜದವರು ಒಗ್ಗಟ್ಟಾಗಿ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು ಎಂದರು.

ಜೆಡಿಎಸ್ ಪಕ್ಷ ಎರಡು ಮೂರು ಜಿಲ್ಲೆಗಳಿಗೆ ಸೀಮಿತವಾದ ಪಕ್ಷ. ಅಲ್ಲದೆ ಒಂದೇ ಕುಟುಂಬಕ್ಕೆ ಸೇರಿದ ಪಕ್ಷ ಅವರಿಗೆ ಅನುಕೂಲವಾಗುವಂತೆ ಚುನಾವಣೆ ಮಾಡಿಕೊಳ್ಳುತ್ತಾರೆ. ಆದ್ದರಿಂದ ಮುಂದಿನ ದಿನಗಳಲ್ಲಿ ಜೆಡಿಎಸ್ ಪಕ್ಷಕ್ಕೆ ಭವಿಷ್ಯವಿಲ್ಲ ಎಂದರು.

ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಗೆದ್ದು ಅಧಿಕಾರ ನಡೆಸುತ್ತಿರುವ ಬಿಜೆಪಿ ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸಿಲ್ಲ. ಆದ್ದರಿಂದ ಮುಂದಿನ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ನೂರಕ್ಕೆ ನೂರರಷ್ಟು ಸತ್ಯ ಎಂದರು.

ತಾಲೂಕು ಕುರುಬ ಸಮಾಜದ ಅಧ್ಯಕ್ಷ ಹೆಚ್.ಡಿ.ಗಣೇಶ್ ಮಾತನಾಡಿ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಕೆ.ವೆಂಕಟೇಶ್ ಅವರು ತಾಲೂಕಿಗೆ 2600 ಕೋಟಿ ರೂ. ಬಿಡುಗಡೆ ಮಾಡಿಸಿದ್ದರು. ಮುಂದಿನ ಚುನಾವಣೆಯಲ್ಲಿ ಕೆ.ವೆಂಕಟೇಶ್ ಅವರನ್ನು ಬೆಂಬಲಿಸಿದರೆ ತಾಲೂಕಿಗೆ ನಾಲ್ಕು ಸಾವಿರ ಕೋಟಿ ಹಣ ಬಿಡುಗಡೆ ಮಾಡಿಸುವ ಶಕ್ತಿ ಅವರಿಗಿದೆ ಎಂದರು.

ಈ ವೇಳೆ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ಮಾತನಾಡಿದರು. ಇದಕ್ಕೂ ಮುನ್ನ ಗೋರಹಳ್ಳಿ, ಚಪ್ಪರದಹಳ್ಳಿ, ಹಾರನಹಳ್ಳಿ ಮಾರ್ಗವಾಗಿ ನೂರಾರು ಬೈಕ್‌ಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ನಿತಿನ್ ವೆಂಕಟೇಶ್, ಮಾಜಿ ಶಾಸಕ ವೆಂಕಟೇಶ್, ಕಾಂಗ್ರೆಸ್ ಮುಖಂಡರನ್ನು ಬೃಹತ್ ಮೆರವಣಿಗೆ ಮಾಡಿದರು.

ರೈಲಿಗೆ ಸಿಲುಕಿ ವ್ಯಕ್ತಿ ಸಾವು

ನಂಜನಗೂಡು, ಡಿ.10– ಜೀವನದಲ್ಲಿ ಜಿಗುಪ್ಸೆಗೊಂಡ ವ್ಯಕ್ತಿಯೋರ್ವ ಚಾಮರಾಜನಗರ–ಮೈಸೂರು ಪ್ಯಾಸೆಂಜರ್ ರೈಲಿಗೆ ಸಿಲುಕಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಕವಲಂದೆ ರೈಲು ನಿಲ್ದಾಣದ ಬಳಿ ನಡೆದಿದೆ. ಗುಂಡ್ಲುಪೇಟೆ ತಾಲೂಕಿನ ವೀರನಪುರ ಗ್ರಾಮದ ನಿವಾಸಿ ಆರ್.ಸುಂದರನ್ ಎಂಬುವರ ಪುತ್ರ ಆನಂದಬಾಬು (40) ಮೃತಪಟ್ಟವರು. ಮರಣೋತ್ತರ ಪರೀಕ್ಷೆ ನಂತರ ಶವವನ್ನು ವಾರಸುದಾರರಿಗೆ ಒಪ್ಪಿಸಲಾಯಿತು ಎಂದು ನಂಜನಗೂಡು ರೈಲ್ವೆ ಪೊಲೀಸರು ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ರೈಲ್ವೆ ಪೊಲೀಸ್ ಠಾಣೆ ಎಸ್‌ಐ ಶ್ರೀನಿವಾಸಮೂರ್ತಿ, ಸಿಬ್ಬಂದಿಗಳಾದ ಸಾಗರ್, ಮಹದೇವಸ್ವಾಮಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ನಂಜನಗೂಡು ರೈಲ್ವೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಗಂಗನಕುಪ್ಪೆಯಲ್ಲಿ ಚಿರತೆ ಪ್ರತ್ಯಕ್ಷ: ಆತಂಕ

ಬೆಟ್ಟದಪುರ, ಡಿ.10– ಇಲ್ಲಿಗೆ ಸಮೀಪದ ಗಂಗನಕುಪ್ಪೆ ಗ್ರಾಮದ ಹೊರವಲಯದಲ್ಲಿ ಕಳೆದ 3 ದಿನಗಳಿಂದ ಚಿರತೆ ಕಾಣಿಸಿಕೊಳ್ಳುತ್ತಿದ್ದು, ಈ ವ್ಯಾಪ್ತಿಯ ಗ್ರಾಮಸ್ಥರು ಹಾಗೂ ರೈತರು ಆತಂಕಗೊಂಡಿದ್ದಾರೆ. ಚಿರತೆ ಪ್ರತ್ಯಕ್ಷ ಹಿನ್ನೆಲೆಯಲ್ಲಿ ರೈತರು ತಮ್ಮ ಜಮೀನುಗಳಿಗೆ ಹೋಗುವುದನ್ನೇ ನಿಲ್ಲಿಸಿದ್ದಾರೆ. ಹೀಗಾಗಿ ಅರಣ್ಯ ಇಲಾಖೆ ಬೋನ್ ಇಡುವ ಮೂಲಕ ಚಿರತೆ ಸೆರೆಗೆ ಅಗತ್ಯ ಕ್ರಮ ವಹಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸ್ವಾಮಿಗೌಡ ನಿಧನ



ಹಿರೀಕ್ಯಾತನಹಳ್ಳಿ, ಡಿ.10– ಗ್ರಾಮದ ನಿವಾಸಿ ಹಾಗೂ ಎಲ್‌ಐಸಿ ಏಜೆಂಟ್ ಪಿ.ಸ್ವಾಮಿಗೌಡ(62) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾನವ ಹಕ್ಕುಗಳಿಂದ ವಂಚಿತರಾದವರಿಗೆ ನ್ಯಾಯ ಕಲ್ಪಿಸಿ

ವಿದ್ಯಾವಂತ ಸಮುದಾಯಕ್ಕೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಾನವ ಹಕ್ಕುಗಳ ದಿನಾಚರಣೆಯನ್ನು ಜಿಲ್ಲಾಧಿಕಾರಿ ಡಾ.ಕೆ.ರಾಜೇಂದ್ರ ಉದ್ಘಾಟಿಸಿದರು. ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಇತರರು ಚಿತ್ರದಲ್ಲಿದ್ದಾರೆ.

ಮೈಸೂರು,ಡಿ.10(ಪಿಎಂ)– ವಿದ್ಯಾವಂತರು ತಮ್ಮ ಜ್ಞಾನದ ಮೂಲಕ ಮಾನವ ಹಕ್ಕುಗಳಿಂದ ವಂಚಿತರಾದವರಿಗೆ ನ್ಯಾಯ ದೊರಕಿಸಿಕೊಡಬೇಕು. ಆ ಮೂಲಕ ಮಾನವ ಹಕ್ಕುಗಳನ್ನು ಎತ್ತಿಹಿಡಿಯಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹೇಳಿದರು.

ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಾನವ ಹಕ್ಕುಗಳ ದಿನಾಚರಣೆ–2022 ಅನ್ನು ಉದ್ಘಾಟಿಸಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ರಚಿಸುವ ಸಂದರ್ಭದಲ್ಲಿ ಆಳವಾದ ಅಧ್ಯಯನ ನಡೆಸಿದ್ದರು. ಆ ಮೂಲಕ ಸಂವಿಧಾನದಲ್ಲಿ ಮಾನವ ಹಕ್ಕುಗಳನ್ನು ಎತ್ತಿಹಿಡಿದಿದ್ದಾರೆ. ವಿದ್ಯಾವಂತರು ತಮ್ಮ ಜ್ಞಾನದ ಮೂಲಕ ಹಕ್ಕುಗಳಿಂದ ವಂಚಿತರಾದ ಜನತೆಗೆ ನ್ಯಾಯ ದೊರಕಿಸಿಕೊಡಬೇಕು ಎಂದು ತಿಳಿಸಿದರು.

ಮಾನವ ಹಕ್ಕುಗಳಿಂದ ವಂಚಿತರಾದ ಜನತೆಗೆ ನ್ಯಾಯ ದೊರಕಿಸಿಕೊಟ್ಟು ಅವರ ಬದುಕಿನ ಘನತೆ ಎತ್ತಿಹಿಡಿಯುವ ಹೊಣೆಗಾರಿಕೆ ವಿದ್ಯಾವಂತರಾದ ನಮ್ಮೆಲ್ಲರ ಮೇಲಿದೆ. ನಮ್ಮೆಲ್ಲರ ಹಕ್ಕುಗಳು ಸಂರಕ್ಷಣೆಯಲ್ಲಿದ್ದು, ಬಹುತೇಕ ಎಲ್ಲಾ ಸವಲತ್ತು ಹೊಂದಿದ್ದೇವೆ. ನಾವು ಸಂವಿಧಾನದಲ್ಲಿನ ಹಕ್ಕುಗಳ ಬಗ್ಗೆ ಅರಿತುಕೊಂಡಿದ್ದೇವೆ. ನಮ್ಮ ಈ ಜ್ಞಾನ ಸದ್ಬಳಕೆಯಾಗಬೇಕು. ಅದಕ್ಕಾಗಿ ತುಳಿತಕ್ಕೆ ಒಳಗಾದವರ ರಕ್ಷಣೆಗೆ ನಾವು ಧಾವಿಸಬೇಕು. ನಿಮ್ಮ ಜ್ಞಾನ ಶೋಷಿತರ ಸಹಾಯಕ್ಕೆ ಬಳಕೆಯಾಗಬೇಕು ಎಂದರು.

ಮೈಸೂರು ವಿವಿ ರಾಜ್ಯಶಾಸ್ತ್ರ ನಿವೃತ್ತ ಪ್ರಾಧ್ಯಾಪಕ ಡಾ.ರಾಜಶೇಖರ 'ಮಾನವ ಹಕ್ಕುಗಳ' ಬಗ್ಗೆ ಉಪನ್ಯಾಸ ನೀಡಿದರು. ಬಳಿಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಕತ್ವದಲ್ಲಿ ಮಹಾಬೆಳಕು ವತಿಯಿಂದ ಮಾನವ ಹಕ್ಕುಗಳ ಕುರಿತ ಕಿರುನಾಟಕ ಪ್ರದರ್ಶಿಸಲಾಯಿತು. ಮಹಾಬೆಳಕು ತಂಡದ ಅಧ್ಯಕ್ಷೆ ಕಾತ್ಯಾಯಿನಿ ಯಶೋಮಿತ್ರ ನೇತೃತ್ವದಲ್ಲಿ 8 ಮಂದಿ ಕಲಾವಿದರ ತಂಡದಿಂದ ಮಹಿಳಾ ದೌರ್ಜನ್ಯ, ಲೈಂಗಿಕ ಕಿರುಕುಳ, ಬಾಲಕಾರ್ಮಿಕ ಪದ್ಧತಿ ಸೇರಿದಂತೆ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ನಾಟಕದಲ್ಲಿ ಅನಾವರಣ ಮಾಡಲಾಯಿತು. ಆ ಮೂಲಕ ಮಾನವ ಹಕ್ಕುಗಳ ರಕ್ಷಣೆ ಮಹತ್ವವನ್ನು ಎತ್ತಿಹಿಡಿಯಲಾಯಿತು. ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್, ಎಸ್‌ಪಿ ಆರ್.ಚೇತನ್, ಕಾಲೇಜಿನ ಸಿಇಓ ಪ್ರೊ.ಕೆ.ಎಸ್.ಸುರೇಶ್, ಪ್ರಾಂಶುಪಾಲ ಡಾ.ಎಸ್.ನಟರಾಜು ಮತ್ತಿತರರು ಹಾಜರಿದ್ದರು.

ಅಂತಿಮ ಏಕದಿನ ಪಂದ್ಯದಲ್ಲಿ ಭಾರತಕ್ಕೆ ಭರ್ಜರಿ ಜಯ; ಬಾಂಗ್ಲಾಗೆ 2–1 ಸರಣಿ ಜಯ

ಚಿತ್ತಗಾಂಗ್, ಡಿ.10– ಮೂರನೇ ಏಕದಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಭಾರತ ತಂಡ 227 ರನ್‌ಗಳಿಂದ ಮಣಿಸಿದ್ದು, 3 ಪಂದ್ಯಗಳ ಏಕದಿನ ಸರಣಿಯನ್ನು ಬಾಂಗ್ಲಾದೇಶ 2–1 ಅಂತರದಲ್ಲಿ ಕೈವಶ ಮಾಡಿಕೊಂಡಿದೆ.

ಭಾರತ ನೀಡಿದ 410 ರನ್‌ಗಳ ಬೃಹತ್ ಗುರಿ ಬೆನ್ನು ಹತ್ತಿದ ಬಾಂಗ್ಲಾದೇಶ ತಂಡ 34 ಓವರ್‌ಗಳಲ್ಲಿ 182 ರನ್‌ಗಳಿಗೆ ಆಲೌಟ್ ಆಯಿತು. ಆ ಮೂಲಕ 227 ರನ್‌ಗಳ ಅಂತರದಲ್ಲಿ ಭರ್ಜರಿ ಜಯ ಸಾಧಿಸಿದೆ. ಈ ಪಂದ್ಯದ ಜಯದ ಹೊರತಾಗಿಯೂ 3 ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ 2–1 ಅಂತರದಲ್ಲಿ ಸರಣಿ ಸೋಲು ಕಂಡಿದೆ. ಇಂದಿನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 409 ರನ್ ಗಳಿಸಿತು. ಇಶಾನ್ ಕಿಶನ್ ಅವರು ದ್ವಿಶತಕ (210) ಸಿಡಿಸಿದರೆ, ಕೊಹ್ಲಿ ಶತಕ (113) ಗಳಿಸಿದರು. ಬೃಹತ್ ಗುರಿ ಬೆನ್ನು ಹತ್ತಿದ ಬಾಂಗ್ಲಾ ಪಡೆ 34 ಓವರ್‌ಗಳಲ್ಲಿ 182 ರನ್‌ಗಳಿಗೆ ಸರ್ವಪತನ ಕಂಡಿತು. ಬಾಂಗ್ಲಾಪರ ಶಕೀಬ್ ಅಲ್ ಹಸನ್ 43 ರನ್ ಗಳಿಸಿದರೆ, ನಾಯಕ ಲಿಟನ್ ದಾಸ್ 29ರನ್, ಯಾಸಿರ್ ಅಲಿ 25 ಮತ್ತು ಮಹಮದುಲ್ಲಾ 20 ರನ್ ಗಳಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005


ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–3:44:2022–23 ದಿನಾಂಕ:

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ

ಮೈಸೂರು ತಾಲ್ಲೋಕು, ಇಲವಾಲ ಹೋಬಳಿ, ಇಲವಾಲ ಗ್ರಾಮದ ಸರ್ವೆ ನಂ. 121ರ 01 ಎಕರೆ 25ಗುಂಟೆ ಮತ್ತು 122/2ರ 03 ಎಕರೆ 37 ಗುಂಟೆ ಒಟ್ಟು **05 ಎಕರೆ 22 ಗುಂಟೆ** ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ **ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ** ಭೂ ಉಪಯೋಗ ಬದಲಾವಣೆ ಮಾಡುವಂತೆ **ಶ್ರೀ ಬಿ.ಎಸ್.ನಾಗೇಂದ್ರ ಮತ್ತು ಬಿ.ಎಸ್.ಗೋಪಾಲಕೃಷ್ಣ** ಇವರುಗಳು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **" ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸಿರುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ"** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗೆ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570 005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು